ಇನ್ನು ಹಳ್ಳಿಯಲ್ಲಿ ರೈತನಿಗೆ ಮದುವೆಗೆ, ಮತ್ತೊಂದಕ್ಕೆ ದುಡ್ಡು ಕೊಡುವುದಿಲ್ಲ ಹಿಂದೆ ವರ್ತಕರು ರೈತನಿಗೆ ಸಹಾಯ ಮಾಡುತ್ತಿದ್ದರು. ನಿನ್ನೆಯವರೆಗೆ ದುಡ್ಡು ಕೊಡುತ್ತಿದ್ದರು. ನಾಳೆಯಿಂದ ಕೊಡುವುದಿಲ್ಲ ಎನ್ನವ ಸ್ವಾರ್ಥಿಗಳಾಗುತ್ತಾರೆಂದು ಹೇಳುತ್ತಾರೆ. ಆದರೆ ಅವರು ಬಡವರು ಆಗಿರುವುದಕ್ಕೆ ನಾನೇ ಕಾರಣ. ಆದುದರಿಂದ ನನ್ನ ಹತ್ತಿರ ಇರುವ ದುಡ್ಡಿನಲ್ಲಿ ಅವರಿಗೆ ಸಹಾಯ ಮಾಡಿ ಅವರ ಹಣವನ್ನು ಅವರಿಗೆ ಪಾನೆಸ್ಟಾಗಿ ವಾಪಸ್ಸು ಕೊಡುತ್ತೇನೆಂದು ಫಿಲಿಂಗು ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ಸಮಾಜಕ್ಕೆ ತಿಳುವಳಿಕೆ ಉಂಟುಮಾಡಿ ಬದಲಾವಣೆ ತಂದುಕೊಳ್ಳಬೇಕಾಗುತ್ತದೆ. ರೈತರಿಗೆ ಇದರಿಂದ ಹೆಚ್ಚಿಗೆ ಅನುಕೂಲ ಮಾಡಿಕೊಡುತ್ತಾ ಇಲ್ಲ. ರೈತ ವರ್ಗಕ್ಕೆ ಅನ್ಯಾಯ ಮಾಡುವುದಕ್ಕೆ ಹೋದರೆ, ಈ ಕಾಯಿದೆ ರಕ್ಷಣೆ ಕೊಡುತ್ತದೆ. ಈ ಕಾಯಿದೆಯಲ್ಲಿ ಕೊಟ್ಟ ಸೌಲಭ್ಯ ಏನಂದರೆ, ಸುಪ್ರೀಂ ಕೋರ್ಟ್‌ನಲ್ಲಿ ಮೈಸೂರು ಸರ್ಕಾರದವರು ಫೈಲು ಮಾಡಿದ ಅಪೀಲು ನಿರ್ಣಯ ಆಗುವವರೆಗೆ ಕೋರ್ಟ್‌ನಲ್ಲಿ ಇಷ್ಟು ಪೆಂಡಿಂಗ್ ಡಿಕ್ರೀಸಿಗೆ ಒಂದು ಸ್ಟೇ ೨ ವರ್ಷದ ವರೆಗೆ ರೈತಾಪಿ ಜನಕ್ಕೆ ಕೊಟ್ಟಿದ್ದಾರೆ. ಇದಕ್ಕೆ ಹೆದರಬೇಕಾಗಿಲ್ಲ. ಇದು ಏನೂ ದೊಡ್ಡ ಭೂತ ಅಲ್ಲ. ಇದು ಒಳ್ಳೆಯ ಕಾಯಿದೆ, ೨ ವರ್ಷದವರೆಗೆ ರಕ್ಷಣೆ ಕೊಡುವ ಸಣ್ಣ ಕಾಯಿದೆ ಇದು. ಇದರ ಬಗ್ಗೆ ಯಾರೂ ಕೂಡ ಸಂಶಯ ದೃಷ್ಟಿಯನ್ನು ತಂದುಕೊಳ್ಳಬೇಕಾಗಿಲ್ಲ. ಎರಡನೆಯದಾಗಿ, ಇದು ಡಿಫೆಕ್ಟೀವ್ ಲೆಜಿಸ್ಲೇಷನ್ ಇದೆ. ಅರ್ಧ ಮನಸ್ಸಿನಿಂದ ಕಾಯಿದೆ ತರುತ್ತಾ ಇದ್ದಾರೆ. ೫ ನಿಮಿಷದಲ್ಲಿ ಪಾಸ್‌ಮಾಡಿ ಕಾಯಿದೆ ಮಾಡೋಣ ಎಂದು ಹೇಳಿ ಏನು ಬರೆಯಬೇಕೋ ಅದನ್ನು ಬರೆದು ಕಳುಹಿಸುತ್ತಿದ್ದಾರೆ ಎಂದು ಹೇಳಿದರು. ಹೈಕೋರ್ಟ್‌ನಲ್ಲಿ ಮೂರ್ನಾಡು ಆಗುತ್ತಿದೆ ಎಂದು ತಿಳಿದುಕೊಳ್ಳಬೇಕು. ಇದು ಎರಡನೆಯದು ಮೂರನೆಯದಾಗಿ, ಇವತ್ತಿನ ದಿವಸ ಸಮಾಜ ಯಾವ ದಾರಿಯಲ್ಲಿ ಹೋಗಬೇಕೋ ಆ ದಾರಿಯಲ್ಲಿ ಜುಡಿಶಿಯರಿ ಹೋಗದಿದ್ದರೆ ಅದು ಬದುಕಲಾರದು. ಸ್ವಲ್ಪ ಹಿಂದು ಮುಂದು ನೋಡುತ್ತಿದೆ. ಜುಡಿಶಿಯರಿಯಲ್ಲಿ ಲೆಜಿಸ್ಲೇಚರ್‌ನಲ್ಲಿ ಪಾಸ್ ಮಾಡಿದ

ಕಾಯಿದೆಗೆ ಮನ್ನಣೆ ಕೊಡದೆ ಕಾಯಿದೆಯನ್ನು ರೀಪಿಲ್ ಮಾಡಿದ್ದಾರೆ. ಈ ಕಾಯಿದೆಗೆ ಜೀವ ಇಲ್ಲ. ಇದು ಕಂಪ್ಲೀಟ್‌ಲಿ ವಾಯ್ಡ್ ಇದೆ. ಅಲ್ಟ್ರಾವೈರಿಸ್ ಇದೆ ಎಂದು ಡಿಕ್ಲೇರ್ ಮಾಡಿದ ಮೇಲೆ ಮತ್ತೊಂದು ಹೊಸ ಕಾಯಿದೆ ಬರಬೇಕಾಗುತ್ತದೆ. ಆ ಥಾಟಿಯಲ್ಲಿ ನನ್ನ ಮಿತ್ರರು ಸ್ವಾಗತ ಅಂತ ಹೇಳಿದರು. ಇದಕ್ಕೂ ಕೂಡ ಕೆಲವು ಟೀಕೆಗಳು ಬಂದಿವೆ. ಇದು ರೈತ ಜೀವಿಗಳಿಗೆ ಸಹಾಯ ಮಾಡುವ ಸಣ್ಣ ಕಾಯಿದೆ ಇದ್ದರೂ ವೆಸ್ಟೆಡ್ ಇಂಟರೆಸ್ಟ್ ಏನು ಇದ್ದಾರೆ, ಸಾಲಗಾರರು ಏನು ಇದ್ದಾರೆ, ಅವರು ರೈತನ ರಕ್ತ ಕುಡಿದು ರಾಕ್ಷಸರಾಗಿದ್ದಾರೆ. ಕೆಲವರು ರೈತರಿಗೆ ಸಹಾಯ ಮಾಡಿರಬಹುದು. ಆದರೆ ಲಕ್ಷಾವಧಿ ರೈತರು ನರಳಾಡುತ್ತಿದ್ದಾರೆ. ಯಾಕಯ್ಯಾ ತಂದೆ ಸಾಯುತ್ತಾ ಇರುವಾಗ ೪ ಎಕರೆ ಜಮೀನು ಬಿಟ್ಟು ಹೋಗಿದ್ದರು ಏನಾಯಿತು ಎಂದು ಕೇಳಿದಾಗ, ತಂದೆ ಮದುವೆ ಮಾಡಿದಾಗ ಮಾಡಿದ ಸಾಲ ತೀರಿಸುವುದಕ್ಕೆ ಆಗಲಿಲ್ಲ, ಒಂದು ವರ್ಷ ಕ್ಷಾಮ ಬಂದು, ಊಟಕ್ಕೂ ಏನೂ ಇರಲಿಲ್ಲ. ೨,೦೦೦ ರೂಪಾಯಿ ಸಾಲ ಮಾಡಿದೆ, ೪ ಎಕರೆ ಜಮೀನು ಕಳೆದುಕೊಂಡು ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಇಂತಹ ಸ್ಥಿತಿ ಇರುವಾಗ, ಸಮಾಜವಾದದಲ್ಲಿ ಬದಲಾವಣೆ ಆಗಲಿ ಎಂದು ಹೇಳುತ್ತೀನೆ. ನಮ್ಮ ದೇಶದಲ್ಲಿ ೭೫ ಪರ್ಸೆಂಟ್ ಪಾಪಲೇಷನ್ ರೈತ ಜನಾಂಗ ಇದೆ. ಚಿತ್ರಹಿಂಸೆಗೆ ಗುರಿಯಾಗಿರುವ ರೈತ ಜನಾಂಗದ ಬಗ್ಗೆ ಈ ಕಾಯಿದೆ ತರುತ್ತಿದ್ದಾರೆ. ಇದಕ್ಕೆ ಬೆಂಬಲ ಇದು ಇನ್ನು ಏನು ಬರಬೇಕಾಗಿದೆಯೋ ಅದೂ ಬರಲಿ. ಈ ಕಾಯಿದೆಗೆ ನನ್ನ ಬೆಂಬಲ ಇದೆ ಎಂದು ಹೇಳುತ್ತೀನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೀನೆ. ಇದರಲ್ಲಿ ಎಕ್ಸ್‌ಪ್ಲನೇಷನ್ (೧) ಸಬ್‌ಕ್ಲಾಸ್ (೨) ರಲ್ಲಿ ಓದಿದರೆ ಅದು ಈ ರೀತಿ ಇದೆ:—

Explanation I — sub clause (ii) says :

"(ii) "holder" means a holder as defined in the Mysore Land Revenue Act, 1964, and includes a protected tenant as defined in the Mysore Land Reforms Act, 1961, but does not include a holder of any land held on behalf of a religious or charitable institution; and the expression "to hold land" shall be constructed accordingly; "

ಈಗ ಉಳುವವನೇ ಭೂಮಿಯ ಒಡೆಯ ಎಂದು ಏನು ಮಾಡಿದ್ದೀರೋ ಅದು ಈ ರಿಲಿಜಿಯಸ್ ಅಂಡ್ ಛಾರಿಟಬಲ್ ಇನ್ಸ್‌ಟ್ಯೂಷನ್‌ನಲ್ಲಿ ಯಾರು ಜಮೀನನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡಿದ್ದಾರೋ ಅವರಿಗೆ ಇದು ಅನ್ವಯಿಸುವುದಿಲ್ಲ. ಅಂಥಾ ಬಿಲ್ಲು ತಂದಿದ್ದೀರಿ. ಇದೂ ಕೂಡ ರಿಡೆಂಪ್ಟ್ ಆಗುತ್ತದೆ. ಮುಂದೆ ಇದಕ್ಕೆ ನೀವು ಯಾವ ಕಾನೂನು ತರುತ್ತೀರಿ? ನಿನ್ನೆ ದಿವಸದವರೆಗೆ ನಾವು ಲ್ಯಾಂಡ್ ರೀಫಾರಂಸ್ ಬಗ್ಗೆ ಚರ್ಚೆ ಮಾಡಿದ್ದೀವೆ ಪುನಃ ಸೋಮವಾರ ಚರ್ಚೆ ಮಾಡುತ್ತಿದ್ದೀವೆ. ಈ

ರಿಲಿಜಿಯಸ್ ಅಂಡ್ ಛಾರಿಟಬಲ್ ಇನ್ಸ್ಟಿಟ್ಯೂಷನ್‌ನಲ್ಲಿ ಜಮೀನುಗಳು ಏನು ಇವೆ ಆದರ ಮೀನ್ಸ್ ಆಫ್ ಪ್ರೊಡಕ್ಷನ್ಸ್ ಅವರಲ್ಲೇ ಕೇಂದ್ರೀಕೃತವಾಗಿದೆ. ಈವೊತ್ತು ಆ ಭೂಮಿಯನ್ನು ಕೊಡುವುದಾದರೆ ಅದು ಯಾರ ಕೈಯ್ಯಲ್ಲಿ ಇರಬೇಕು ಎಂದರೆ ಈಗ ಉಳುವವನೇ ಹೊಲದ ಒಡೆಯ ಎಂದು ಏನು ಮಾಡಿದ್ದೀರೋ ಆ ರೀತಿ ಆ ಭೂಮಿ ಮಣ್ಣಿನ ಮಗನ ಕೈಯ್ಯಲ್ಲಿ ಇರಬೇಕು. ಈಗ ಇದರಲ್ಲಿ ನನಗೆ ಸಂಶಯ ಬರುತ್ತದೆ. ಇದು ಓವರ್‌ಸೈಟ್ ಇನ್‌ಕ್ಲೂಡ್ ಆಗಿದೆ ಎಂದು ಕಂಡು ಬರುತ್ತದೆ. ಆ ರೀತಿ ಇನ್‌ಕ್ಲೂಡ್ ಆಗಿದ್ದರೆ ಅದನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಹೈದ್ರಾಬಾದಿನಲ್ಲಿ ಮನಿಲೆಂಡರ್ಸ್ ಆಕ್ಟ್ ಇತ್ತು. ಆದರಲ್ಲಿ ಬೇಕಾದಷ್ಟು ಕ್ಲಾಸ್ ಇತ್ತು. ಹಳೇ ಮೈಸೂರಿನಲ್ಲೂ ಆಕ್ಟ್ ಇತ್ತು. ಎರಡು ಕಡೆಯೂ ವೆಸ್ಟೆಡ್ ಇಂಟರೆಸ್ಟ್ ಇದ್ದುವು. ಕೆಲವು ಭಾಗದಲ್ಲಿ ಕೆಟ್ಟವರೂ ಇದ್ದರು, ಕೆಲವು ಭಾಗದಲ್ಲಿ ಒಳ್ಳೆಯವರೂ ಇದ್ದರು. ಅಲ್ಲೂ ಕೂಡ ಎಕ್ಸಪ್ಲಾಯಿಟರ್ಸ್ ಎಕ್ಸ್‌ಪ್ಲಾಯಿಟೆಡ್ ಆಗಿ ಇದ್ದರು. ಮತ್ತು ನಮ್ಮ ಕಡೆ ನವಾಬ್‌ಗಳು ಇದ್ದರು, ಮತ್ತೊಂದು ಕಡೆ ದೊಡ್ಡ ದೊಡ್ಡ ಜಮೀನ್ದಾರರ ಕೈಯಲ್ಲಿ ಈ ಖಾತೆ ಇದ್ದುವು. ಆಗಿನ ಕಾಲದಲ್ಲೂ ಎಕ್ಸ್‌ಪ್ಲಾಯಿಟರ್ಸ್ ಎಕ್ಸ್‌ಪ್ಲಾಯಿಟೆಡ್ ಆಗಿ ಇದ್ದರು. ಆಗ ಸರ್ಕಾರ ಇದನ್ನು ಏತಕ್ಕೆ ಮಾಡಲಿಲ್ಲ, ಶ್ರಮಪಟ್ಟು, ಬೆವರು ಸುರಿಸುವವರ ಕೈಗೆ ಇದನ್ನು ಸಮನಾಗಿ ಹಂಚಬೇಕಾಗಿತ್ತು. ಮೀನ್ಸ್ ಆಫ್ ಪ್ರೊಡೆಕ್ಷನ್ಸ್ ಅನ್ನುವುದು ಯಾರು ಉಳುತ್ತಾರೋ ಅವನ ಕೈಯ್ಯಲ್ಲಿ ಭೂಮಿ ಇರಬೇಕು. ಹಿಂದೆ ಎಲ್ಲರೂ ಒಂದು ಬಂಧುತ್ವದ ಭಾವನೆಯಲ್ಲಿದ್ದು ಹಂಚಿಕೊಳ್ಳುತ್ತಿದ್ದರು. ಯಾರೂ ಕೂಡ ಕೇಳು, ಮೇಲು ಎನ್ನುವ ಭಾವನೆ ಇರಲಿಲ್ಲ. ಆವೊತ್ತು ಫ್ಯೂಡಲಿಸಮ್ ಇತ್ತು, ಆಮೇಲೆ ಫ್ಯೂಡಲಿಸಮ್ ಹೋಗಿ ಕ್ಯಾಪಿಟಲಿಸಮ್ ಬಂತು, ಆಮೇಲೆ ಕ್ಯಾಪಟಲಿಸಮ್ ಹೋಗಿ ಸೋಷಿಯಾಲಿಸಮ್ ಬಂದಿದೆ. ಈವೊತ್ತಲ್ಲ ನಾಳೆಯಾದರೂ ಈ ಸೋಷಿಯಾಲಿಸಮ್ ತರುತ್ತೀರಿ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—

ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈವೊತ್ತು ಹಳ್ಳಿಯಲ್ಲಿರತಕ್ಕಂಥ ಸಣ್ಣ ಪುಟ್ಟ ರೈತರ ಕೊಲೆ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತು ಸಣ್ಣ ಪುಟ್ಟ ರೈತರು ದುಡ್ಡು ಇರುವವರ ಹತ್ತಿರ ಹೋಗಿ ಪ್ರೋನೋಟು ಬರೆದುಕೊಟ್ಟು ದುಡ್ಡು ತೆಗೆದುಕೊಂಡು ಬಂದು ವ್ಯವಸಾಯ ಮಾಡಿ ಉತ್ಪಾದನೆ ಮಾಡುತ್ತಿದ್ದರು. ಈಗ ಈ ಮಸೂದೆಯಿಂದ ಅವರಿಗೆ ಮೂರು ಕಾಸೂ ಕೂಡ ಹುಟ್ಟದೆ ಇದ್ದ ಹಾಗೆ ಆಯಿತು. ಈಗ ಇದರಿಂದ ಏನಾಗುತ್ತದೆ ಎಂದರೆ ದುಡ್ಡು ಇರುವವರು ಅವನ ಹತ್ತಿರ ಆ ಜಮೀನನ್ನು ಕ್ರಯಕ್ಕೆ ಬರೆಸಿಕೊಂಡು ಕೊಡುತ್ತಾರೆ. ಇದರಿಂದ ರೈತರನ್ನು ಹುಲಿ ಬಾಯಿಗೆ ಹಾಕಿದ ಹಾಗಾಯಿತು. ಯಾವ ಕೆಲಸ ಮಾಡ

ಬೇಕಾದರೂ ಯೋಜನೆ ಮಾಡಬೇಕು. ಈವೊತ್ತು ನೀವು ಏನೋ ಒಂದು ಮಸೂದೆ ಮಾಡುತ್ತೀರಿ, ಆದರೆ ರೈತರಿಗೆ ಸರಿಯಾದ ಕಾಲಕ್ಕೆ ಗೊಬ್ಬರ ಸಿಕ್ಕುವುದಿಲ್ಲ, ಬೀಜ ಸಿಕ್ಕುವುದಿಲ್ಲ, ಯಾವ ರೀತಿಯಾದ ಸೌಕರ್ಯವು ಸಿಕ್ಕುವುದಿಲ್ಲ, ಹಣವೂ ಕೂಡ ಕಾಲಕ್ಕೆ ಸರಿಯಾಗಿ ಸಿಕ್ಕುವುದಿಲ್ಲ. ಹೀಗೆ ಮಾಡಿದರೆ ರೈತರಿಂದ ಕ್ರಾಂತಿ ಆದೀತು ಎನ್ನುವ ಮಾತನ್ನು ಹೇಳುತ್ತೇನೆ. ಆದುದರಿಂದ ಈ ಮಸೂದೆ ತರುವುದಕ್ಕೆ ಮುಂಚೆ ಯೋಚನೆಮಾಡಿ. ಬೇಕಾದರೆ ಅವನಿಗೆ ಬೇರೆ ವಿಧದಲ್ಲಿ ಸಹಾಯಮಾಡಿ. ಕಡಿಮೆ ಬಡ್ಡಿಯಲ್ಲಿ ಹಣ ಕೊಡಿ. ಕಂತುಗಳಲ್ಲಿ ಕೊಡಿ ಅಂಥಾ ಒಂದು ವ್ಯವಸ್ಥೆ ಮಾಡಿ. ಈಗ ತಂದಿರುವ ಮಸೂದೆಯಿಂದ ಅವರ ಆಸ್ತಿಯನ್ನು ಶ್ರೀಮಂತರು ಕಿತ್ತುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪ. ಎಂ. ಭಂಗಿ (ಜಮಖಂಡಿ).— ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯನ್ನು ನಾನು ಬೆಂಬಲಿಸುತ್ತಾ ಈ ಬಗ್ಗೆ ಹಲಕೆಲವು ಸಲಹೆಗಳನ್ನು ಹೇಳ ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಮೈಸೂರು ರಾಜ್ಯದಲ್ಲಿ ಮೈಸೂರು ಅಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ೧೯೬೬ ರಲ್ಲಿ ಪಾಸ ಆದನಂತರ ಸಾಹುಕಾರರು ಅನೇಕ ಜನರು ಮೈಸೂರು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ದಾಖಲೆ ಮಾಡಿ ಅವುಗಳಿಗೆ ತಡೆ ಆಜ್ಞೆ ತಂದರು. ಕೊನೆಗೆ ಮೈಸೂರು ಅಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ರದ್ದಾಯಿತು. ತದನಂತರ ಮೈಸೂರು ಸರ್ಕಾರದವರು ಹುಕುಂ ವಿರುದ್ಧವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅಪೀಲು ರೂಪವಾಗಿ ದಾಖಲು ಮಾಡಿ ೨-೩ ವರ್ಷ ಆದುವು. ಆ ರಿಟ್ ಪಿಟಿಷನ್ಸ್ ಸುಪ್ರೀಮು ಕೋರ್ಟ್‌ನಲ್ಲೀ ಇನ್ನೂ ಪೆಂಡಿಂಗ್ ಇದೆ. ಆದುದರಿಂದ ಈ ಬಗ್ಗೆ ಮೈಸೂರು ಸರ್ಕಾರದವರು ಒಬ್ಬ ತಜ್ಞ ಅಡ್ವೋಕೇಟರನ್ನು ನೇಮಿಸಿ ಈ ವಿಷಯದಲ್ಲಿ ಕೂಡಲೇ ಹಿಯರಿಂಗ ದೊರಕಿಸಿ ಈ ಕಾಯಿದೆ ಕ್ರಮಬದ್ಧವಾಗಿ ಇದೆ ಎಂಬ ಬಗ್ಗೆ ತೀರ್ಮಾನ ಪಡೆಯಲು ಪ್ರಯತ್ನ ಮಾಡ ಬೇಕೆಂದು ನಾನು ಈ ಸಮಯದಲ್ಲಿ ಸೂಚಿಸ ಬಯಸುತ್ತೇನೆ.

ಇನ್ನು ಎರಡನೇ ವಿಷಯ ಹೇಳುವುದು ಏನೆಂದರೆ ಈ ಮಸೂದೆಯಿಂದ ಕೇವಲ ಕೆಲವು ರೈತರಿಗೆ ಅವರ ಭೂಮಿ ಡಿಕ್ರಿಗೆ ಬಂದು ಹರಾಜು ಆದರೂ ಕೂಡ ಆವರಿಗೆ ಪರಿಹಾರ ಸಿಗದೇ ಹೋದಾಗ ಬೇರೆ ವಿಧವಾಗಿ ಸಾಹುಕಾರ ಜನರು ಈ ರೈತರಿಗೆ ಸಾಕಷ್ಟು ತೊಂದರೆ ಕೊಡುತ್ತಾರೆ. ಸಿವಿಲ್ ಕೋರ್ಟ್‌ನಲ್ಲಿ ಕೇಸು ದಾಖಲೆ ಮಾಡಿ ಅವರನ್ನು ತುರಂಗದಲ್ಲಿ ಹಾಕಿಸುತ್ತಾರೆ. ಆವರಿಗೆ ಯಾವ ವಿಧವಾದ ರಕ್ಷಣೆಯೂ ಇಲ್ಲ. ಬಾಂಬೆ ಅಗ್ರಿಕಲ್‌ಚರಲ್ ಡೆಬ್ಟರ್ಸ್ ರೀಲಿಫ್ ಆಕ್ಟ್ ಪ್ರಕಾರ ಅವರಿಗೆ ರಕ್ಷಣೆ ಇತ್ತು. ಮೈಸೂರು ಅಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ರದ್ದು

ಆಗಿರುವುದರಿಂದ ಅವರಿಗೆ ಯಾವ ವಿಧವಾದ ರಕ್ಷಣೆಯೂ ಇಲ್ಲ. The Mysore Agricultural Debtors Relief Act 1966 was struck down by the Mysore High Court as unconstitutional. ಈವಾಗ ಈ ಅಪೀಲು ಸುಪ್ರೀಂಕೋರ್ಟಿನಲ್ಲಿ ಪೆಂಡಿಂಗ್ ಇದೆ. ಈವೊತ್ತಿನ ದಿವಸ ರೈತನನ್ನು ತುರಂಗದಲ್ಲಿ ಇಡುವುದಕ್ಕಾಗಲಿ ಅಥವಾ ಅವನಿಂದ ಹಣವನ್ನು ವಸೂಲ್ಮಾಡುವು ದಕ್ಕಾಗಲಿ ಆ ಅಧಿಕಾರ ಕೋರ್ಟು ಮತ್ತು ಸಾಹುಕಾರರ ಹತ್ತಿರ ಇದೆ. ಈ ದೃಷ್ಟಿ ಯಿಂದ ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಕೇವಲ ಜಮೀನುಗಳನ್ನು ವಿಕ್ರಯ ಮಾಡುವ ಸಮಯದಲ್ಲಿ ಮಾತ್ರ ಅವನಿಗೆ ತಡೆ ಆಜ್ಞೆ ಕೊಟ್ಟಿದೆ. ರೈತನ ವಿರುದ್ಧ ಇದ್ದ ಹುಕುಂಗಳನ್ನು ಸ್ಟೇ ಮಾಡುವ ಅಧಿಕಾರ ಈ ಕಾಯಿದೆಯಲ್ಲಿ ಕೊಟ್ಟಿದೆ. ಈ ಹುಕುಂನ್ನು ಎಕ್ಸಿಕ್ಯೂಟ್ ಮಾಡಬಾರದು ಎಂದು ಆ ರೀತಿ ಹುಕುಂನ್ನು ದೊರಕಿಸಿ ಕೊಟ್ಟು ೨ ವರ್ಷ ಮುಂದುವರೆಸಬಾರದು ಎಂದು ಮಾಡಿದ್ದಾರೆ. ಈ ರೀತಿ ಇದರಲ್ಲಿ ತಿದ್ದುಪಡಿ ಮಾಡಿರುವುದರಿಂದ ಮುಂದೆ ಅವನಿಗೆ ಯಾವುದಾದರೂ ಒಂದು ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಮಯದಲ್ಲಿ ನಾನು ಸಲಹೆ ಮಾಡಬಯಸುತ್ತೇನೆ.

ರೈತನಿಗೆ ಅರ್ಬನ್ ಬ್ಯಾಂಕಿನಲ್ಲಿ ಸಾಲ ದೊರೆಯುವ ವ್ಯವಸ್ಥೆಯಾಗಬೇಕು. ಅರ್ಬನ್ ಬ್ಯಾಂಕುಗಳು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದ್ದು ಅವುಗಳಿಂದ ಕೇವಲ ವ್ಯಾಪಾರಿ ಜನಗಳಿಗೆ ಸಾಲ ಸಿಕ್ಕುತ್ತಿದೆ. ಇನ್ನುಮುಂದೆ ಸಹಕಾರ ಮಂತ್ರಿ ಗಳು ಯಾವತ್ತೂ ಅರ್ಬನ್ ಬ್ಯಾಂಕುಗಳಿಗೆ ಹುಕುಂ ಮಾಡಿ ರೈತರಿಗೆ ಅಡಚಣಿ ಇದ್ದ ಸಮಯದಲ್ಲಿ ಸಾಲವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಈ ರೀತಿಯಿಂದ ವಿಚಾರ ಮಾಡಿ ಯಾವತ್ತೂ ಪರಿಹಾರಗಳನ್ನು ರೈತರಿಗೆ ಎರಡು ವರ್ಷದ ವರೆಗೆ ದೊರೆಯುವಂತೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಅದೇ ಪ್ರಕಾರವಾಗಿ ಸಾಹುಕಾರಿ ಜನರು ಅದಷ್ಟೂ ಸುಪ್ರೀಂ ಕೋರ್ಟಿನಲ್ಲಿದ್ದ ರಿಟ್ ಪಿಟಿಷನ್ ಅಪೀಲ್ ಮುಂದಕ್ಕೆ ಹೋಗುವಂತೆ, ಡಿಲೇ ಆಗುವಂತೆ ಪ್ರಯತ್ನ ಮಾಡು ತ್ತಿರುತ್ತಾರೆ. ಈ ಸಮಯದಲ್ಲಿ ಸರ್ಕಾರದವರು ಜಾಗೃತರಾಗಿ ಸುಪ್ರೀಂ ಕೋರ್ಟ್ ನಲ್ಲಿ ತಜ್ಞ ಅಡ್ವೋಕೇಟ್‌ರನ್ನು ನೇಮಕಮಾಡಿ ಎಕ್ಸ್‌ಪೆಡೈಟ್ ಮಾಡಿ, ಈ ಕಾಯದೆ ಕ್ರಮಬದ್ಧವಿವೆ ಎಂದು ಜಾಹೀರು ಮಾಡಿಸಬೇಕೆಂದು ಸೂಚಿಸ ಬಯಸುತ್ತೇನೆ.

ರೈತರಿಗೆ ಕೂಡಲೇ ಪರಿಹಾರ ಸಿಕ್ಕಬೇಕು, ಅವರ ಜಮೀನುಗಳು, ಆಸ್ತಿಗಳು ಉಳಿಯಬೇಕು, ಮತ್ತು ದುಷ್ಕಾಲದಿಂದ ಸಂತ್ರಸ್ತರಾದ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುವುದು ಅತ್ಯವಶ್ಯವಿದೆ. ಆ ದೃಷ್ಟಿಯಿಂದ ರೈತನ ವಾಖ್ಯೆಯಲ್ಲಿ ಕೆಲವು ಕಂಡೀ ಷನ್ಸ್ ಹಾಕಿ ಸಣ್ಣ ರೈತರಿಗೂ ಪರಿಹಾರ ದೊರಕುವಂತೆ ಈ ಕಾಯದೆಯಲ್ಲಿ ಮಾಡು ವುದು ಅತ್ಯವಶ್ಯವಿದೆ. ಯಾವತ್ತೂ ರೈತರಿಗೆ ಪರಿಹಾರ ಸಿಕ್ಕಬೇಕು. ಆ ಪ್ರಕಾರವಾಗಿ ಕಾಯದೆಯಲ್ಲಿ ದುರಸ್ತಿ ಮಾಡಿ ರೈತರಿಗೆ ಯಾವತ್ತೂ ಪರಿಹಾರಗಳು ಸಿಕ್ಕಬೇಕು.

ಈಗಾಗಲೇ ಡಿಕ್ರಿ ಆಗಿರುವುದನ್ನು ತಡೆಹಿಡಿಯಬೇಕು, ರೈತರ ವಿರುದ್ಧವಾಗಿ ಚಾಲೂ ಇದ್ದ ಪೆಂಡಿಂಗ್ ಪ್ರೊಸೀಡಿಂಗ್ಸ ತಡೆಹಿಡಿಯಬೇಕು. ಇನ್ನು ಮುಂದೆ ಆಗತಕ್ಕ ಡಿಕ್ರಿಗಳನ್ನಾದರೂ ಕೂಡ ಜಾರಿಯಲ್ಲಿ ತರದ ಹಾಗೆ ಎರಡು ವರ್ಷ ಕಾಲವಾದರೂ ತಡೆ ಹಿಡಿಯುವಂತೆ ಸೂಕ್ತ ತಿದ್ದುಪಡಿ ಮಾಡಿ ರೈತರಿಗೆ ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಏಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ದಿವಸ ಬಂದಿರತಕ್ಕ ಅಗ್ರಿಕಲ್ಚರಲ್ ಡೆಬ್ಟರ್ಸ್ ಟೆಂಪೊರರಿ ಪ್ರೊಟೆಷನ್ ಬಿಲ್ ವಿಷಯದಲ್ಲಿ ಮಾತನಾಡುತ್ತ ಇಲ್ಲಿಯವರೆಗೆ ಮಾತನಾಡಿರತಕ್ಕ ನಮ್ಮ ಸ್ನೇಹಿತರುಗಳು ಕೆಲವರು ವಿರೋಧಿಸಿದ್ದಾರೆ, ಕೆಲವರು ಸ್ವಾಗತಿಸಿದ್ದಾರೆ. ಈ ಹೊತ್ತಿನದಿವಸ ಈ ಕಾನೂನನ್ನು ತರತಕ್ಕದ್ದು ಒಂದು ವಿಧದಲ್ಲಿ ಕ್ಷೇಮವಾಗಿ ಕಂಡರೂ ಇನ್ನೊಂದು ವಿಧದಲ್ಲಿ ಜನಗಳಿಗೆ ಅದರಿಂದ ಅನ್ಯಾಯವಾಗುತ್ತದೆ ಎಂದರೆ ತಪ್ಪಾಗಲಾರದು. ಈ ಹೊತ್ತಿನ ದಿವಸ ನಾವು ಈ ಬಿಲ್ಲನ್ನು ತಂದ ತಕ್ಷಣ ಜನಗಳಿಗೆ ಏನೊಂದು ಸೌಲಭ್ಯ ತಾತ್ಕಾಲಿಕವಾಗಿ ಅವರ ಕಷ್ಟನಷ್ಟಗಳನ್ನು ನೀಗಿಕೊಳ್ಳುವುದಕ್ಕೆ ಒಂದು ಸಹಾಯ, ಹಣವನ್ನು ಇಟ್ಟು ಕೊಂಡಿರತಕ್ಕ ಜನಗಳಿಂದ ಸಿಕ್ಕುತ್ತಿತ್ತೋ ಅದು ತಕ್ಷಣ ನಿಂತು ಹೋಗುತ್ತದೆ. ಹಾಗೆ ನಿಂತುಹೋದಾಗ ಕಷ್ಟ ಪರಿಸ್ಥಿತಿಯಲ್ಲಿರುವ ಜನಗಳಿಗೆ ಬೇರೆ ಜನತೆ ಸಹಾಯ ಮಾಡುವುದಕ್ಕೆ ಬರುತ್ತಾರೆಯೇ ಎಂದರೆ ನಿಜವಾಗಿ ಯಾರೂ ಬರುವುದಿಲ್ಲ. ನಮ್ಮ ಸರ್ಕಾರದಲ್ಲಿ ನಾವು ಸಾಲವನ್ನು ಪಡೆಯುವುದಕ್ಕೆ ಹೋದರೆ ಎಷ್ಟು ಕಷ್ಟಗಳವೆ ಎನ್ನುವುದನ್ನು ಅನೇಕ ಸಾರಿ ಹೇಳಿದ್ದೇವೆ. ಒಬ್ಬ ಸಾಹುಕಾರನ ಹತ್ತಿರ ಹೋಗಿ ಕಾಗದ ಬರೆದು ಕೊಡುವುದಕ್ಕೆ ತಡವಾದರೂ ಕೂಡ ಅಥವಾ ಕಾಗದಪತ್ರವಿಲ್ಲದೆಯೇ ಎಷ್ಟೋ ಜನರು ಲೇವಾದೇವಿ ಮಾಡುತ್ತಿದ್ದರು, ಬರೀ ನಂಬಿಕೆಯ ಮೇಲೆ ಸಾಲ ಕೊಡುತ್ತಿದ್ದರು. ಕಾನೂನು ಪರಿಷ್ಕರಿಸಿ ಕ್ಲಿಷ್ಟವಾಗಿ ಈ ಹೊತ್ತು ಜನಗಳಿಗೆ ಕಷ್ಟ ಜಾಸ್ತಿಯಾಗುತ್ತಿದೆ. ಕಾಗದ ಬರೆದು ಕೊಟ್ಟರೂ, ಪತ್ರಗಳನ್ನು ಬರೆದುಕೊಟ್ಟರೂ ಕೊಟ್ಟ ಸಾಲ ವಾಪಸು ಬಾರದೆ ಇರತಕ್ಕ ಕಾಲದಲ್ಲಿ ನಂಬಿಕೆ ಸಾಲವನ್ನು ಕೊಡುವುದು ಹೇಗೆ ಎನ್ನುವ ಪರಿಸ್ಥಿತಿ ಉಂಟಾಗಿದೆ. ಜನಗಳಿಗೆ ತಾತ್ಕಾಲಿಕವಾಗಿ, ತಕ್ಷಣಕ್ಕೆ ಬೇಕಾದ ಹಣ ದೊರಕುತ್ತಿಲ್ಲ. ಸಹಕಾರ ಸಂಘಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಸಾಲ ಪಡೆಯುವುದಕ್ಕೆ ಹೋದರೆ ಅಲ್ಲಿ ನಾವು ಮಾಡಬೇಕಾದ ರಿಕಾರ್ಡ ಕಾನೂನು ಪ್ರಕಾರವಾಗಿ ಮಾಡದೆ ಹೋದರೆ ಹಣ ಸಿಕ್ಕುವುದಿಲ್ಲ. 'ಮಗನ ಮದುವೆ ಯಮನ ಬಾಧೆ' ಎಂದು ಹೇಳುತ್ತಾರೆ. ಮದುವೆ ನಿಶ್ಚಯ ಮಾಡಿಕೊಂಡು ಬಂದು ಸಾಲ ಸಿಕ್ಕದೆ ಒದ್ದಾಡುವ ಪರಿಸ್ಥಿತಿಯುಂಟಾಗುತ್ತದೆ. ಎಲ್ಲಿಯಾದರೂ ಸಾಲಮಾಡಿ ತನ್ನ ಕಷ್ಟವನ್ನು ಪರಿಹಾರ ಮಾಡಿಕೊಳ್ಳೋಣವೆಂದು ಕೈ ಒಡ್ಡಿದರೆ ಸಾಲ ಸಿಕ್ಕುವುದಿಲ್ಲ, ಏಕೆಂದರೆ ಕಾನೂನು ಇರುವುದರಿಂದ ಆ ತೊಂದರೆ ಇದೆ. ರೈತನಿಗೆ ತಾತ್ಕಾಲಿಕವಾಗಿ ಅವನಿಗೆ ಕಷ್ಟ ಪರಿಸ್ಥಿತಿ ಬಂದಾಗ ಅವನಿಗೆ ಹಣವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಎಲ್ಲಿಯವರೆಗೆ ಸಾಧ್ಯ

ವಿಲ್ಲವೋ ಅಲ್ಲಿಯವರೆಗೆ ಇಂಥ ಮಸೂದೆಗಳನ್ನು ತರತಕ್ಕದ್ದು ಕ್ಷೇಮವೆಂದು ನಾನು ಹೇಳುವುದಿಲ್ಲ. ಆ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾಡಿ ಆನಂತರ ಈ ಕಾನೂನನ್ನು ತಂದರೆ ಸರಿಹೋಗುತ್ತದೆ.

ಈ ಹೊತ್ತು ಸರ್ಕಾರದಲ್ಲಿ ಸಾಲ ಮಾಡಿದರೆ ಅಸಲಿಗಿಂತ ಸುಸ್ತಿ ಬಡ್ಡಿ ಜಾಸ್ತಿಯಾಗುತ್ತದೆ. ಮಳೆ ಇಲ್ಲ, ಬೆಳೆ ಹೋಯಿತು ಎಂದು ಸಾಹುಕಾರರ ಹತ್ತಿರ ಸಾಲ ಮಾಡಿದಾಗ ಹೇಳಿದರೆ ನಾಲ್ಕೈದು ಜನ ಕುಳಿತುಕೊಂಡು ಪಂಚಾಯಿತಿ ಮಾಡಿ ಇಷ್ಟು ಬಡ್ಡಿ ಬಿಡು, ಇಷ್ಟು ತೆಗೆದುಕೋ ಎಂದು ಹೇಳಿ ಒಂದು ತಿರ್ಮಾನಕ್ಕೆ ಬರುತ್ತಿದ್ದರು. ಸರ್ಕಾರದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿ ಸಾಲ ತೆಗೆದುಕೊಂಡಿದ್ದು ಮಳೆ ಬೆಳೆ ಇಲ್ಲದೆ ನಾಲ್ಕಾರು ವರ್ಷ ಸಾಲ ವಾಪಸು ಕೊಡುವುದಕ್ಕೆ ಆಗದೆ ಹೋದರೆ ಸುಸ್ತಿ ಬಡ್ಡಿ ಬಡ್ಡಿಗೆ ಬಡ್ಡಿ ಸೇರಿ, ಆ ಹಣಕ್ಕಾಗಿ ಅವನ ಆಸ್ತಿಯನ್ನು ಹರಾಜು ಮಾಡುತ್ತಿರತಕ್ಕ ಪರಿಸ್ಥಿತಿಯನ್ನು ನಾವೆಲ್ಲ ನೋಡುತ್ತಿರುತ್ತೇವೆ. ಭೂ ಅಭಿವೃದ್ಧಿ ಬ್ಯಾಂಕಿನಿಂದ ೧೯೬೧--೬೨ ರಲ್ಲಿ ಸಾಲ ಪಡೆದಿದ್ದು, ಮಳೆಬೆಳೆಗಳಿಲ್ಲದೆ ಸಾಲದ ನೋಲೆ ಬಡ್ಡಿಗೆ ಬಡ್ಡಿ ಬೆಳೆದು ರೈತರು ಬಹಳ ತೊಂದರೆಗೆ ಈಡಾಗಿದ್ದಾರೆ. ಮಳೆಬೆಳೆಗಳಾಗದೆ ಇದ್ದರೆ ರಿಯಾಯಿತಿಯನ್ನು ಕೊಡುತ್ತೇವೆ, ಪೀನಲ್ ಇಂಟರೆಸ್ಟ್ ಕೊಡಬೇಕಾಗಿಲ್ಲ ಎಂದು ಹೇಳುವುದೆಲ್ಲ ವಿಧಾನಸಭೆಯಲ್ಲಿ ಚರ್ಚೆ ನಡೆದಾಗ ಹೇಳುವುದು ಮತ್ತು ಆ ವಿಚಾರ ಪತ್ರಿಕೆಗಳಲ್ಲಿ ಬರತಕ್ಕ ವಿಷಯವಾಗಿದೆ. ಆದರೆ ಕಾರ್ಯರೂಪಕ್ಕೆ ಬಂದಿಲ್ಲ. ಯಾವ ವರ್ಷ ಮಳೆಯಾಗಿಲ್ಲ ಆ ವರ್ಷಕ್ಕೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಹಾಕಬಾರದು. ಆದರೂ ಸಹ ಬಡ್ಡಿ, ಸುಸ್ತಿ ಬಡ್ಡಿ ಹಾಕಿ, ಟಾಂ ಟಾಂ ಹೊಡೆದು ಅವನ ಮನೆಯಲ್ಲಿರುವ ಪಾತ್ರೆ, ಪದಾರ್ಥ, ದನಕರುಗಳು ಇವನ್ನೆಲ್ಲ ಹರಾಜು ಹಾಕಿ ದುಡ್ಡನ್ನು ವಸೂಲು ಮಾಡತಕ್ಕದ್ದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಜನ ಕಣ್ಣೀರಿಟ್ಟುಕೊಂಡು ಏನು ಪರಿಸ್ಥಿತಿಗೆ ಸಿಕ್ಕಿದೆವು, ಆ ಹೊತ್ತು ಸಾಲ ತೆಗೆದುಕೊಳ್ಳದೆ ಇದ್ದರೆ ಚೆನ್ನಾಗಿತ್ತೋ ಏನೋ ಎಂದು ಹೇಳುತ್ತ ನರಳುತ್ತಿದ್ದಾರೆ. ಸರ್ಕಾರ ಸುಸ್ತಿ ಬಡ್ಡಿಯನ್ನು ತೆಗೆದುಹಾಕಬೇಕು. ಇಲ್ಲದೆಹೋದರೆ ಸಾಹುಕಾರನಿಗಿಂತ ಸರ್ಕಾರದ ಸಾಲದಿಂದ ಕಷ್ಟವಾಗಿರುವ ಪರಿಸ್ಥಿತಿ ಬರುತ್ತದೆ. ಸುಸ್ತಿ ಬಡ್ಡಿ ಏನಿದೆ ಅದನ್ನು ದಯವಿಟ್ಟು ಸರ್ಕಾರದವರು ಇನ್ನುಮುಂದಾದರೂ ವಜಾ ಮಾಡಿ ಜನಗಳಿಗೆ ಅನುಕೂಲವಾಗತಕ್ಕ ವ್ಯವಸ್ಥೆಯನ್ನು ಮಾಡದೆ ಹೋದರೆ ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ.

ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಸರ್ವರಿಗೂ ಹಣವನ್ನು ಕೊಡುತ್ತೇವೆಂದು ಹೇಳಿದರು. ಬ್ಯಾಂಕುಗಳಿಂದ ಕೊಟ್ಟ ಸಾಲ ವಾಪಸು ಬರುತ್ತಿಲ್ಲ. ಫಿಕ್ಸೆಡ್ ಡಿಪಾಜಿಟ್ ಹಣಕ್ಕೆ ಕಡಮೆ ಹಣವಿರುವುದರಿಂದ ಸಾಲ ಕೊಡುವುದಕ್ಕಾಗುವುದಿಲ್ಲವೆಂದು ಬ್ಯಾಂಕುಗಳವರು ಹೇಳುತ್ತಿದ್ದಾರೆ. ರೈತನಿಗೆ ಎಲ್ಲ ಕಷ್ಟಗಳಿಗೂ ಸಹಾಯ ಮಾಡಲು ಸಾಲ ಕೊಡುವ ಸೌಲಭ್ಯದ ವ್ಯವಸ್ಥೆ ಮಾಡುವವರೆಗೂ, ರೈತನಿಗೆ ತಕ್ಷಣ ಹಣ ಬೇಕು ಎಂದಾಗ ತನ್ನಲ್ಲಿರುವ ಪಟ್ಟೆಯನ್ನು ತೆಗೆದುಕೊಂಡು ಹೋಗಿ ಕೊಟ್ಟ

ತಕ್ಷಣ ಹಣ ದೊರೆಯತಕ್ಕ ವ್ಯವಸ್ಥೆಯಾಗುವವರೆಗೂ ಈ ಮಸೂದೆಯನ್ನು ತರತಕ್ಕದ್ದು ಕ್ಷೇಮಕರವಲ್ಲವೆಂದು ಹೇಳುತ್ತೇನೆ. ಸರ್ಕಾರದ ಸಾಲಗಳ ವ್ಯವಸ್ಥೆ 'ತಲೆಗಿಂತ ಏನೋ ಭಾರ' ಎಂದು ಹೇಳುವ ಮಟ್ಟಕ್ಕೆ ಹೋಗುತ್ತಿದೆ. ಆದುದರಿಂದ ಸರ್ಕಾರದ ಸಾಲ ಪರಿಸ್ಥಿತಿ ಬಹಳ ಉಲ್ಬಣವಾಗುತ್ತಿದೆ. ಅದನ್ನು ಕಡಿಮೆ ಮಾಡ ಬೇಕಾದರೆ ಸುಸ್ತಿ ಬಡ್ಡಿಯನ್ನು ಹಾಕದೆ ಅಸಲು ಮತ್ತು ಬಡ್ಡಿ ಮಾತ್ರ ತೆಗೆದು ಕೊಳ್ಳತಕ್ಕ ಪದ್ಧತಿ ಜಾರಿಗೆ ಬರಬೇಕು. ಸುಸ್ತಿ ಬಡ್ಡಿಯನ್ನು ಸೇರಿಸಿ ಹರಾಜು ಮಾಡುವುದಾದರೆ ಮುಲ್ತಾನಿ ಅಥವಾ ಮಾರವಾಡಿಗಳ ಮಟ್ಟಕ್ಕೆ ಬಂದಂತಾಗುತ್ತದೆ.

ಈ ಉತ್ತಮವಾದ ಬಿಲ್ಲನ್ನು ನಾನು ಸ್ವಾಗತಿಸುವುದಾದರೂ ಕೂಡ ಕೆಲವು ಕಾಲ ವ್ಯವಸ್ಥಿತವಾದ ರೀತಿಯಲ್ಲಿ ಸಾಕಷ್ಟು ಸಾಲದ ಸೌಲಭ್ಯ ಕೊಡುವ ಶಕ್ತಿ ಸರ್ಕಾರಕ್ಕೆ ಬರುವವರೆಗೂ ಇದನ್ನು ತಡೆ ಹಿಡಿದು ಆ ನಂತರ ಜಾರಿಗೆ ತರಬೇಕೆಂದು ಮನವಿ ಮಾಡುತ್ತ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಸರಕಾರ ಇಲ್ಲಿ ತಂದಿರುವ ಮೈಸೂರು ಅಗ್ರಿಕಲ್ಚರಲ್ ಡೆಬ್ಟರ್ಸ್ ರಿಲೀಫ್ ಬಿಲ್ ೧೯೭೩ ಎನ್ನುವ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಈ ಬಿಲ್ಲು ಬಹಳ ಹಿಂದೆಯೇ ಇಲ್ಲಿ ಜಾರಿಗೆ ಬರಬೇಕಾಗಿತ್ತು. ಇದರಲ್ಲಿ ಮೈಸೂರು ಹೈ ಕೋರ್ಟಿನವರು ೧೯೬೬ರಲ್ಲಿ ಮಾಡಿದ ಕಾನೂನನ್ನು ಅನೂರ್ಜಿತಗೊಳಿಸಿದುದ ರಿಂದ ರಾಜ್ಯದಲ್ಲಿರುವ ಲಕ್ಷಾಂತರ ಮಂದಿ ರೈತರಿಗೆ ತೊಂದರೆಯಾಗುತ್ತದೆ ಎಂದು ಅವರಿಗೆ ಅನುಕೂಲ ಮಾಡಲು ಇಂತಹ ಒಂದು ಕಾನೂನು ತರಬೇಕಾಯಿತು ಎಂದು ಇದರಲ್ಲಿ ಹೇಳಿದ್ದಾರೆ. ಆದರೆ ಹಿಂದೆ ಇದ್ದ ಮಸೂದೆಯಲ್ಲಿ ಇದ್ದ ಎಲ್ಲ ಅನು ಕೂಲಗಳನ್ನು ಬಿಟ್ಟು ಇದರಲ್ಲಿ ಒಂದು ಭಾಗ ಮಾತ್ರ ಸೇರಿಸಿ ತಂದಿದ್ದಾರೆ. ಹಿಂದೆ ರೈತರಿಗೆ ಅನುಕೂಲವಾಗುವಂತಹ ಇದ್ದ ಅನೇಕ ವಿಚಾರಗಳನ್ನೂ ಇದರಲ್ಲಿ ಅಳವಡಿಸಿ ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಅಭಿಪ್ರಾಯ, ಮತ್ತು ರೈತರಿಗೆ ಇದರಿಂದ ಬಹಳ ಉತ್ತಮವಾಗುತಲಿತ್ತು. ರೈತರ ಹಿತದೃಷ್ಟಿಯಿಂದ ನಾನು ಇಲ್ಲಿ ಹೇಳುವುದು ಸಾವಿರ ರೂಪಾಯಿ ವರಮಾನ ಬರುವ ರೈತ ಯಾವುದಾದರೂ ಸಾಲಕ್ಕೆ ಡಿಕ್ರಿ ಸಿವಿಲ್ ಕೋರ್ಟಿನಲ್ಲಿ ಪಡೆದರೂ ಅದಕ್ಕೆ ಎಂಟು ವರ್ಷಗಳ ಕಾಲ ಅವಕಾಶ ಇರು ತ್ತಿತ್ತು. ಮತ್ತು ಇದರಿಂದ ರೈತರ ಆಸ್ತಿಯನ್ನು ಅಟ್ಯಾಚು ಮಾಡಲು ಅವಕಾಶ ವಿರುತ್ತಿರಲಿಲ್ಲ. ಮತ್ತು ರೈತರು ಕೊಡಬೇಕಾದ ಸಾಲಕ್ಕೆ ಕೋರ್ಟಿಗೆ ಹೋದರೂ ಅದಕ್ಕೆ ಆರು ವರ್ಷ ಕಾಲ ಲಿಮಿಟೇಷನ್ ಆಗುತ್ತೆ ಎಂದೂ ಇತ್ತು. ಇದರಿಂದ ರೈತರಿಗೆ ಅನುಕೂಲಗಳಾಗುತ್ತಿತ್ತು. ಆದರೆ ಇದುವರೆಗೆ ರೈತರಿಗೆ ನಿರೀಕ್ಷಿಸಿದ ಮಟ್ಟ ದಲ್ಲಿ ಯಾವ ಅನುಕೂಲಗಳೂ ಆಗಲಿಲ್ಲ. ಈ ಮಸೂದೆಯಲ್ಲಿರುವ ಪ್ರಕಾರ ಇವರು **ಹೇಳುವುದು:**

"Stay of proceedings in the case of certain decrees or orders.— Notwithstanding anything contained in any law or judgement or order of any court or competent authority, all proceedings in execution of any decree or order of any court or competent authority for the sale of any land held by an agricultural debtor for realisation of any debt due by him shall, for a period of two years from the commencement of this Act, be stayed."

ಎಂದು ಇದರಲ್ಲಿ ಹೇಳಿದ್ದಾರೆ. ಮತ್ತು ಇದರಲ್ಲಿ ಎರಡು ವರ್ಷಗಳ ಅವಕಾಶ ಇರ ಬೇಕೆಂದು ಮಾಡಿದ್ದಾರೆ. ಹಿಂದೆ ಇದ್ದ ಮಸೂದೆಯಲ್ಲಿ ರೈತರಿಗೆ ಇದ್ದ ಚರ ಹಾಗೂ ಸ್ಥಿರ ಆಸ್ತಿಗಳನ್ನು ಹರಾಜು ಹಾಕಿ ಅವರಿಂದ ಸಾಲವನ್ನು ವಸೂಲು ಮಾಡುತ್ತಿದ್ದರು. ಇಂತಹ ರೈತರಿಗೆ ಯಾವ ವಿಧವಾದ ಸಹಾಯವನ್ನೂ ಮಾಡಿಕೊಟ್ಟಿಲ್ಲ. ಇಂದು ರೈತರಿಗೆ ನಿರೀಕ್ಷಿಸಿದ ಮಟ್ಟದಲ್ಲಿ ಯಾವ ಸಹಾಯವೂ ದೊರಕುತ್ತಿಲ್ಲ. ಈ ಮಸೂದೆ ಬರೀ ಸಿವಿಲ್ ಕೋರ್ಟಿಗೆ ಸೇರಿದ ಡಿಕ್ರಿಗಳಿಗೆ ಮಾತ್ರ ಅನ್ವಯವಾಗುತ್ತೊ ಇಲ್ಲವೇ ಕೋ ಆಪರೇಟಿವ್ ಇಲಾಖೆ ಮೂಲಕ ತೆಗೆದುಕೊಂಡಿರುವ ಸಾಲಗಳಿಗೂ ಇದು ಅನ್ವಯವಾಗುತ್ತದೆಯೋ ಇದರ ಬಗ್ಗೆ ನಮ್ಮ ಮಾನ್ಯ ಸಹಕಾರ ಸಚಿವರು ನಿರ್ದಿಷ್ಟ ವಾಗಿ ಇಲ್ಲಿ ತಿಳಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇದರಲ್ಲಿ ಹೇಳಿರುವಂತೆ ಸಿವಿಲ್ ಕೋರ್ಟುಗಳ ಡಿಕ್ರಿಗಳಿಗೆ ಅನ್ವಯವಾಗುವಂತೆ ಸಹಕಾರ ಇಲಾಖೆಯ ಮೂಲಕ ಸಾಲಗಳನ್ನು ಪಡೆದಿರುವ ರೈತರಿಗೂ ಇದು ಅನ್ವಯವಾಗುವಂತೆ ಮಾಡುವುದೊಳ್ಳೆಯದು. ಇಂದು ನಾವು ಸಹಕಾರ ಇಲಾಖೆಯಲ್ಲಿರುವ ಅಧಿ ಕಾರಿಗಳು ಅವರಿಗೆ ಕೊಡಬೇಕಾದ ಸಾಲಕ್ಕಾಗಿ ರೈತರ ಹತ್ತಿರ ಇದ್ದ ಎತ್ತು ಹಾಗೂ ಅವರ ಮನೆ ಪಾತ್ರೆ ಇತ್ಯಾದಿ ಎಲ್ಲವನ್ನೂ ಹರಾಜು ಹಾಕಿ ಸಾಲಗಳಿಗಾಗಿ ವಸೂಲು ಮಾಡಿಕೊಂಡಿರುತ್ತಾರೆ. ಆದುದರಿಂದ ಇದರಲ್ಲಿ ಯಾವ ರೀತಿಯಾಗಿ ಸಿವಿಲ್ ಕೋರ್ಟುಗಳಿಗೆ ಇದು ಅಪ್ಲೈ ಆಗುತ್ತೋ ಅದೇ ರೀತಿ ಕೋ ಆಪರೇಟಿವ್ ಡಿಪಾರ್ಟು ಮೆಂಟು ಮೂಲಕ ತೆಗೆದುಕೊಂಡ ಸಾಲಗಳಿಗೂ ಇದು ಅಪ್ಲೈ ಆಗುವಂತೆ ಮಾಡ ಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಂದು ಲಕ್ಷಾಂತರ ಮಂದಿ ರೈತರುಗಳು ಸಹಕಾರ ಇಲಾಖೆಯ ಮೂಲಕವಾಗಿಯೇ ಹೆಚ್ಚು ಸಾಲಗಳನ್ನು ಪಡೆದು ಅದನ್ನು ವಾಪಸು ಕೊಡಲು ಶಕ್ತಿ ಇಲ್ಲದೆ ತೊಂದರೆಗೆ ಒಳಗಾಗಿದ್ದರೆ. ಇದರಿಂದ ಅವರ ಚರ ಹಾಗೂ ಸ್ಥಿರ ಆಸ್ತಿಗಳು ಹರಾಜಾಗುತ್ತಿರುವುದನ್ನು ನಾವು ನೋಡುತ್ತಿ ದ್ದೇವೆ. ಬೇರೆ ಯಾವ ಅನುಕೂಲಗಳನ್ನು ಸರಕಾರ ಮಾಡಿಕೊಡಲು ಇಲ್ಲಿ ತರದೇ ಇದ್ದರೂ ಇದರಲ್ಲಿ ತಂದಿರುವಂತೆ ಸಿವಿಲ್ ಕೋರ್ಟುಗಳ ಡಿಕ್ರಿಗೆ ಅನ್ವಯವಾಗುವಂತೆ ಸಹಕಾರ ಇಲಾಖೆಯ ಸಾಲಗಳಿಗೂ ಇದು ಅನ್ವಯವಾಗುವಂತೆ ಮಾಡಬೇಕು ಕಳೆದ ಎರಡು ವರ್ಷಗಳ ಹಿಂದೆ ಯಾವ ಆಕ್ಟ್ ಇತ್ತೋ ಅದನ್ನು ನಾನು ಇಲ್ಲಿ ಚರ್ಚೆ ಮಾಡುತ್ತಿಲ್ಲ, ಸರಕಾರ ರೈತರ ಅಸಹಾಯಕತೆಯನ್ನು ತಿಳಿದುಕೊಂಡು ಇಷ್ಟು

ಸಹಾಯವನ್ನು ಮಾಡಲು ಇಲ್ಲಿ ಒಂದು ಮಸೂದೆ ತಂದಿದ್ದಾರೆ ಮತ್ತು ಇದರಿಂದ ರೈತರಿಗೆ ತೊಂದರೆಯಾಗಬಾರದು ಎಂದು ಮಾಡಿದ್ದಾರೆ. ಮುಂದೆ ರಾಜ್ಯ ಸರಕಾರ ನಾನು ಹೇಳಿರುವ ಎಲ್ಲ ವಿಚಾರಗಳನ್ನೂ ಗಮನಕ್ಕೆ ತೆಗೆದುಕೊಂಡು ಒಂದು ಸಮಗ್ರವಾದ ಸಹಕಾರ ಮಸೂದೆಯನ್ನು ಇಲ್ಲಿ ತಂದು ರೈತರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ಸಚಿವರು ಏನೊಂದು ಹೊಸ ಮಸೂದೆ ಮಂಡಿಸಿದ್ದಾರೆ. ಇದರಿಂದ ರೈತರ ಋಣಭಾರವನ್ನು ಕಡಿಮೆ ಮಾಡಲು ಇದರಲ್ಲಿ ಹಿಂದೆ ಒಂದು ಮಸೂದೆ ಮಾಡಿದ್ದರು. ಆ ಕಾಯಿದೆ ಅನ್‌ಕಾನ್‌ಸ್ಟಿಟ್ಯೂಷನಲ್ ಎಂದರೆ ರಾಜ್ಯಾಂಗಕ್ಕೆ ವಿರೋಧವಾದುದು ಎಂದು ಮೈಸೂರು ಹೈ ಕೋರ್ಟಿನವರು ಒಂದು ತೀರ್ಪು ಕೊಟ್ಟರು. ಇದರ ಮೇಲೆ ರಾಜ್ಯ ಸರಕಾರದವರು ಇಂದು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಸಲ್ಲಿಸಿದ್ದಾರೆ. ಇದರ ಬಗ್ಗೆ ಇನ್ನೂ ಅಂತಿಮ ತೀರ್ಪು ಬರಲಿಲ್ಲ. ಇದಕ್ಕಾಗಿ ಇಲ್ಲಿ ಇಂತಹ ಒಂದು ಮಸೂದೆ ತಂದು ಸಿವಿಲ್ ಕೋರ್ಟುಗಳಲ್ಲಿ ಆಗಿರುವ ಡಿಕ್ರಿಗಳ ಬಗ್ಗೆ ರೈತರ ಸಾಲವನ್ನು ವಸೂಲು ಮಾಡಕೂಡದು ಎಂದು ಇದರಲ್ಲಿ ಎಕ್ಸಿಕೂಷನ್ ಕೇಸುಗಳನ್ನು ಎರಡು ವರ್ಷಕಾಲ ಜಾರಿಗೆ ಕೊಡಕೂಡದು ಎಂದು ತಂದಿದ್ದಾರೆ. ಎಂದರೆ ಎರಡು ವರ್ಷಕಾಲ ಇದನ್ನು ತಡೆಹಿಡಿಯಬೇಕು ಎನ್ನುವುದು ಇದರ ಉದ್ದೇಶ. ರೈತರ ಋಣ ಪರಿಹಾರ ಮಾಡಲು ಇಂತಹ ಒಂದು ಮಸೂದೆ ಈ ಸರಕಾರ ಮಾಡಿದ್ದಲ್ಲ, ಹಿಂದಿನ ಸರಕಾರವೇ ಇದನ್ನು ಮಾಡಿತ್ತು ಇದನ್ನು ಈಗ ಹೊಸದಾಗಿ ಮಂಡಿಸುತ್ತಿದ್ದಾರೆ ಅಷ್ಟೇ. ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಸಚಿವರು ಇಂತಹ ಒಂದು ಮಸೂದೆ ತರಲು ಕಾರಣವಾದರೂ ಏನಿತ್ತು ಎನ್ನುವುದನ್ನು ಅವರು ಹೇಳಿದರು. ನಮ್ಮ ರಾಜ್ಯದಲ್ಲಿ ಮನಿ ಲೆಂಡರ್ಸ್ ಆಕ್ಟ್ ಪ್ರಕಾರ ರೈತರಿಗೆ ಸಾಲಗಳನ್ನು ಎಷ್ಟೋ ಜನರು ಕೊಡುತ್ತಿದ್ದರು. ಇದರಲ್ಲಿ ಶ್ರೀಮಂತ ವರ್ಗ ಎಂದು ಹೇಳುತ್ತಾರೆ, ನಾವೂ ಕೂಡ ಪದೇ ಪದೇ ಇದೇ ಹಾಡನ್ನೇ ಇಲ್ಲಿ ಹೇಳುತ್ತಿದ್ದೇವೆ. ಇದರಲ್ಲಿ ಶೋಷಣೆಗೆ ಒಳಗಾಗಿರುವ ವರ್ಗ ಮತ್ತು ಶೋಷಣೆ ಮಾಡುವ ವರ್ಗ ಎಂದು ನಾವೂ ಹೇಳುತ್ತಿದ್ದೇವೆ. ಈ ಸರಕಾರವೇನೂ ಈ ಕಾನೂನನ್ನು ತರಲಿಲ್ಲ. ಇದನ್ನು ಹಿಂದಿನ ಸರಕಾರವೇ ಮಾಡಿತ್ತು. ಹಿಂದೆ ಇದ್ದ ಕಾನೂನು ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂದು ಹೈ ಕೋರ್ಟಿನವರು ತೀರ್ಪು ಕೊಟ್ಟರು. ಇದರ ಮೇಲೆ ರಾಜ್ಯ ಸರಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದ್ದಾರೆ. ಈ ಅಪೀಲು ಇನ್ನೂ ನಿರ್ಣಯವಾಗಿಲ್ಲ. ಎಲ್ಲರೂ ಇಲ್ಲಿ ರೈತರ ಪರಿಸ್ಥಿತಿ ಬಗ್ಗೆ ಬಹಳವಾಗಿ ಹೇಳುತ್ತಿದ್ದಾರೆ. ಈ ದೇಶದಲ್ಲಿ ರೈತರ ಸ್ಥಿತಿ ಬಹಳ ಕಷ್ಟವಾಗಿದೆ ಇವರನ್ನು ಸುಧಾರಿಸಬೇಕು ಎಂದು ರೈತರಲ್ಲಿ ಬಹಳ ಪ್ರೇಮ

ಇಟ್ಟಿರುವಂತೆ ಅವರು ಹೇಳುವ ಮಾತುಗಳಿಂದ ಭಾಸವಾಗುತ್ತದೆ. ಆದರೆ ಇದರಲ್ಲಿ ವೃತ್ತಿ ಏನೇ ಇರಲಿ ವಕೀಲರ ವೃತ್ತಿ ಮಾಡುವವರು ಇರಬಹುದು ಇಲ್ಲವೇ ಡಾಕ್ಟರುಗಳ ವೃತ್ತಿ ಇರಬಹುದು ಎಂದು ಮಾನ್ಯ ಸದಸ್ಯರಾದ ಶ್ರೀ ಭಂಗಿಯವರೂ ರೈತರ ಬಗ್ಗೆ ಬಹಳವಾಗಿ ಹೇಳಬಹುದು. ಇವರಲ್ಲಿ ಅವರ ದೃಷ್ಟಿ ಎಲ್ಲಿ ಕೇಂದ್ರಿಕೃತವಾಗಿದೆ ಎಂದರೆ ಅದು ಬ್ಯಾಲಟ್ ಬಾಕ್ಸ್‌ನ ಕಡೆಗೆ ಅವರ ಗುರಿ, ಇಂದು ರೈತರಿಗೆ ಸಾಲವನ್ನು ಯಾವ ಯಾವ ತರಹದ ಜನ ಕೊಡುತ್ತಿದ್ದಾರೆ ಎನ್ನುವುದನ್ನು ನಾವು ಮೊದಲು ಸ್ವಲ್ಪ ತಿಳಿದುಕೊಳ್ಳಬೇಕು. ಹಳ್ಳಿಯಲ್ಲಿರುವ ರೈತರಿಗೆ ಪಟ್ಟಣದಲ್ಲಿನ ಶ್ರೀಮಂತರು ಸಾಲ ಕೊಡುವುದಿಲ್ಲ. ನಗರದಲ್ಲಿರುವ ಒಬ್ಬ ಶ್ರೀಮಂತರೂ ಹಳ್ಳಿಗಾಡಿನ ರೈತರಿಗೆ ಸಾಲ ಕೊಡುತ್ತಿಲ್ಲ. ಹಳ್ಳಿಯಲ್ಲಿರುವ ರೈತರ ಅಕ್ಕಪಕ್ಕದ ಮನೆಯಲ್ಲಿರುವವರು ರೈತರ ಪರಿಸ್ಥಿತಿಯನ್ನು ತಿಳಿದುಕೊಂಡು ಅವರಿಗೆ ಸಾಲ ಕೊಡತಕ್ಕ ಪದ್ಧತಿ ನಡೆದುಕೊಂಡು ಬಂದಿದೆ, ಇಂದು ನಗರಕ್ಕೆ ಒಬ್ಬ ರೈತ ಬಂದರೆ ಅವನಿಗೆ ಸಾಲ ಸಿಗಬೇಕಾದರೆ ಅವನ ಹೆಂಡತಿ ಮೈಮೇಲಿರುವ ಚಿನ್ನದ ಅಡ್ಡಿಗೆ ಕೊಟ್ಟರೆ ಅದನ್ನು ಇಟ್ಟುಕೊಂಡು ಶೆಟ್ಟರು ಸಾಲ ಕೊಡಬಹುದು, ಇಲ್ಲದೇ ಇದ್ದರೆ ನಗರಗಳಲ್ಲಿರುವ ಯಾವ ಶ್ರೀಮಂತರೂ ಹಳ್ಳಿಗಾಡಿನ ರೈತರಿಗೆ ಸಾಲ ಕೊಡುವುದಿಲ್ಲ. ಹಿಂದೆ ಇಲ್ಲೂ ಕೂಡ ರೈತರಿಗೆ ಯಾವ ರೀತಿ ಪರಿಹಾರ ಕೊಡುತ್ತಿದ್ದಾರೆ ಎನ್ನುವುದನ್ನೂ ಹೇಳಿದ್ದಾರೆ. ಸಹಕಾರ ಸಂಘಗಳು ಒಂದನ್ನು ಬಿಟ್ಟರೆ ಬೇರೆ ಯಾರೂ ರೈತರಿಗೆ ಸಹಾಯ ಮಾಡುತ್ತಿಲ್ಲ ಮತ್ತು ಎಲ್ಲೂ ಸಾಲ ಸಿಗುವುದಿಲ್ಲ. ಇಂದು ಸಹಕಾರ ಸಂಘಗಳಲ್ಲಿ ರೈತರ ಬಗ್ಗೆ ವಿಶ್ವಾಸ ಇರುವವರೇ ಸಾಲ ಕೊಡಿಸಿ ಮುಂದೆ ಅಂತಹ ಸಂಘಗಳಿಗೆ ಟೋಪಿ ಹಾಕುವುದನ್ನು ನಾವು ನೋಡುತ್ತಿದ್ದೇವೆ. ಇಂದು ಯಾವ ರೈತರಿಗೂ ಯಾರೂ ಸಾಲ ಕೊಡುತ್ತಿಲ್ಲ. ಏನಾದರೂ ಚಿನ್ನ ಕೊಟ್ಟರೆ ಅದರ ಆಧಾರದ ಮೇಲೆ ಏನಾದರೂ ಸ್ವಲ್ಪ ಸಾಲ ಕೊಡಬಹುದು. ನನಗೆ ಇದರಲ್ಲಿ ಒಂದು ಅನುಮಾನ ಬಂದಿದೆ, ಆದಕ್ಕಾಗಿ ನಾನು ಸಹಕಾರ ಇಲಾಖೆಯ ಸಚಿವರಲ್ಲಿ ಕೇಳುವುದು ಇಂದು ನಮ್ಮ ರಾಜ್ಯದಲ್ಲಿ ಎಷ್ಟು ಡಿಕ್ರಿ ಕೇಸುಗಳು ಎಕ್ಸಿಕೂಷನ್ ಆಗದೇ ನಿಂತಿವೆ ಎನ್ನುವ ವಿವರಗಳನ್ನು ನಮಗೆ ಒದಗಿಸಿಕೊಡಬೇಕು.

ಏಕೆಂದರೆ ರೈತರಿಗೆ ರುಣ ಪರಿಹಾರ ಒದಗಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ತೀರ್ಮಾನವಾಗುವವರೆಗೆ ಈ ಒಂದು ಕಾನೂನನ್ನು ಮಾಡಿದರೆ ಅವರಿಗೆ ಪರಿಹಾರ ದೊರಕುತ್ತದೆಂಬ ದೃಷ್ಟಿಯಿಂದ ಏನು ಈ ಒಂದು ಏಧೇಯಕವನ್ನು ತರುತ್ತಿದ್ದೀರಿ. ಇದು ಸ್ವಾಗತಾರ್ಹವಾದುದಾದರೂ ಸಹ, ಮುಖ್ಯವಾಗಿ ರೈತರಿಗಿರುವ ಸಮಸ್ಯೆಗಳನ್ನು ತಾವು ಅರಿತುಕೊಂಡರೆ ಒಳ್ಳೆಯದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ಸರ್ಕಾರದವರು ಹೇಳುವುದೇನಂದರೆ, ರೈತರನ್ನು ಶೋಷಣೆ ಮಾಡುತ್ತಿರುವವರು ಶ್ರೀಮಂತರು ಎಂದು. ಆದರೆ ನಾನು ಹೇಳುತ್ತೇನೆ; ಸರ್ಕಾರ ಕೂಡ ಒಂದು ದೊಡ್ಡ ಶೋಷಿತ ವರ್ಗವಾಗಿದೆ ಎಂದು. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಮುಖ್ಯವಾಗಿ ಸಹಕಾರ

ಸಚಿವರು ಇದನ್ನು ತಿಳಿದುಕೊಂಡರೆ ಒಳ್ಳೆಯದು. ಶೋಷಿತ ವರ್ಗದವರ ಪೈಕಿ ಸರ್ಕಾರ ಪ್ರಥಮ ಸ್ಥಾನ ಪಡೆಯುತ್ತದೆ. ಶ್ರೀಮಾನ ಹುಚ್ಚಮಾಸ್ತಿಗೌಡರು ಸಭೆಯಲ್ಲಿ ಇಲ್ಲ. ನಾನೂ ಸಹ ಇಂದು ಸರ್ಕಾರಕ್ಕೆ ಒಬ್ಬ ಸಾಲಗಾರನಾಗಿದ್ದೇನೆ. ಮತ್ತು ೧೬ ಪರಸೆಂಟ ಬಡ್ಡಿ ಕೊಟ್ಟಿದ್ದೇನೆ. ಸಣ್ಣ ಸಣ್ಣ ರೈತರನ್ನು ಶೋಷಣೆ ಮಾಡುವವರು ಶ್ರೀಮಂತರು ಎಂದು ಪ್ರತಿಪಾದನೆ ಮಾಡುವ ಸರ್ಕಾರವಾದರೂ ಸಹ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಶ್ರೀಮಾನ ಹುಚ್ಚಮಾಸ್ತಿಗೌಡರ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ತಕಾವಿ ಸಾಲ ಕೊಟ್ಟರೆ, ಲ್ಯಾಂಡ ಇಂಪ್ರೂವಮೆಂಟ ಲೋನ ಕೊಟ್ಟರೆ ೬ ಪರಸೆಂಟ ಬಡ್ಡಿ ಕೊಡಬೇಕಾಗುತ್ತದೆ. ಈ ಸಾಲ ಪಡೆದವರು ಒಂದು ವರ್ಷದ ಫಂತರ ಡಿಫಾಲ್ಟರ ಆದರೆ ೯ ಪರ್ಸೆಂಟ ಪೀನಲ್ ಇಂಟರೆಸ್ಟ ಕೊಡಬೇಕು. ಅದರ ಜೊತೆಗೆ ನೋಟೀಸು ಕೊಡುವುದು ವಗೈರೆ ಎಲ್ಲ ಲೆಕ್ಕವನ್ನು ತೆಗೆದುಕೊಂಡರೆ ಒಟ್ಟು ೧೬ ಪರಸೆಂಟ ಬಡ್ಡಿ ಕೊಡಬೇಕಾಗಿದೆ. ನನ್ನ ಹತ್ತಿರ ಇಷ್ಟು ಬಡ್ಡಿ ಕೊಟ್ಟಿರುವ ಬಗ್ಗೆ ರಶೀದಿ ಇದೆ; ಅದರಿಂದ ಹೇಳುತ್ತಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಸಮಯದಲ್ಲಿ ಮುಖ್ಯ ಮಂತ್ರಿಗಳು ಕೆಲವು ಕಡೆ ಭಾಷಣ ಮಾಡುತ್ತಾ ಶ್ರೀಮಂತರೇ ಸರ್ಕಾರಕ್ಕೆ ಹೆಚ್ಚಾಗಿ ಕೊಡಬೇಕಾಗಿರುವ ಬಾಕಿಯನ್ನು ಉಳಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರಿಗೆ ಸರ್ಕಾರದಿಂದ ಸಾಲ ತೆಗೆದುಕೊಂಡ ಅನುಭವವಿರಲಾರದು; ಏಕೆಂದರೆ ಅವರಿಗೆ ಬ್ಯಾಂಕಗಳಲ್ಲಿ ಸಾಲ ಸಿಗಬಹುದು. ಆದರೆ ಇಂದು ಸರ್ಕಾರದವರು ಶೋಷಣೆಗೆ ಒಳಗಾಗಿರುವ ರೈತರನ್ನು ಆದರಲ್ಲಿಯೂ ತಿಳಿವಳಿಕೆ ಇಲ್ಲದ ರೈತರನ್ನು ವಿಮುಕ್ತರನ್ನಾಗಿ ಮಾಡುತ್ತೇವೆಂದು ಹೇಳುವಾಗ, ಸರ್ಕಾರದವರೇ ೧೭-೧೮ ಪರ್ಸೆಂಟ ವರೆಗೆ ಬಡ್ಡಿ ಹಾಕುವುದೇ ಸರಿಯೇ ? ಮನಿಲೆಂಡರ್‌ಗಳಿಗೆ ೧೨ ಪರ್ಸೆಂಟ ಬಡ್ಡಿ ವಸೂಲ ಮಾಡುವುದಕ್ಕೆ ಈ ಮೊದಲು ಅವಕಾಶವಿತ್ತು. ಇಂದು ಅವರಿಗೂ ಸಹ ೧೮ ಪರ್ಸೆಂಟ ವರೆಗೆ ವಸೂಲ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಸರಿಯೇ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಸಣ್ಣ ರೈತರು ಎಂದರೆ ಯಾರು, ಅವರ ವರಮಾನ ಎಷ್ಟಿರಬೇಕು ಎಂಬ ಬಗ್ಗೆ ಇಲ್ಲಿ ಹೇಳಿದ್ದೀರಿ. ಒಬ ಸಣ್ಣ ರೈತ ಜೀವರು ಸುರಿಸಿ ೫೦೦ ರೂಪಾಯಿ ಸಂಪಾದನೆ ಮಾಡಿರುತ್ತಾನೆ ಅಥವಾ ತನ್ನಲ್ಲಿರುವ ಕರುವನ್ನು ಮಾರಿ ೫೦೦ ರೂಪಾಯಿಗಳನ್ನು ಇಟ್ಟಿರುತ್ತಾನೆ ಎಂದು ಇಟ್ಟುಕೊಳ್ಳೋಣ. ಆ ಹಣವನ್ನು ಪಕ್ಕದ ಮನೆಯವರಿಗೆ ಅವರ ಕಷ್ಟಕ್ಕೆ ಎಂದು ಸಾಲ ಕೊಡುತ್ತಾನೆ. ಸಾಲ ಕೊಡುವ ಬಗ್ಗೆ ಅವನು ಮನಿ ಲೆಂಡರ ಲೈಸೆನ್ಸ ತೆಗೆದುಕೊಂಡಿರುವದಿಲ್ಲವಾದ್ದರಿಂದ, ಅವನ ಹಣಕ್ಕೆ ದಗಾ ಹಾಕಬಹುದೆಂದು ಈ ಆಕ್ಟಿನಲ್ಲಿ ಹೇಳುತ್ತೀರಿ ಲಕ್ಷಗಟ್ಟಲೆ ಹಣ ಇಟ್ಟುಕೊಂಡು ವ್ಯವಹಾರ ಮಾಡುವ ಮನಿ ಲೆಂಡರ್‌ಗಳವಿಚಾರ ಬೇರೆ. ಆದರೆ ಒಬ್ಬ ಸಣ್ಣ ರೈತ ಜೀವರು ಸುರಿಸಿ; ದನ, ಕುರಿ ಸಾಕಿ ಸಂಪಾದನೆ ಮಾಡಿದ ೫೦೦ ರೂಪಾಯಿಗಳನ್ನು ಬೇರೆ ಒಬ್ಬ ರೈತನಿಗೆ ಸಾಲವಾಗಿ ಕೊಟ್ಟರೆ, ಆ ಹಣಕ್ಕೆ ಈ ಬಿಲ್ಲಿನಲ್ಲಿ ಏನಾದರೂ ಎಗಜೆಂಷನ ಇದೆಯೇ ಎಂದು ಕೇಳುತ್ತೇನೆ. ನಾವು ಇಂದು ಯಾವ ಯುಗದಲ್ಲಿದ್ದೇವೆಂದರೆ, ಟೋಪಿ ಹಾಕುವ

ಯುಗದಲ್ಲಿದ್ದೇವೆ. ಏಕೆಂದರೆ ಒಬ್ಬ ರೈತ ಕಷ್ಟಪಟ್ಟು ೨೦೦ ಅಥವಾ ೫೦೦ ರೂಪಾಯಿ ಸಂಪಾದನೆ ಮಾಡಿ ಬೇರೆ ಒಬ್ಬ ರೈತನಿಗೆ ಸಾಲವಾಗಿ ಕೊಟ್ಟರೆ, ಅದು ಹೋಯಿತು ಎಂದರೆ, ಹಣ ಕಳೆದುಕೊಂಡವರು ನಮ್ಮಲ್ಲಿಗೆ ಬಂದು ಇದು ಸರಿಯೇ ಎಂದು ಕೇಳುತ್ತಾರೆ. ಈ ದೃಷ್ಟಿಯಿಂದ, ಈ ಆಕ್ಟಿನ ಪರಿಮಿತಿಯೊಳಗೆ ಸಣ್ಣ ಸಣ್ಣ ವ್ಯವಹಾರ ಮಾಡುವ ರೈತರಿಗೆ ದೋಕಾ ಆಗುವ ಅವಕಾಶವಾಗಬಾರದು. ಬೇಕಾದರೆ ೪೦—೫೦ ವರ್ಷಗಳಿಂದ ಬಡ್ಡಿ ತೆಗೆದುಕೊಂಡು ಲಕ್ಷಾಧೀಶ್ವರರಾಗಿರುವ ಮನಿ ಲೆಂಡರ್‌ಗಳಿಗೆ ಇದು ಅನ್ವಯವಾಗಲಿ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳುತ್ತಿದ್ದರು, ಮಾನ್ಯ ಗೋಪಾಲಗೌಡರು ಮೂರುನೂರು ರೂಪಾಯಿಗಳನ್ನು ಸಾಲ ತೆಗೆದು ಕೊಂಡಿದ್ದಕ್ಕೆ ಅವರ ಆಸ್ತಿಯೇ ಹೋಯಿತು ಎಂದು. ಅವರು ಸಾಯುವಾಗ ಯಾವ ಆಸ್ತಿಯನ್ನು ಸಹ ಬಿಟ್ಟು ಹೋಗಲಿಲ್ಲ; ಈ ರೀತಿ ಅನ್ಯಾಯದಿಂದ ಇನ್ನೊಬ್ಬರಿಂದ ಆಸ್ತಿಯನ್ನು ಪಡೆದವರಿಗೆ ಈ ಕಾನೂನಿನಿಂದ ಬಲಿ ಹಾಕೋಣ. ಆದರೆ ಸಣ್ಣ ಸಣ್ಣ ರೈತರಿಗೆ ಇದರಿಂದ ರಕ್ಷಣೆ ಕೊಡುವದು ಒಳ್ಳೆಯದು. ಈ ಆಕ್ಟಿನ ಪರಿಮಿತಿಯೊಳಗೆ ಅದು ಬರಲಾರದೆಂದು ಕಾಣುತ್ತದೆ. ಈ ಒಂದು ಆಕ್ಟನ್ನು ಸಹಕಾರ ಸಂಘಕ್ಕೂ ಸಹ ಅನ್ವಯ ಮಾಡಿ ಎಂದು ಮಾನ್ಯ ಹನುಮೇಗೌಡರು ಹೇಳಿದರು. ಆ ರೀತಿ ಏನಾದರೂ ಅನ್ವಯಮಾಡಿದರೆ ಸಾಲ ವಾಪಸು ಬರುವದಿಲ್ಲ. ಇಂದು ಸಹಕಾರ ಸಂಘಗಳ ಮೂಲಕ ರೈತರನ್ನು ಉದ್ಧಾರ ಮಾಡುತ್ತೇವೆಂದು ಸರ್ಕಾರದವರು ಹೊರಟಿದ್ದಾರೆ. ರೈತರಿಗೆ ಪ್ರೈವೇಟ್ ಮನಿ ಲೆಂಡರ್ಸ ಸಾಲ ಕೊಡುವದಿಲ್ಲ ಎಂದಾಗ, ಕಮರ್ಷಿಯಲ್ ಬ್ಯಾಂಕಿನವರಾಗಲಿ, ಕೋ-ಆಪರೇಟಿವ ಇನ್ಸಟಿಟ್ಯೂಷನ್ಸ ಆಗಲೀ, ಫೈನಾನ್ಸಿಯಲ್ ಕಾರ್ಪೊರೇಷನ್‌ನವರಾಗಲೀ, ಸಾಲ ಕೊಡಬೇಕಾಗುತ್ತದೆ. ಈ ರೀತಿ ಕಾನೂನು ಗಳನ್ನು ಸರ್ಕಾರದವರು ಮಾಡುತ್ತಿರುವದರಿಂದ, ಮನಿ ಲೆಂಡರ್ಸಗೆ ಸಾಲ ಕೊಡ ಬೇಕೆಂಬ ಉತ್ಸಾಹ ಇಲ್ಲವಾಗಿದೆ. ಆದ ಕಾರಣ ಆ ಒಂದು ಹೊಣೆಯನ್ನು ಸರ್ಕಾರ ಹೊರಬೇಕು. ರೈತರಿಗೆ ಬೇಕಾದ ಎಲ್ಲ ರೀತಿಯ ಸಾಲಗಳನ್ನು ವ್ಯವಸಾಯದ ಉಪ ಕರಣಗಳನ್ನು ಕೊಳ್ಳಲು, ಗೊಬ್ಬರ ಮತ್ತು ಬೀಜ ಕೊಳ್ಳಲು ಸಕಾಲದಲ್ಲಿ ಒದಗಿಸ ಬೇಕು. ಸಣ್ಣ ಸಣ್ಣ ರೈತರ ಪರಿಸ್ಥಿತಿಯನ್ನು ಸುಧಾರಿಸಬೇಕು ಎಂಬ ಮೂಲ ಉದ್ದೇಶದಿಂದ ಇಂತಹ ಕಾನೂನುಗಳನ್ನು ತರುವ ಕಾಲದಲ್ಲಿ ಸಾಲ ತೆಗೆದುಕೊಂಡ ರೈತರು ಏನಾದರೂ ಡಿಫಾಲ್ಟರ ಆದರೆ, ಅವರ ಬಗ್ಗೆ ಕೊಯರ್ಸಿವ್ ಸ್ಟೆಪ್ಸ ತೆಗೆದುಕೊಳ್ಳುವಾಗ ವಿವೇಚನೆ ಇರಬೇಕು ಮತ್ತು ವಿವಂಚನೆ ಇರಬೇಕು. ದೊಡ್ಡ ವರು ಏನಾದರೂ ಡಿಫಾಲ್ಟರ್ಸ ಆದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ. ಆದರೆ ೧೦೦—೧೫೦ ರೂಪಾಯಿಗಳ ಬಾಕಿ ಇಟ್ಟುಕೊಂಡಿರುವ ಸಣ್ಣ ಸಣ್ಣ ರೈತರ ಮನೆಯ ಊಟದ ಪಾತ್ರೆಗಳನ್ನು ತೆಗೆದು ಹೊರಗೆ ಬಿಸಾಕುವ ಹೇಯ ಕೆಲಸಕ್ಕೆ ಕೈಹಾಕುವು ದಕ್ಕೆ ಹೋಗಬೇಡಿ. ನಮ್ಮಂತಹ ರಾಜಕಾರಣಿಗಳು ಏನಾದರೂ ೫೫ ಸಾವಿರ ರೂಪಾಯಿಗಳ ವರೆಗೆ ಬಾಕಿ ಇಟ್ಟುಕೊಂಡಿದ್ದರೆ ಅಥವಾ ಕಂದಾಯ ಕೊಡದಿದ್ದರೆ ಅಧಿಕಾರಿಗಳು ದಾವಾ ಹಾಕುವದಿಲ್ಲ. ಅದಕ್ಕೆ ಅವರು ಹೆದರುತ್ತಾರೆ. ನಾನು ಯಾವತ್ತೇ ಆಗಲಿ ಕುರಿತು ಈ ಮಾತನ್ನು ಹೇಳುತ್ತಿಲ್ಲ. ಮಂತ್ರಿಗಳು

ಏನಾದರೂ ೨೫ ಸಾವಿರ ರೂಪಾಯಿಗಳಿಗೆ ಬಾಕಿದಾರರಾಗಿದ್ದರೆ ಅವರ ಮೇಲೂ ಸಹ ಅಧಿಕಾರಿಗಳು ದಾವ ಹಾಕುವದಿಲ್ಲ. ನಾನು ವೈಯಕ್ತಿಕವಾಗಿ ಯಾರ ಬಗ್ಗೆಯೇ ಆಗಲಿ ಹೇಳಿ ಅವರ ಮುಖಕ್ಕೆ ಟಾರೆ ಹಾಕುವದಕ್ಕೆ ಹೋಗುವದಿಲ್ಲ. ಆದರೆ ವಿಷಯ ತಿಳಿದುಕೊಂಡಿದ್ದೇನೆ. ವೇಶ್ಯೆ ಕೆಲಸ ಮಾಡಬಾರದೆಂದು ಕಾನೂನು ಇದೆ. ಆದರೆ ಅದನ್ನು ಜಾರಿಯಲ್ಲಿ ತರುವುದಕ್ಕೆ ಕಷ್ಟವಿದೆ. ಯಾರೋ ರಾತ್ರಿ ೧೨ ಗಂಟೆಯಲ್ಲಿ ಎಲ್ಲಿಯೋ ಕುಳಿತಿದ್ದರು ಎಂದು ಪೋಲೀಸಿನವರು ಹಿಡಿದುಕೊಂಡು ಬಂದು, ಬೆಳಗಾದ ಮೇಲೆ ಅವರು ಶಾಸಕರು ಎಂದು ಗೊತ್ತಾದರೆ ಅವರನ್ನು ಬಿಟ್ಟು ಬಿಡುವುದು; ಮುಖ್ಯವಾಗಿ ಕಾನೂನುಗಳನ್ನು ಜಾರಿಗೆ ತರುವುದಕ್ಕೆ ಅಧಿಕಾರಿಗಳಿಗೆ ಕಷ್ಟವಿದೆ. ನಾವೇ ರಾಜ್ಯವಾಳುವವರಾಗಿರುವುದರಿಂದ, ನಮ್ಮ ಮೇಲೆ ಕೇಸ ಹಾಕುವುದಕ್ಕೆ ಅಧಿಕಾರಿಗಳು ತಯಾರಿಲ್ಲ. ಕಾನೂನು ಏನಿದ್ದರೂ ಬಡವರಿಗೆ ಮಾತ್ರ ಅನ್ವಯವಾಗುತ್ತದೆ ಅಷ್ಟೆ. ನಿಜವಾಗಿ ಹೇಳುವುದಾದರೆ ಬಡವರು ಯಾರು ಇದ್ದಾರೆ, ಅಧಿಕಾರಿಗಳ ಮೇಲೆ ಪ್ರಭಾವ ಬೀರುವುದಕ್ಕೆ ಅಶಕ್ತರಾದವರು ಯಾರು ಇದ್ದಾರೆ ಅಂತಹ ಸಣ್ಣ ಸಣ್ಣ ರೈತರಿಗೆ ಇದರಿಂದ ತೊಂದರೆಯಾಗುತ್ತದೆ.

ಇವೊತ್ತು ನಾನು ಇಷ್ಟು ಮಾತ್ರ ಹೇಳುತ್ತೇನೆ. ಇವೊತ್ತು ರೈತ ಏನು ಸಂಕಷ್ಟದಲ್ಲಿದ್ದಾನೆ ಅವನಿಗೆ ಈ ಕಾನೂನುಗಳ ಗೊಂದಲದಲ್ಲಿ ಪ್ರೈವೇಟ ಮನಿ ಲೆಂಡರಿಂದ ಹಣ ದೊರೆಯುವದಿಲ್ಲ. ಸಹಕಾರ ಸಂಘಗಳಿಂದಲೂ ಅವನಿಗೆ ಹಣ ಸಿಕ್ಕುವುದಕ್ಕೆ ಸಾಧ್ಯವಿಲ್ಲ. ಸಹಕಾರ ಸಂಘಗಳಲ್ಲಿ ಅವನಿಗೆ ಹಣ ಸಿಕ್ಕುವುದಕ್ಕೆ ಅಡಚಣೆ ಏನೆಂದರೆ ಅವನು ಸಹಕಾರ ಸಂಘಗಳಲ್ಲಿ ಪಡೆದಂತಹ ಹಣದಲ್ಲಿ ಕೆಲವು ಪರ್ಸೆಂಟೇಜ್ ವಾಪಸ್ಸು ಕೊಡದಿದ್ದರೆ ಮತ್ತೆ ಆ ಸಹಕಾರಸಂಘಗಳಲ್ಲಿ ಅವನು ಸಾಲವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಅವನಿಗೆ ರೀಪೇಯಿಂಗ ಕೆಪ್ಯಾಸಿಟಿ ಇಲ್ಲ, ಎಂದು ಹೇಳುತ್ತಾರೆ. ಅರ್ಹತೆ ಇತ್ಯಾದಿ ಏನೇನೋ ಕೆಲವು ನಿಬಂಧನೆಗಳನ್ನು ಹಾಕಿಕೊಂಡೀದ್ದಾರೆ. ರೈತನಿಗೆ ಸಾಲ ಸಿಕ್ಕಬೇಕು ಎನ್ನುವ ಬಗ್ಗೆ ನಾನು ಸರ್ಕಾರದ ಮೇಲೆ ಆರೋಪಣೆ ಮಾಡುವುದಿಲ್ಲ. ಈಗಿರತಕ್ಕ ವಸ್ತು ಪರಿಸ್ಥಿತಿಯನ್ನು ನಾನು ಹೇಳಿದೆ. ಆದ್ದರಿಂದ ಅವನಿಗೆ ಇರತಕ್ಕ ಸಾಲದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಆಲೋಚನೆ ಮಾಡಬೇಕು. ಅದರ ಜೊತೆಗೆ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳ ಇಲಾಖೆಯಲ್ಲಿ ತಕಾವಿ ಸಾಲಕ್ಕೆ ೧೬ ಪರ್ಸೆಂಟ ಬಡ್ಡಿ ಬೀಳುತ್ತದೆ. ಆ ಬಗ್ಗೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ರೆಸಿಟ್ಸ ಕಳುಹಿಸುತ್ತೇನೆ. ನಾನು ಪಬ್ಲಿಕ್ ಅಕೌಂಟ್ಸ ಚೇರ್ಮನ್ ಆಗಿ ಕೆಲಸವನ್ನು ನಿರ್ವಹಿಸುವಾಗ ನನಗೆ ಈ ಬಗ್ಗೆ ಆಫೀಸರು ಹೇಳಿದ್ದಾರೆ. ೬ ಪರ್ಸೆಂಟ್ ಇಂಟರೆಸ್ಟ, ಡಿಫಾಲ್ಟರುಗಳಿಗೆ ೩ ಪರ್ಸೆಂಟ ಬಡ್ಡಿ ಎಲ್ಲಾ ಸೇರಿಸಿದರೆ ಕೊನೆಗೆ ಅವನಿಗೆ ೧೬ ಪರ್ಸೆಂಟ ಬೀಳುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಪುನರ್‌ಪರಿಶೀಲನೆ ಮಾಡಿ ಅತಿ ಜರೂರಾಗಿ ಒಂದು ಪರಿಹಾರವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ರೈತನಿಗೆ ಸೊಸೈಟಿಯಲ್ಲಿ ತಮಟೆ ಹೊಡೆಯುವುದು ಜೀಪಿನ ಖರ್ಚು, ಆ ಖರ್ಚು ಈ ಖರ್ಚು ಎಲ್ಲಾ ಸೇರಿಸಿ

೨೪ ಪರ್ಸೆಂಟ ಬಡ್ಡಿಯನ್ನು ಹಾಕುವುದಕ್ಕೆ ಸಾಧ್ಯವಿದೆ. ನನ್ನ ತಾಲ್ಲೂಕಿನಲ್ಲಿ ಒಬ್ಬರಿಗೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಿ ೮ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಕ್ಕೆ ಅವನು ೬ ವರ್ಷ ಡಿಫಾಲ್ಟ್ ಆಗಿದ್ದಕ್ಕಾಗಿ ಅವನ ಮೇಲೆ ೧೬ ಸಾವಿರ ಚಿಲ್ಲರೆ ರೂಪಾಯಿಗಳಿಗೆ ದಾವಾ ಹಾಕಿದ್ದಾರೆ. ಇವರನ್ನು ನಾವು ಮನಿ ಲೆಂಡರ್ಸ್ ಎಂದು ಯೋಚನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ರೈತನಿಗೆ ಕೆಲವು ತೊಂದರೆಗಳು ಇವೆ. ಅವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಆಕ್ಟನ್ನು ಕೋ-ಆಪರೇಟೀವ ಸೊಸೈಟಿಯ ಆಕ್ಟಿಗೆ ಅಪ್ಲೈ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಸಣ್ಣ ರೈತರಿಂದ ಸಾಲವನ್ನು ಮತ್ತು ಬಡ್ಡಿಯನ್ನು ವಸೂಲು ಮಾಡತಕ್ಕ ಕ್ರಮ ಏನಿವೆ ಆ ಕ್ರಮವನ್ನು ಸ್ವಲ್ಪ ಮಾರ್ಪಾಡು ಮಾಡಬೇಕು. ಅದಕ್ಕೆ ವ್ಯವಸ್ಥೆ ಮಾಡಬೇಕು. ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವವರಿಗೆ ರೂಲ್ಸ ಅನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಇನ್‌ಸ್ಟಾಲ್‌ಮೆಂಟಿಗೆ ಪೀನಲ್ ಇಂಟರೆಸ್ಟ್ ಹಾಕುವುದು ಇತ್ಯಾದಿ ತೊಂದರೆಗಳು ಏನಿವೆ ಅವುಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ವಸೂಲು ಮಾಡುವ ಬಡ್ಡಿಯನ್ನು ಬಿಡುವುದಕ್ಕಾಗುವುದಿಲ್ಲ. ರೈತನಿಗೆ ಸುಲಭದರದಲ್ಲಿ ಸಾಲ ದೊರೆಯುವಂತೆ ಮಾಡಬೇಕು, ಪೀನಲ್ ಇಂಟರೆಸ್ಟ ಕಡಿಮೆ ಇರಬೇಕು. ಒಂದುವೇಳೆ ಈ ವರ್ಷ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಆಗದಿದ್ದರೆ ಮುಂದಿನ ವರ್ಷ ಬೆಳೆ ಬಂದಾಗ ಅದನ್ನು ವಸೂಲು ಮಾಡುವುದಕ್ಕೆ ಸೂಕ್ತ ಮಾರ್ಪಾಡು ಮಾಡಬೇಕು ಮತ್ತು ಎರಡು ವರ್ಷಗಳ ಕಾಲ ರೈತನ ಕೃಷಿ ಆಸ್ತಿಯ ಮೇಲೆ ಪೂರ್ಣ ರಕ್ಷಣೆ ನೀಡುವ ಮೈಸೂರು ಕೃಷಿ ಸಾಲಗಾರರ ತಾತ್ಕಾಲಿಕ ಮಸೂದೆಯನ್ನು ಏನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—

ಸನ್ಮಾನ್ಯ ಉಪಾಧ್ಯಕ್ಷರೇ, ವ್ಯವಸಾಯಗಾರರ ಸಾಲ ವಸೂಲಿಯ ಬಗ್ಗೆ ಭೂಮಿಯನ್ನು ಜಪ್ತಿ ಮಾಡುವುದನ್ನು ತಡೆ ಹಿಡಿಯುವುದಕ್ಕೆ ಏನು ಮಸೂದೆಯನ್ನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಈ ಬಗ್ಗೆ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಈ ಮಸೂದೆಯ ಪುಟ ೪ ರಲ್ಲಿ ವ್ಯವಸಾಯಗಾರರಿಗೆ ಯಾರು ಯಾರಿಗೆ ಈ ಶಾಸನದ ಪ್ರಯೋಜನ ಸಿಕ್ಕುತ್ತದೆ ಎನ್ನುವುದಕ್ಕೆ ಅಲ್ಲಿ ವಿವರಣೆ ಕೊಟ್ಟಿದ್ದಾರೆ. ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಮೈಸೂರು ಭೂಸುಧಾರಣಾ ಶಾಸನದ ಪ್ರಕಾರ ಯಾರು ಸಂರಕ್ಷಿತ ಗೇಣಿದಾರರಾಗಿದ್ದಾರೆ, ಅಂಥಾ ಸಂರಕ್ಷಿತ ಗೇಣಿದಾರರಿಗೆ ಈ ಶಾಸನದ ಮೂಲಕ ಅವನ ಸಾಲವನ್ನು ವಸೂಲು ಮಾಡುವುದಕ್ಕೆ ಅವನ ಸ್ವಾಧೀನದಲ್ಲಿರುವಂತಹ ಭೂಮಿಯನ್ನು ಜಪ್ತಿ ಮಾಡುವುದಕ್ಕೆ ತಡೆಯನ್ನು ತರುತ್ತಾರೆ ಎಂದು ಇದೆ. ನ್ಯಾಯವಾಗಿ ನೋಡಿದರೆ ಪ್ರೊಟೆಕ್ಟೆಡ್ ಟೆನೆಂಟ್ ಸಂರಕ್ಷಿತ

ಗೇಣಿದಾರ ಎನ್ನುವುದಕ್ಕಿಂತಲೂ ಹೆಚ್ಚಿಗೆ ರಕ್ಷಣೆ ಸಿಕ್ಕಬೇಕಾಗಿರುವುದು ಪ್ರತಿಯೊಬ್ಬ ಗೇಣಿದಾರನಿಗೂ ರಕ್ಷಣೆ ಸಿಕ್ಕಬೇಕಾಗಿದೆ. ೧೨ ವರ್ಷಗಳಿಗಿಂತ ಹೆಚ್ಚು ಅವನು ಜಮೀನನ್ನು ಗೇಣಿಗೆ ವ್ಯವಸಾಯ ಮಾಡುತ್ತಿದ್ದ ಎನ್ನುವುದನ್ನು ರುಜುವಾತು ಮಾಡಿ ಸಾಧಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಮೈಸೂರು ಭೂಸುಧಾರಣಾ ಶಾಸನವನ್ನು ತಿದ್ದುಪಡಿ ಮಾಡಿ ನಾವು ಇಲ್ಲಿ ಗೇಣಿದಾರರಿಗೆ ವಿಶೇಷವಾದ ರಕ್ಷಣೆಯನ್ನು ಕೊಡುವ ಯೋಜನೆಯನ್ನು ಈ ಸಭೆಯಲ್ಲಿ ಮಾಡುತ್ತಿದ್ದೇವೆ. ಅದು ಕಾನೂನಾಗಿ ರಾಷ್ಟ್ರಾಧ್ಯಕ್ಷರ ಅಂಕಿತವನ್ನು ಪಡೆದು ಗೇಣಿದಾರರಿಗೆ ಅವರ ವಶದಲ್ಲಿರುವ ಜಮೀನು ಅವರ ಕೈ ತಪ್ಪಿ ಹೋಗದ ಹಾಗೆ ಅವರಿಗೆ ರಕ್ಷಣೆ ಸಿಕ್ಕಬೇಕಾದರೆ ಸ್ವಲ್ಪ ಸಮಯಬೇಕಾಗುತ್ತದೆ. ಇಂಥಾ ಸಂಧಿಕಾಲದಲ್ಲಿ ತಾತ್ಕಾಲಿಕವಾಗಿ ಅವನಿಗೆ ರಕ್ಷಣೆ ಕೊಡುವ ಕಾನೂನನ್ನು ತರುವಾಗ ಎಲ್ಲಾ ರೈತರಿಗೂ, ಎಲ್ಲಾ ಗೇಣಿದಾರರಿಗೂ ರಕ್ಷಣೆ ಸಿಕ್ಕುವ ಹಾಗೆ ಇದನ್ನು ತಿದ್ದುಪಡಿ ಮಾಡುವದು ಅಗತ್ಯ. ಆದ್ದರಿಂದ ಪ್ರೊಟೆಕ್ಟೆಡ್ ಟಿನೆಂಟ್ ಎಂದು ಇರುವುದನ್ನು ಬದಲಾವಣೆ ಮಾಡಿ ಟಿನೆಂಟ್ ಎಂದು ಇಡುವುದು ಬಹಳ ಅವಶ್ಯ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಡೆ ಕೆಲವು ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ಇನ್ನೂ ಕೆಲವು ಕಡೆಗಳಲ್ಲಿ ವ್ಯವಸಾಯಗಾರರು ೧೦೦ ಕ್ಕೆ ೮೦ ಜನ ಗೇಣಿದಾರರು ಇದ್ದಾರೆ. ಬಹಳ ಮಂದಿ ಸಾಮಾನ್ಯ ಗೇಣಿದಾರರಾಗಿದ್ದಾರೆ. ಅವರ ಸಾಲದಲ್ಲಿ ಹೆಚ್ಚಿನ ಅಂಶ ಗೇಣಿ ಭಾಗದ ಸಾಲ ಇರುತ್ತದೆ. ಇಂಥಾ ಗೇಣಿದಾರರಿಗೆ ಕಾನೂನು ಮೂಲಕ ರಕ್ಷಣೆ ಸಿಕ್ಕುವಂಥಾದ್ದು ಅಗತ್ಯ. ಆ ರೀತಿ ಅವರಿಗೆ ರಕ್ಷಣೆ ಸಿಕ್ಕಿದರೆ ಮಾತ್ರ ನಿಜವಾದ ವ್ಯವಸಾಯಗಾರನಿಗೆ ಸ್ವಂತ ವ್ಯವಸಾಯ ಮಾಡುವವರಿಗೆ ಈ ಕಾನೂನು ಮೂಲಕ ರಕ್ಷಣೆ ಕೊಟ್ಟಹಾಗಾಗುತ್ತದೆ. ಆದ್ದರಿಂದ ಪ್ರೊಟೆಕ್ಟೆಡ್ ಟಿನೆಂಟ್ ಎಂದು ಇರುವುದನ್ನು ಬದಲಾವಣೆ ಮಾಡಿ ಎಲ್ಲಾ ತರಹ ಗೇಣಿದಾರರಿಗೂ ರಕ್ಷಣೆ ಸಿಕ್ಕುವ ಹಾಗೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈ ಕಾನೂನು ಮೂಲಕ ವ್ಯವಸಾಯಗಾರರಿಗೆ ರಕ್ಷಣೆ ಕೊಡುವಾಗ ನಮ್ಮ ಅನುಭವದಲ್ಲಿರುವ ಹಾಗೆ ದೊಡ್ಡ ದೊಡ್ಡ ಶ್ರೀಮಂತರು ಜಮೀನ್ದಾರರು ಏನಿದ್ದಾರೆ ಅವರಿಗೆ ಈ ಗೇಣಿದಾರರು ದುಬಾರಿ ಬಡ್ಡಿ ಕೊಡುವ ಸಾಲಗಾರರಾಗಿದ್ದಾರೆ. ಈ ದೊಡ್ಡ ದೊಡ್ಡ ಜಮೀನ್ದಾರರು ಶ್ರೀಮಂತರು ಹಳ್ಳಿಯ ರೈತನಿಗೆ ಸಾಲ ಕೊಟ್ಟು ಅವರಿಂದ ಒಂದಕ್ಕೆ ಎರಡರಷ್ಟು ಎಂದರೆ ಒಂದು ಸಾವಿರ ರೂಪಾಯಿಗಳನ್ನು ಸಾಲ ಕೊಟ್ಟಿದ್ದರೆ ೨ ಸಾವಿರ ರೂಪಾಯಿಗಳಿಗೆ ಪ್ರೋನೋಟ್ ಬರೆಸಿಕೊಂಡಿದ್ದಾರೆ. ಅದೂ ದುಬಾರಿ ಬಡ್ಡಿಗೆ ರೈತನಿಗೆ ಸಾಲ ಕೊಡುವವರಾಗಿದ್ದಾರೆ. ಆದ್ದರಿಂದ ರೈತರಿಗೆ ರಕ್ಷಣೆ ಕೊಡುವಾಗ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಕ್ಕುವುದಕ್ಕೆ ಬೇಕಾದಂತಹ ಬೇರೆ ವ್ಯವಸ್ಥೆಯನ್ನು ರೂಪಿಸುವುದು ಬಹಳ ಅಗತ್ಯ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಶ್ರೀಮಾನ್ ದೇವೇಗೌಡರು ಏನು ಹೇಳಿದ್ದಾರೆ ಅದನ್ನು ನಾನು ಪುಷ್ಟೀಕರಿಸಿ ಮಾತನಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಯವರು ಹುಣಸೂರಿನಲ್ಲಿ ಕಡಿಮೆ ಬಡ್ಡಿಗೆ ಸಾಲ ಕೊಡಿಸಬೇಕೆಂದು ಹೇಳಿದ್ದಾರೆ.

4-30 P.M.

ಶ್ರೀ ಬಿ. ವಿ. ಕಕ್ಕಿಲಾಯ.—ಅದು ನನಗೆ ಗೊತ್ತಿಲ್ಲ. ಆದರೆ ಕೋ-ಆಪರೇಟಿವ ಸೊಸೈಟಿಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ರೈತರಿಗೆ ಕೊಡುವ ಸಾಲದ ಮೇಲೆ ೯-೧೦ ಪರಸೆಂಟ ಬಡ್ಡಿ ವಸೂಲು ಮಾಡುತ್ತಿದ್ದಾರೆ. ಇವರಿಗೆ ಉಳಿದ ಬ್ಯಾಂಕಿನಿಂದ ಅಥವಾ ರಿಸರ್ವ ಬ್ಯಾಂಕಿನಿಂದ ಮುಕ್ಕಾಲು ಪರಸೆಂಟ ಅಥವಾ ಒಂದು ಪರಸೆಂಟಿಗೆ ಸಿಕ್ಕಿದ ಹಣವನ್ನು ೯-೧೦ ಪರಸೆಂಟಿಗೆ ರೈತರಿಗೆ ಕೊಟ್ಟರೆ, ಇವರು ಬಾಕಿ ರೈತರ ಶೋಷಣೆ ಮಾಡತಕ್ಕಂತಹ ಸಾಹುಕಾರರಿಗಿಂತ ಯಾವ ರೀತಿಯಲ್ಲಿ ಕಡಿಮೆ ಇದ್ದಾರೆ ಎಂದು ಕೇಳುತ್ತೇನೆ. ಈ ರೀತಿ ಕೊಡುವುದರಲ್ಲಿ ಯಾವ ಅರ್ಥವೂ ಇಲ್ಲ. ಇದನ್ನು ಮಾನ್ಯ ಮಂತ್ರಿಯವರು ಯೋಚನೆ ಮಾಡಬೇಕು. ಅದಲ್ಲದೆ ಅವರ ಮೇಲೆ ಪೀನಲ ಇಂಟರೆಸ್ಟ ಸಹ ಹಾಕುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಬಡ ರೈತರಿಗೆ ಕಡಿಮೆ ದರದಲ್ಲಿ ಸಾಲ ಸಿಗಬೇಕೆಂದು ಉದ್ದೇಶ ಇರುವುದು. ಆದರೆ ಇವತ್ತು ಆಗುತ್ತಾ ಇರುವದು ಬೇರೆಯೆ. ಉದಾಹರಣೆಗೆ ದೊಡ್ಡ ದೊಡ್ಡ ಆಟೊಮೊಬೈಲ ಇಂಡಸ್ಟ್ರಿ ಮಾಡುವವರಿಗೆ ೧೦೦ ರೂಪಾಯಿ ಆತ ಶ್ಯಾರ ಹಾಕಿದರೆ ಅದಕ್ಕೆ ಬೇಕಾದಂತಹ ಬಾಕಿ ಎಲ್ಲಾ ಹಣವನ್ನು ಬ್ಯಾಂಕುಗಳ ಮುಖಾಂತರ ಪಡೆಯುವದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಈಗ ಮಾರುತಿ ಕಾರ ಪ್ರೊಜೆಕ್ಟಿಗೆ ೧೦೦೦ ರೂಪಾಯಿ ಭಂಡವಾಳ ಸಂಜಯ ಗಾಂಧಿ ಹಾಕಿದರೆ, ಬಾಕಿ ಭಂಡವಾಳವನ್ನು ಬ್ಯಾಂಕಿನವರು ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನನ್ನ ಮಗನ ಹೆಸರಿನಲ್ಲಿ ಒಂದು ಟ್ರಾಕ್ಟರ ಕಾರಖಾನೆಯನ್ನು ಮಂಡ್ಯದಲ್ಲಿ ಸ್ಥಾಪನೆ ಮಾಡಬೇಕೆಂದು ಇದ್ದೇನೆ. ಅದಕ್ಕೆ ದಯವಿಟ್ಟು ಬ್ಯಾಂಕುಗಳಿಂದ ಭಂಡವಾಳವನ್ನು ತೆಗೆಸಿಕೊಡುತ್ತೀರಾ?

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಹೇಳುವುದು, ನೀವು ಕೈಗಾರಿಕೆಗಳಿಗೆ ಬಹಳ ಮಟ್ಟಿಗೆ ಹೆಚ್ಚಿನ ಸಹಾಯ ಮತ್ತು ಅನುಕೂಲತೆಗಳನ್ನು ಮಾಡಿ ಕೊಡತ್ತಿದ್ದೀರಿ. ಆದರೆ ವ್ಯವಸಾಯಗಾರರಿಗೆ ಯಾವ ಅಂಥ ಅನುಕೂಲಗಳನ್ನು ಸಹ ಮಾಡುತ್ತಾ ಇಲ್ಲ. ಸಾಲ ಕೊಟ್ಟರೂ ಸಹ ಅವರಿಗೆ ಒಂದಕ್ಕೆ ಎರಡರಷ್ಟು ಪೀನಲ ಇಂಟರೆಸ್ಟ ಹಾಕಿ ಈ ನ್ಯಾಷನಲೈಸಡ ಬ್ಯಾಂಕ್ಸ ವಸೂಲು ಮಾಡುತ್ತಿದ್ದಾರೆ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದು ಏಕೆಂದರೆ, ನಮ್ಮ ದೇಶದಲ್ಲಿರತಕ್ಕಂತಹ ಬಹುಸಂಖ್ಯಾತ ಬಡಜನರಿಗೆ ಮತ್ತು ರೈತರಿಗೆ ಸಹಾಯವಾಗಬೇಕೆಂದು. ಆದ್ದರಿಂದ ವ್ಯವಸಾಯಗಾರರಿಗೆ ಬೇಕಾದಂತಹ ವಸ್ತುಗಳನ್ನು, ಗೊಬ್ಬರವನ್ನು ಮತ್ತು ಹಣಕಾಸು ಸಹಾಯವನ್ನು ಬಹಳ ಕಡಿಮೆ ದರದ ಬಡ್ಡಿಗೆ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕು. ಅಲ್ಲದೆ ಅವು

ಗಳನ್ನು ಕೋ-ಆಪರೇಟಿವ ಸೊಸೈಟಿಗಳ ಮುಖಾಂತರ ಒದಗಿಸಿ ಕೊಡಬೇಕು. ಆದರೆ ಮಾನ್ಯ ಸಹಕಾರ ಸಚಿವರು ಹೇಳುವದನ್ನು ಕೇಳಿದರೆ ನನಗೆ ಬಹಳ ವ್ಯಸನವಾಗುತ್ತಿದೆ. ಅವರು, ಒಂದು ಪರಸೆಂಟಿಗೆ ತೆಗೆದುಕೊಂಡದ್ದನ್ನು ೯–೧೦ ಪರಸೆಂಟಿಗೆ ತೆಗೆದು ಕೊಡದಿದ್ದರೆ ಖರ್ಚು ವೆಚ್ಚಗಳನ್ನು ಹೇಗೆ ನಿಭಾಯಿಸುವುದು ಎಂದು ಕೇಳುತ್ತಿದ್ದಾರೆ. ಈ ರೀತಿ ಹೇಳುವದು ಸರಿಯಲ್ಲ. ಇವರು ಅಷ್ಟು ತಲೆಭಾರದ ಖರ್ಚನ್ನು ಏಕೆ ವಹಿಸಿಕೊಳ್ಳಬಾರದು? ಈ ಸಂದರ್ಭದಲ್ಲಿ ಕವಿ ಕುವೆಂಪುರವರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಅವರು ಎಲ್ಲಾ ಭಾರವನ್ನು ವಿಧಾನ ಸೌಧ ಹೊರುತ್ತದೆ. ಅಂದಹಾಗೆ ಎಲ್ಲ ಭಾರವನ್ನು ಬಡ ರೈತನ ಮೇಲೆ ಹಾಕಿದರೆ ಹೇಗೆ ಆತನು ತಡೆದುಕೊಳ್ಳಬೇಕು? ಈ ರೀತಿ ನೀವು ಮಾಡುವದರಿಂದ ದುಬಾರಿ ಬಡ್ಡಿ ವಸೂಲು ಮಾಡುವಂತಹ ಸಾಹುಕಾರರನ್ನು ಹತೋಟಿಯಲ್ಲಿಟ್ಟುಕೊಳ್ಳುವದಕ್ಕೆ ನಿಮಗೆ ನೈತಿಕ ಹಕ್ಕು ಎಲ್ಲಿಂದ ಬರುತ್ತದೆ ಎಂದು ಕೇಳುತ್ತೇನೆ. ಬೇಕಾದರೆ ನೀವು ಮಿನುಗಾರರಿಗೆ ಸಹಾಯ ಮಾಡಿದ ಹಾಗೆ ಮಾಡಬಹುದು. ಈ ಸಾರಿ ಮಿನು ಕಡಿಮೆ ಸಿಗುತ್ತವೆ ಎಂದು ಮಿನುಗಾರ ಕುಟುಂಬಕ್ಕೆ ೫೫೦ ರೂಪಾಯಿ ಬಡ್ಡಿರಹಿತ ಸಾಲವಾಗಿ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಬಡ ರೈತರಿಗೆ ಸಹ ಬಹಳ ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ಕೊಡುವ ಏರ್ಪಾಡು ಮಾಡಬಹುದು. ಆದ್ದರಿಂದ ಕ್ರಡಿಮೆ ದರದ ಬಡ್ಡಿಯಲ್ಲಿ ದೀರ್ಘಾವಧಿಯ ಸಾಲವನ್ನು ಅವರಿಗೆ ಕೊಡಬೇಕು. ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ರೈತರಿಗೆ ಒದಗಿಸುವದರ ಬಗ್ಗೆ ಸರ್ಕಾರ ಆರ್ಥಿಕ ತಜ್ಞರ ಮತ್ತು ರಿಸರ್ವ ಬ್ಯಾಂಕಿನವರ ಸಲಹೆಯನ್ನು ಪಡೆದು ಸಾಲವನ್ನು ಕೊಡುವ ಏರ್ಪಾಡು ಮಾಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri C. M. ARUMUGHAM.—Mr. Deputy Speaker, there is a move on the part of a certain section of this House to topple the Government or change the leadership.

Mr. DEPUTY SPEAKER.—We are now in the midst of the Bill. What the Hon. Member is saying now is beyond the scope of the Bill. I thought he wanted to speak on the Bill.

Sri C. M. ARUMUGHAM.—What is there to speak on this Bill?

Mr. DEPUTY SPEAKER.—I cannot permit that.

Sri C. M. ARUMUGHAM.—Sir, we are interested in the continuance of this Government and its functioning. Since we have passed the budget, we are interested in the continuance of the Ministers. I understand that the Hon. Minister of State for Major Irrigation Sri Nanje Gowda is playing a

leading role in persuading the dissidents to withdraw their signatures. I therefore want a statement from the Government whether the Ministers will continue or whether there will be any change.

Mr. DEPUTY SPEAKER.—Let us have some sense of proportion.

Sri C. M. ARUMUGHAM.—Since some persons have gone to Delhi to represent against the Chief Minister and since there is a talk that the Government may collapse, let the Government come forward and say 'no'. How can we keep quite when some people have gone to Delhi with a memorandum?

Mr. DEPUTY SPEAKER.—That is completely outside the scope. I have understood what the hon. member has said. Not only that. I have also understood what he has in his mind. We are in the midst of discussing the Bill. I call upon the Minister for Co-operation to reply.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಗಹನವಾದ ವಿಚಾರ. ಮಂತ್ರಿ ಮಂಡಲ ಬದಲಾವಣೆಯಾಗತಕ್ಕ ವಿಷಯ ಅಲ್ಲಿ ಚರ್ಚೆಯಾಗುವಾಗ.....

Sri H. D. DEVE GOWDA.—We are eager to know what exactly is the position. We understand that 45 members have signed to remove this ministry. Sri H.N. Nanje Gowda is going round the Hall and sitting with members.

Mr. DEPUTY SPEAKER.—I have called upon the Minister to reply.

Sri H. D. DEVE GOWDA.—75 persons have signed to change the Leader. That is the information I have.

Sri A. SHANKAR ALVA.—Till another ministry comes, this ministry continues. Nothing has happened now.

Sri H. D. DEVE GOWDA.—We want to hear from Sri H. N. Nanje Gowda.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಬಹಳ ಗಣ್ಯವಾದಂಥ ವಿಷಯ. ಆದ್ದರಿಂದ ಈ ವಿಚಾರದಲ್ಲಿ ನಾನೂ ಸಹ ಒಂದು ವಾಕ್ಯವನ್ನು ಹೇಳಬಹುದಲ್ಲವೇ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳನ್ನು ಈಗಾಗಲೇ ಉತ್ತರ ಹೇಳವುದಕ್ಕೆ ಕರೆದಿದ್ದೇನೆ.

MYSORE AGRICULTURAL DEBTORS (Temp. Protection) BILL, 1973—MOTION TO CONSIDER —(Contd.)

†ಶ್ರೀ ಎ. ಶಂಕರ ಆಳ್ವ:—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ವಿಷಯದಲ್ಲಿ ೧೧ ಜನರು ಭಾಗವಹಿಸಿದ್ದಾರೆ. ಆದರೆ ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಎಷ್ಟು ಬಡ್ಡಿ ವಸೂಲುಮಾಡುತ್ತಾರೆ, ಸಹಕಾರ ಸಂಸ್ಥೆಗಳು ಎಷ್ಟು ಬಡ್ಡಿಯನ್ನು ವಸೂಲುಮಾಡುತ್ತಾರೆ, ಬೇಸಾಯಗಾರರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುತ್ತಿದೆಂಬುದಾಗಿ ಅನೇಕ ವಿಷಯಗಳನ್ನು ಹೇಳಿದರು. ಆದರೆ ನನ್ನ ಅರಿಕೆ ಏನೆಂದರೆ, ಈ ಮೈಸೂರು ಆಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಬಿಲ್ ಹೈಕೋರ್ಟಿನಲ್ಲಿ ಸ್ಟ್ರೈಕ್ ಡೌನ್ ಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿರುವುದರಿಂದ ಅದು ಇನ್ನೂ ಅಲ್ಲಿ ಪೆಂಡಿಂಗನಲ್ಲಿದೆ. ಇದನ್ನು ಪಾಸ್ ಮಾಡಿದರೆ ಯಾವ ರೀತಿಯಲ್ಲಿ ರೈತರಿಗೆ ಇದರಿಂದ ಉಪಕಾರ ಮಾಡಬೇಕೆಂಬುದನ್ನು ಪ್ರತ್ಯೇಕವಾಗಿ ಆಲೋಚನೆ ಮಾಡಬೇಕು. ಅವನು ಬಡ್ಡಿ ಜಾಸ್ತಿ ಕೊಡಬಾರದು. ಆದಷ್ಟು ಅದನ್ನು ಅವನಿಗೆ ಕಡಿಮೆ ಮಾಡಬೇಕೆಂದು ಹೇಳುವುದು ಸರಿ. ಈಗ ಅನೇಕ ತರಹ ಕಾನೂನುಗಳು ಬೇರೆ ಬೇರೆ ಭಾಗದಲ್ಲಿ ಬೇರೆಬೇರೆ ರೀತಿಯಲ್ಲಿವೆ. ರೈತರಿಗೆ ಸಾಮಾನ್ಯವಾಗಿ ಡೆಬ್ಟ್ಸ್ ಇರುತ್ತದೆ. ಆದರೂ ಅವನು ತನ್ನ ಆಸ್ತಿಯನ್ನು ಮಾರಾಟ ಮಾಡಬಾರದೆಂದಿರುತ್ತಾನೆ. ಆದರೆ ಅವನ ಬಗ್ಗೆ ಕೋರ್ಟಿಗೆ ಅರ್ಜಿ ಹಾಕಿದರೆ ಅವನ ಡೆಬ್ಟ್ಸ್ ಬಗ್ಗೆ ಎಷ್ಟು ಬಡ್ಡಿ ಬಿಡಬೇಕು, ಎಷ್ಟು ರಿಯಾಯಿತಿ ಕೊಡ ಬೇಕು—ಮುಂತಾದ ಗೊಂದಲಗಳು ಬರುತ್ತಲೇ ಇವೆ. ಆದ್ದರಿಂದ ಅವನ ಆಸ್ತಿ ಮಾರಾಟವಾಗದ ಹಾಗೆ ಸಹಾಯ ಮಾಡುವುದಕ್ಕೆ ಅನೇಕ ಕಾರಣಗಳಿವೆ. ಇಂಥಾದ್ದನ್ನು ಆಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್‌ನಲ್ಲಿ ಒಳನೇ ಕಲಂ ಪ್ರಕಾರ ತೆಗೆದುಹಾಕಿದೆ. ಆದರ ನಂತರ ರಿಟ್ ಹೈಕೋರ್ಟಿಗೆ ಹೋಗಿ ಅದನ್ನು ಅಲ್ಲಿ ತೆಗೆದುಹಾಕಿ ಅಂದರೆ ಅದು ಪುನಃ ರಿವೈವ್ ಆಗುವುದಿಲ್ಲ ಇದರಿಂದ ಬೇಸಾಯಗಾರರಿಗೆ ಏನೂ ಪ್ರೊಟೆಕ್ಷನ್ ಇಲ್ಲ. ಸದ್ಯಕ್ಕೆ ಅವನ ಆಸ್ತಿ ಹಾಗೆಯೇ ಇರಬೇಕು. ಅದನ್ನು ಸದ್ಯಕ್ಕೆ ಮಾರಾಟಮಾಡಬಾರದು. ಈಗ ಇದರ ಬಗ್ಗೆ ಯಾವರೀತಿ ಹೊಸ ಕಾನೂನು ಬರುತ್ತದೋ ಅದನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿರುತ್ತದೆ. ಈಗ ಟೆಂಪೊರರಿಯಾಗಿ ಅಂತಹವರಿಗೆ ಎರಡು ವರ್ಷಗಳವರೆಗೆ ಇದರ ಬಗ್ಗೆ ಪ್ರೊಟೆಕ್ಷನ್ ಕೊಡಲಾಗಿದೆಯೆಂದು ಹೇಳಬೇಕಾಗಿದೆ. ಇನ್ನು ಬೇರೆ ಏನೂ ಇಲ್ಲ. ಇದರಲ್ಲಿ ಯಾವ ಆತಂಕವು ಬರುವುದಿಲ್ಲ. "Notwithstanding anything contained in any law judgment or order of any court or competent authority all proceedings in execution of any decree or order of any court or competent authority for the sale of any land held by an agricultural debtor for realisation of any debt due by him shall, for a period of two years from the Commencement of this Act, be stayed" ಎಂದು

ಇನೇ ಸೆಕ್ಷನ್ನಿನಲ್ಲಿ ಹೇಳಿದೆ ಅವನು ತನ್ನ ಆಸ್ತಿಯನ್ನು ಮಾರಕೂಡದು ಎಂಬುದು ಇದರಲ್ಲಿರುವ ಅಂಶ. ಅಷ್ಟಲ್ಲದೆ ಬೇರೆ ಯಾವುದೂ ಇದರಲ್ಲಿ ಅಡಕವಾಗಿಲ್ಲ. ಈ ಮಸೂದೆಯ ಮೇಲೆ ಮಾತನಾಡಿದ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

Stranger in the Chamber

(At this Stage a Stranger was seen sitting in the L. A. Chamber)

ಶ್ರೀ ಕೋಣಂದೂರು ಲಿಂಗಪ್ಪ.—ಯಾರೋ ಒಬ್ಬರು ಈ ಸದನದ ಸದಸ್ಯರಲ್ಲವೆಂದು ಕಾಣುತ್ತದೆ ಅವರು ಅತ್ತ ಕಡೆ ಬಂದು ಕುಳಿತಿದ್ದಾರೆ. ಅವರು ಯಾರೆಂಬುದು ಗೊತ್ತಿಲ್ಲ.

(At this Stage the Stranger left the Chamber)

Mr. DEPUTY SPEAKER.—He may get out.

Sri C. M. ARUMUGHAM.—Sir, you must find out who he is. If he is not a member he has no right to be here. First of all, he has entered.....

Sri A. SHANKAR ALVA.—As a matter of fact, if it had happened in Parliament he will be fined Rs. 500/-

Mr. DEPUTY SPEAKER.—It is there in the Constitution itself. I am examining the matter.

Sri C. M. ARUMUGHAM.—He must be fined.

Mr. DEPUTY SPEAKER.—Members will have a little patience. Even if he has done, this he is the citizen of India. I will have the matter examined. Our officers have gone to seize him. I will have the whole matter examined.

Sri C. M. ARUMUGHAM.—A stranger is found inside the Hall. Not only that, he was also sitting. Therefore you must take proper action.

Mr. DEPUTY SPEAKER.—Whatever possible action can be taken, will be taken.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿಯಾಗಿ ಈ ಸದನದಲ್ಲಿ ಒಂದು ಸಾರಿ ಬಿಟ್ಟರೆ, ಇದೇ ತರಹ ಮುಂದೆ ಬೇರೆ ಯಾವುದೇ ಸಂದರ್ಭದಲ್ಲಿ ಇಲ್ಲಿ ಬಂದು ಕುಳಿತುಕೊಂಡು ಏನು ಬೇಕಾದರೂ ಅನಾಹುತ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಸಭೆಯಲ್ಲಿ ಪ್ರವೇಶಮಾಡಿದವನಿಗೆ ಈ ಸದನದಲ್ಲಿಯೇ ಸರಿಯಾದ ತಕ್ಕ ಪ್ರಾಯಶ್ಚಿತ್ತ ಆಗಬೇಕಾಗಿದೆ.

Sri C. M. ARUMUGHAM.—It is a reflection on the watch and ward. First thing is, a stranger has been found in the Assembly. Secondly he was found to be sitting in the Assembly.

Sri B. B. SAYANAK:—He was sitting in the chair.

Mr. DEPUTY SPEAKER.—I have been a member of the Assembly for so many years. This is the first time that I have come across an incident of this type. I shall certainly see that the dignity and decorum of the House is maintained and I assure the Hon. Members that whatever action is possible and is reasonable, it will certainly be taken according to law. Hon. members need not have any apprehension about it.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಒಂದು ಅನುಭವವನ್ನು ಈಗ ಹೇಳಿದ್ದೀರಿ. ಈ ಸದನದ ಇತಿಹಾಸದಲ್ಲಿ ಇದೇ ಮೊದಲನೆಯಬಾರಿ ಈ ತರಹ ಪ್ರಾರಂಭವಾಗಿರುವುದು. ಇಂತಹ ಘಟನೆ ಇನ್ನು ಮುಂದೆ ಈ ಸಭೆಯಲ್ಲಿ ಎಂದಿಗೂ ಆಗಬಾರದು. ಇಂತಹ ಒಂದು ಘಟನೆ ನಡೆದಾಗ ಈ ಸಭೆಯಲ್ಲಿ ಏನು ಕ್ರಮವನ್ನು ಅನುಸರಿಸಬೇಕೆಂಬ ಬಗ್ಗೆ ಒಂದು ಹೊಸ ಸಂಪ್ರದಾಯವನ್ನು ಸ್ಥಾಪನೆಮಾಡಬೇಕು. ಹಾಗೆ ಅದನ್ನು ಸ್ಥಾಪನೆಮಾಡುವಾಗ ಅದರ ಬೆಗ್ಗೆ ಏನು ವಿಧಾನವನ್ನು ಅನುಸರಿಸಬೇಕೋ ಅದನ್ನು ಈಗಲೇ ಅನುಸರಿಸಬೇಕು.

Mr. DEPUTY SPEAKER.—That is why I said, please don't have any apprehension. I am anxious that such things should not happen.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಯಾರು ಬಂದಿದ್ದರೋ, ಅದು ನಮಗೆ ಗೊತ್ತಿಲ್ಲ. ಅವರನ್ನು ಕರೆದುಕೊಂಡು ಬಂದವರು ಯಾರೆಂಬುದೂ ಸಹ ನಮಗೆ ಗೊತ್ತಿಲ್ಲ. ಅದರಲ್ಲಿಯೂ ಮುಖ್ಯವಾಗಿ ಆಡಳಿತ ಪಕ್ಷದಲ್ಲಿರತಕ್ಕ ಸದಸ್ಯರು ವಿಧಾನಸಭೆಯ ಒಳಗಡೆ ಅವರನ್ನು ಕರೆದುಕೊಂಡು ಬಂದು ತಮ್ಮ ಅತಿಥಿಗಳನ್ನಾಗಿ ಕುಳ್ಳಿರಿಸಿಕೊಂಡಿರುವುದನ್ನು ನೋಡಿದರೆ, ಈ ಸದನದ ಹಕ್ಕನ್ನು ದುರುಪಯೋಗ ಪಡಿಸಕೊಂಡಂತಾಗುತ್ತದೆ.

Mr. DEPUTY SPEAKER.—Who told you like that? That is too much. How can you say that?

Have you any information tha any person from the Congress party has brought that persons inside the House?

ಶ್ರೀ ಕೋಣಂದೂರ ಲಿಂಗಪ್ಪ.— ಆ ಅಪರಿಚಿತ ವ್ಯಕ್ತಿ ಹೊರಗೆ ಹೋಗುವುದಕ್ಕೆ ಮೊದಲು ಒಬ್ಬ ಕಾಂಗ್ರೆಸ್ ಸದಸ್ಯರ ಹತ್ತಿರ ಬಂದು ಮಾತನಾಡಿ ಹೋದರು. ಅವರು ಹಾಗೆ ಹೊರಗಡೆ ಹೋಗುವುದಕ್ಕೆ ಮುಂಚೆ ಏಕೆ ಅವರು ಆ ಸದಸ್ಯರ ಹತ್ತಿರ ಮಾತನಾಡಿ ಹೋದರು ? ಅದನ್ನು ನೋಡಿದರೆ ಆ ಮಾನ್ಯ ಸದಸ್ಯರೇ ಅವರನ್ನು ಒಳಕ್ಕೂ ಕರೆದುಕೊಂಡು ಬಂದಿರಬಹುದು ಎಂದು ಕಾಣುತ್ತದೆ. ಆದರೆ ಯಾರೇ ಆಗಲಿ ತಮ್ಮ ಅಧಿಕಾರವನ್ನು ಇಷ್ಟು ದುರುಪಯೋಗ ಮಾಡಿಕೊಳ್ಳಬಾರದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ರೂಲಿಂಗ್ ಪಾರ್ಟಿಯ ಸದಸ್ಯರೇ ಅವರನ್ನು ಒಳಗೆ ಕರೆದುಕೆಂಡು ಬಂದಿದ್ದಾರೆಂದು ನೇರವಾಗಿ ಆಪಾದನೆ ಮಾಡಿರುವುದು ಸರಿಯಲ್ಲ. ಅವರು ಅದನ್ನು ರುಜುವಾತು ಮಾಡಬೇಕು, ಇಲ್ಲವೇ ಅದನ್ನು ಅವರು ವಾಪಸ್ ಪಡೆಯಬೇಕು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಆ ಹೊಸಬರು ಹೊರಗೆ ಹೋಗುವುದಕ್ಕೆ ಮೊದಲು ಆ ಸದಸ್ಯರ ಹತ್ತಿರ ಬಂದು ಮಾತನಾಡಿಕೊಂಡು ಹೋದ್ದರಿಂದ ಅವರು ಹಾಗೆ ಹೇಳಿದ್ದಾರೆ ಅಷ್ಟೇ.

Mr. Deputy Speaker.— It is not fair for the Hon. Member Sri Lingappa to say that some Congress Party Member must have brought him here unless he could substantiate it. Therefore you must withdraw it. The other party of your statement that 'ಮಾತನಾಡಿಕೊಂಡು ಹೋದರು,' is also not correct, because there was confusion in this House on all sides. I was also hearing as to what all transpired.

Sri Kagodu Thimmappa.—The Stranger moved just two steps towards Mr. Subhash Patil and then went out.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಆ ಹೊಸಬರು ಗಾಬರಿಯಾಗಿ ಏನು ಎಂದು ಕೇಳಿರಬಹುದು, ಅಲ್ಲಿದ್ದ ಸದಸ್ಯರು, ಹೊರಗಡೆ ಹೋಗಿ ಎಂದು ಹೇಳಿರ ಬಹುದು ಅಷ್ಟೇ.

Mr. Deputy Speaker.— Mr. Lingappa you admit that it is not proper to attribute other hon. Members ?

ಶ್ರೀ ಕೋಣಂದೂರು ಲಿಂಗಪ್ಪ.— ಅವರು ಹೊರಗಡೆಗೆ ಹೋಗುವುದಕ್ಕೆ ಮುನ್ನ ಶ್ರೀ ಸುಭಾಷ್ ಪಾಟೀಲರವರ ಹತ್ತಿರ ಬಂದು ಮಾತನಾಡಿಕೊಂಡು ಹೋದರು. ಅದಕ್ಕೆ ಹಾಗೆ ಹೇಳಿದೆ. ಆದರಿಂದ ಯಾರಿಗಾದರೂ ನೋವಾಗಿದ್ದರೆ ಅದನ್ನು ನಾನು ವಾಪಸ್ ತೆಗೆದುಕೊಳ್ಳುತ್ತೇನೆ.

Mr. DEPUTY SPEAKER.— Let us not presume things. That stranger got confused and probably somebody asked him to go away and he might have gone. So, let the matter rest there. I will examine the position. In future every precaution will be taken.

†Sri D. K. NAIKAR (Minister for Law & Parliamentary Affairs).—Sir, I submit that under rules 319 and 320 of the rules of Procedure discretion has been given to the Hon. Speaker to direct the person to withdraw from the House.

Mr. DEPUTY SPEAKER.— The rules referred to by the Hon. Minister for Law and Parliamentary Affairs refer to admission of strangers in the galleries and withdrawal of strangers from the galleries. That does not pertain strictly to the incident that is before the House.

†Sri C. M. ARUMUGHAM.—Sir, I am really very sorry that the Hon. Minister for Law and Parliamentary Affairs has quoted the rules which are not relevant to the subject matter which is before the House.

ಶ್ರೀ ಬಿ. ವಿ. ಕಕ್ಕಿಲಾಯ.— ಆ ಅಪರಿಚಿತ ವ್ಯಕ್ತಿಯನ್ನು ಮೊದಲು ಈ ಸಭೆಯಲ್ಲಿ ತಂದು ಹಾಜರ್ಮಾಡಲಿ. ಅನಂತರ ಮುಂದಿನ ವಿಚಾರ.

Sri B. B. SAYANAK. — The Speaker has the power to bring that person before the House.

Mr. DEPUTY SPEAKER.— I will read out article 193 of the Constitution. It says:

> "193. If a person sits or votes as a member of the Legislative Assembly or the Legislative Council of a State before he has complied with the requirements of article 188, or when he knows that he is not qualified or that he is disqualified for membership thereof or that he is prohibited from so doing by the provisions of any law made by Parliament or the Legislature of the State, he shall be liable in respect of each day on which he so sits or votes to a penalty of five hundred rupees

to be recovered as a debt due to the State."

It is for the Government to take up the matter.

Sri SHANKAR ALVA.— Sir, once he entered the precincts of the House, it is for the Speaker to deal with that person and take action in the matter.

5-00 P. M.

Sri B. B. SAYANAK.— Sir, the person must be brought before the House.

Sri KAGODU THIMMAPPA.— The man who has committed an offence should be taken to the custody of the Secretary.

Sri C. M. ARUMUGHAM.— He must be brought before the House and action should be taken.

Sri H. SIDDAVEERAPPA (Minister for Health).— Sir, the matter is there and you will have to get it examined and necessary action taken. We cannot proceed immediately.

Sri B. B. SAYANAK.— He must be brought here immediately.

Sri H. SIDDAVEERAPPA.— Sir, Heavens won't fall if the matter is examined by the Speaker. I would like to know for what purpose he should be brought here? I humbly submit that the matter will have to be examined by you, Sir, and found out in the first place who is that man who is said to have entered here, why did he enter, and if he is found guilty, it is for the Chair to suggest any punishment. I request the Chair to please get it examined; it is a matter for the Chair to get it examined.

Mr. DEPUTY SPEAKER.— As I have already said it is not a matter which can be dealt with summarily like that. We are interested to have the matter thoroughly examined and we are equally anxious to give the necessary punishment to the intruder. Nothing will be lost if the hon. member have a little patience. The Hon'ble Minister for Law also pointed out some rules. Let us take some time and have the matter examined thoroughly, because afterwards let it not be said that we did something hurriedly.

Sri D. K. NAIKAR.— As per Article 193, penalty is to be imposed on persons who are sitting inside the House. In this Article there is reference to Article 188. Article 193 does not apply to the strangers. It only pertains to members who have not taken oath and who have participated in the Assembly Article 193 is as follows:—

> "If a person sits or votes as a member of the Legislative Assembly or the Legislative Council of a State before he has complied with the requirements of article 188, or when he knows that he is not qualified or that he is disqualified for membership thereof,....."

Sri KONANDUR LINGAPPA.— 'Not qualified' means a person who is not a member.

Sri D. K. NAIKAR.— Sir, I will read article 188 also. It says.—

> "Every member of the Legislative Assembly or the Legislative Council of a State shall, before taking his seat, make and subscribe before the Governor, or some person appointed in that behalf by him, an oath or affirmation according to the form set out for the purpose in the Third Schedule."

Therefore, only when members of the Legislative Assembly or Legislative Council before taking oath if they participate in a manner as per article 193, provision is provided for penalty.

ಶ್ರೀ ಖಿ. ವಿ. ಕಕ್ಕಿಲಾಯ.— ಓತ್ ತೆಗೆದುಕೊಳ್ಳುವುದಕ್ಕೆ ಮುಂಚೆ ಅಕ್ರಮ ನಡೆದರೆ ಜಾಸ್ತಿ ಪೆನಾಲ್ಟಿ ವಿಧಿಸಲು ಅವಕಾಶವಿರುವಾಗ ಈ ಸಂದರ್ಭದಲ್ಲಿ ಇನ್ನೂ ಜಾಸ್ತಿ ಇರಬೇಕಾಗುತ್ತದೆ. ಏಕೆ ಲಾ ಸಚಿವರು ಹೀಗೆ ಹೇಳುತ್ತಿದ್ದಾರೋ ಗೊತ್ತಾಗುವುದಿಲ್ಲ.

Sri C. M. ARUMUGHAM.— Of course, the first part of the article refers to a member. But the second part says : 'or when he knows that he is not qualified or that he is disqualified or that he is prohibited from so doing by the

provisions of any law made by Parliament or the Legislature of the State, he shall be liable in respect of each day on which he so sits or votes to a penalty of five hundred rupees to be recovered as a debt due to the State'.

ಶ್ರೀ ಕಾಗೋಡು ತಿಮ್ಮಪ್ಪ.— ಆ ಪ್ರದೇಶವನ್ನು ಅರಣ್ಯಕ್ಕೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅವರು ಅಲ್ಲಿ ವಾಸವಾಗಿದ್ದರು. ಆ ಭೂಮಿಯನ್ನು ೧೯೭೦ನೇ ಇಸವಿಯಲ್ಲಿ ಅರಣ್ಯ ಇಲಾಖೆ ವಶಕ್ಕೆ ತೆಗೆದುಕೊಂಡಿರುವುದರಿಂದ, ಅರಣ್ಯ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ೩೦-೪೦ ವರ್ಷಗಳಿಂದ ಅವರು ಅಲ್ಲಿ ವಾಸವಾಗಿದ್ದರು. ಈ ಪ್ರದೇಶವನ್ನು ಕನವರ್‌ಷನ್ ಮಾಡಲು ಎಲಿನೇಟ್ ಮಾಡಬೇಕು; ಎಂದು ತಾಲ್ಲೂಕ ಬೋರ್ಡಿನವರು ಮತ್ತು ಪಂಚಾಯತಿಯವರು ಕೇಳಿದ್ದಾರೆ. ಆದುದರಿಂದ ಖಾಯಂ ಆಗಿ ವಾಸವಾಗಿರತಕ್ಕವರನ್ನು, ಊರು ಮನೆಗಳನ್ನು ಮಾಡಿಕೊಂಡಿರುವವರನ್ನು ಎಬ್ಬಿಸುವುದು ವಾಸ್ತವಿಕವಲ್ಲ.

ಒಂದು ವೇಳೆ ಅಂಥಾವರನ್ನು ಎಬ್ಬಿಸುವುದಾದರೆ ಅವರಿಗೆ ಕೊಡಬೇಕಾದಂಥ ಪರಿಹಾರ ವಗೈರೆಗಳನ್ನು ಕೊಡಬೇಕು. ಅವರಿಗೆ ಏನೂ ಇಲ್ಲದೆ ಹಾಗೆಯೇ ಬಿಟ್ಟು ಬಿಡಿರಿ ಎಂದರೆ ಅಷ್ಟು ಸುಲಭವಾಗಿ ಆಗುವದಿಲ್ಲ. ಒಂದು ವೇಳೆ ಅವರು ಅರಣ್ಯದಲ್ಲಿ ಅತಿಕ್ರಮವಾಗಿ ಹೋಗಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅದು ಬೇರೆ ಮಾತು. ಅವರು ಬಹಳ ವರ್ಷದಿಂದಲೂ ಆ ಸ್ಥಳದಲ್ಲಿ ಇದ್ದು ಮನೆ ಕಟ್ಟಿಕೊಂಡು ಅಲ್ಲೇ ವಾಸ ಮಾಡುವದಕ್ಕೆ ಅರಣ್ಯವನ್ನು ತೆಗೆದುಕೊಂಡಿದ್ದಾರೆ. ಅಂಥಾದ್ದರಲ್ಲಿ ಆ ಪ್ರದೇಶವನ್ನು ಬಿಟ್ಟುಕೊಡಬೇಕು ಎಂದರೆ ಹೇಗೆ?

1-30 P. M.

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಬಹಳ ವರ್ಷದಿಂದಲೂ ಸ್ಥಳದಲ್ಲೇ ಇದ್ದು ಅವರು ಆ ಮಾಲಕಿ ಜಮೀನನ್ನು ತೆಗೆದುಕೊಂಡಿದ್ದರೆ ನಿಜವಾಗಿಯೂ ಅವರಿಗೆ ಆ ಹಕ್ಕು ಬರುತ್ತದೆ. ಅದರಲ್ಲಿ ಸರ್ಕಾರ ಪ್ರವೇಶ ಮಾಡುವದಿಲ್ಲ. ಅದು ಅರಣ್ಯ ಇಲಾಖೆಯಲ್ಲೇ ಇರಲಿ ಅಥವಾ ರೆವಿನ್ಯೂ ಇಲಾಖೆಯಲ್ಲೇ ಇರಲಿ ಆ ಬಯಲು ಜಾಗದಲ್ಲಿ ಯಾರಾದರೂ ಅತಿಕ್ರಮಣ ಪ್ರವೇಶ ಮಾಡಿದ್ದರೆ ಅಂಥಾ ಜನರ ಮೇಲೆ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ.

ಎರಡನೆಯದಾಗಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅವರಿಗೆ ಪರಿಹಾರದ ವಿಷಯವಾಗಿ ಹೇಳಿದ್ದಾರೆ. ಅವರು ಸರಕಾರದ ಪಟ್ಟಿ ತೆಗೆದುಕೊಂಡಿದ್ದು ಆ ಜಮೀನನ್ನು ಅವರದೇ ಎಂದು ಸಾಬೀತು ಮಾಡಿಕೊಟ್ಟರೆ ಅವರಿಗೆ ಅವಶ್ಯವಾಗಿ ಪರಿಹಾರ ಕೊಡುವದಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹಿಂದು ಮುಂದು ನೋಡುವುದಿಲ್ಲ ಎಂದು ಹೇಳುತ್ತೇನೆ.

(iii) re : Acute scarcity of Kerosene and Diesel oil in Tiptur Taluk.

Sri T. M. MANJUNATH (Tiptur).—I call the attention of the Minister of State for Food and Civil Supplies to the acute scarcity of kerosene and diesel oil in Tiptur Taluk.

Smt. E. E. VAZ (Minister for Food and Civil Supplies).—Sir, I make the following Statement:

Reports are being received of shortage of Kerosene and Diesel Oil from all parts of the State now and then. The State receives its supplies from the two refineries at Madras and Cochin and storage points in Goa and Guntakal fed by Bombay and Vizag refineries respectively. Some times, supplies are badly affected due to snags developing in the working of the refineries etc., and transport bottlenecks.

Shortage of Kerosene and Diesel Oil is country-wide phenomena and not peculiar to the Mysore State alone. However, close contacts are being maintained with the local representatives of the supplying firms with a view to ensure equitable distribution of the available supplies and to meet all our demands to the extent possible. All the enforcement authorities have been requested to enforce the control orders effectively and to book the offenders.

The following quantities of High Speed Diesel Oil and Kerosene Oil were reported to have been received in Tiptur Taluk during the month of April 1973.

i) High Speed Diesel Oil	75,400 litres
ii) Kerosene Oil	74,900 litres

The Deputy Commissioner, Tumkur, has reported that the quantities of High Speed Diesel and Kerosene Oil received in April 1973 in Tiptur Taluk was adequate for the normal requirements of the public and that, the Tahsildar has been instructed suitably to see that stocks are properly distributed.

ಶ್ರೀ ಟಿ. ಎಂ. ಮಂಜುನಾಥ್.—ಈ ವಿಚಾರದಲ್ಲಿ ನಾನು ಕೇಳುವುದು ಏನೆಂದರೆ ಮೊದಲನೆಯದಾಗಿ ಮದ್ರಾಸ ಮತ್ತು ಕೊಚಿನ ರಿಫೈನರೀಸ್‌ಗೂ ಮತ್ತು ಇಂಡಿಯನ್ ಆಯಿಲ್ ಕಂಪನಿಗೂ ಏನಾದರೂ ಸಂಬಂಧ ಇದೆಯೇ ?

ಎರಡನೆಯದಾಗಿ ಬೇರೆ ಕಡೆಗಳಲ್ಲಿ ಇಂಡಿಯನ್ ಆಯಿಲ್ ಕಂಪನಿಯವರು ನಿಗದಿ ಮಾಡಿರತಕ್ಕಂಥ ಧಾರಣೆಗಿಂತ ಹೆಚ್ಚು ಧಾರಣೆಗೆ ಮಾರುವುದಕ್ಕೆ ಕಾರಣ ಏನು ? ಆದರೆ ನಮ್ಮ ನಮ್ಮ ತಾಲೂಕಿನಲ್ಲಿರುವ ಇಂಡಿಯನ್ ಆಯಿಲ್ ಕಂಪನಿ ಏಜೆನ್ಸೀಸ್ ಏನು ಇದ್ದಾರೆ ಅವರು ಸರಿಯಾಗೇ ಕೊಡುತ್ತಿದ್ದಾರೆ, ಅವರು ಬಹಳ ಪ್ರಾಮ್ಪ್ಟ್ ಆಗಿ ಮಾರುತ್ತಿದ್ದಾರೆ. ಆದರೆ ಬೇರೆ ಕಡೆಯಲ್ಲಿ ಬೇರೆ ರೇಟಿನಲ್ಲಿ ಮಾರುತ್ತಿದ್ದಾರೆ ಎಂದು ನಾನು ಕೇಳಿದ್ದೇನೆ. ಮತ್ತು ನಾನೇ ಒಂದು ತಾಲೂಕಿಗೆ ಹೋಗಿದ್ದಾಗ ನೋಡಿದೆ, ಹಳ್ಳಿಯಲ್ಲಿರುವ ಎಷ್ಟೋ ಜನಗಳಿಗೆ ದೀಪ ಇಲ್ಲದೆ ಪಟ್ಟಣಗಳಿಗೆ ಬಂದು ಶೀಮೆಯೆಣ್ಣೆ ತೆಗೆದುಕೊಂಡು ಹೋಗಲು ಡಬ್ಬ ಮತ್ತು ಶೀಶೆಗಳನ್ನು ತಂದರೆ ಶೀಮೆಯೆಣ್ಣೆ ಸಿಗದೆ ವಾಪಸ್ಸು ತೆಗೆದುಕೊಂಡು ಹೋಗುತ್ತಿದ್ದರು. ಮತ್ತು ಎಷ್ಟೋ ಬಾವಿಗಳಲ್ಲಿ ನೀರು ಕಡಿಮೆಯಾಗಿರುವದರಿಂದ ಪಂಪು ಸೆಟ್ಟುಗಳಿಗೆ ಡೀಸಲ್ ಉಪಯೋಗಿಸಬೇಕಾಗಿರುವದರಿಂದ ಅವರಿಗೆ ಡೀಸಲ್ ಸರಿಯಾಗಿ ಸಿಕ್ಕುತ್ತಾ ಇಲ್ಲ. ಈ ರೀತಿ ತೊಂದರೆ ಇರುವದರಿಂದ ಮುಂದೆ ನಮ್ಮ ತಾಲ್ಲೂಕಿಗೆ ಎಷ್ಟು ಬೇಕೋ ಅಷ್ಟನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ.— ನಮಗೆ ಜಾಸ್ತಿ ಬಂದರೆ ಜಾಸ್ತಿ ಕೊಡಲಿಕ್ಕೆ ಏರ್ಪಾಡು ಮಾಡುತ್ತೇನೆ.

ಎರಡನೆಯದಾಗಿ ಈ ರೀಫೈನರೀಸಯಿಂದ ಬರುವುದು ಸೆಂಟ್ರಲ್ ಗೌರ್ವನಮೆಂಟ್ ಅವರು ಸ್ಟೇಟಿಗೆ ಎಷ್ಟು ಅಲಾಟ್ ಮಾಡುತ್ತಾರೋ ಅಷ್ಟು ಬರುತ್ತದೆ. ನಮಗೂ ಅವರಿಗೂ ಸಂಬಂಧವಿಲ್ಲ.

iv) re : Smuggling of Jowar to Maharashtra from Gulbarga and Yadgir.

Sri MALLIKARJUN KHARGE.— (Gurmitkal) I call the attention of the Minister of State for Food and Civil Supplies to the smuggling of Jowar to Maharashtra from Gulbarga and Yadgir.

Smt. E. E. Vaz.—(Minister for Food and Civil Supplies) Sir, I make the following Statement:

It is not correct to say that daily 8-9 lorries of Jowar are being smuggled from Yadgir and Gulbarga to Maharastra and that the police are responsible for the same. Large number of cases of smuggling from Aland and Afzalpur side have been detected by the local police as well as by the Officers of C.I.D. during the period from 1-10-1972 to 31-3-1973 i. e. for a period of 6 months. 43 cases of smuggling of foodgrains to Maharashtra were detected by the local police. In these cases 632 bags of Jowar, 54 bags of rice, 386 bags of parched rice and $7\frac{1}{2}$ bags of maize were seized. Two cases of smuggling of foodgrains to Andhra Pradesh involving 18 bags of jowar and 78 bags of bajara were also detected.

During the same period, the Food Cell of C. I. D. has detected as many as 75 cases in Gulbarga district alone involving 450 quintals of rice, 275 quintals of jowar, 32 quintals of sugar, 1452 bags of parched rice, 23 bags of puffed rice and 1.75 quintals of maize.

It may therefore, be seen that the Police have taken action to prevent smuggling.

Instructions have been issued to tighten up the preventive measures further and to see there is absolutely no smuggling of foodgrains outside the State.

The allegations contained in the Calling Attention Notice are general and vague and if any specific instance is brought to the notice of Government, necessary enquiry would be instituted.

Sri MALLIKARJUN KHARGE.— I want to know whether the Government is aware that through Afzalpur taluka nearly 10,000 tonnes of jowar has been sent to Maharashtra during the period 1-10-1972 to 31-3-1973.

Smt. E. E. VAZ.—Except what I have stated, no other instance has come to the notice of the Government. I request the hon. member that if there is any such instance, to kindly bring it to the notice of the Government. Action will be taken to see that no smuggling takes place in future.

Sri MALLIKARJUN KHARGE.—At present there are no foodgrains in Gulbarga and the concerned minister has visited the district. The Hon. Chief Minister has stated that the Central Government has not supplied sufficient foodgrains to Mysore. May I know what steps the Government has taken and how the Government is going to supply foodgrains to Gulbarga District as well as to other parts of the State ?

Smt. E. E. VAZ.— This Call Attention Notice pertains to the smuggling of jowar outside the State and the hon. member is asking what action will be taken to supply foodgrains. I would like to inform that action is being taken to bring as much foodgrain as possible and to supply them to the drought affected areas.

(Ruling of the Speaker)

re : Sitting of a stranger in the House and arrangements made in this regard.

MADAM SPEAKER.—Yesterday, there was some stir in the House when it was noticed that a stranger had strayed into the House and was found sitting. Immediately after he was spotted, the Deputy Speaker ordered him to leave the Chamber. Several members urged that action should be taken against the stranger. It was pleaded that he should be brought to the bar of the House and Suitable action taken for his Act. The Deputy Speaker promised to examine the matter.

Although I was not in the Chair when the incident happened, I heard the proceedings of the House when this matter was raised from my Chamber. I have cerefully considered the whole matter. Article 193 of the Constitution states as follows :

"If a person sits or votes as a member of the Legislative Assembly or the Legislative Council of a State before he has complied with the requirements of article 188, **or when he knows that he is not quailified** or that he is disqualified for membership thereof, or that he is prohibited from so doing by the provisions of any law made by Parliament or the Legislature of the State, he shall be liable in respect of each day on which he so sits or votes to a penalty of five hundred repees to be recovered as a debt due to the State."

From the above Article, it might be seen that if a person who is not qualified for membership sits in the Legislative Assembly, he is liáble to the penalty. In the present case, I feel that the House may take a lenient view without invoking the provisions of this Article. The person concerned has tendered to me an unqualified apology. He has stated that he was ignorant about the Rule that he should not enter the chamber. In view of his apology, I appeal to the House to treat the matter as closed.

I have, however, cautioned the security-men to be more alert in future. On this occasion, I would like to make an appeal to the members not to take with them their visitors into the Lobbies. If the members take their visitors with them into the Lobbies, the chances of some ignorant visitors entering the Chamber are not unlikely. The security men have been given strict instructions to restrict the entry to the Lounges to only those who have been permitted. I seek the co-operation of the Hon'ble Members in this regard.

Replies due to Questions etc.

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).— ನಾನು ಎರಡು ಮೂರು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದು ಇದು ವರೆಗೂ ಯಾವುದೂ ಬಂದಿಲ್ಲ. ಅಲ್ಲದೆ ಪ್ರಶ್ನೆಗಳನ್ನು ಕಳುಹಿಸಿ ಮೂರು ತಿಂಗಳಾದರೂ ಕೂಡ ಅವೂ ಬಂದಿಲ್ಲ. ಇದರ ಬಗ್ಗೆ ತಾವು ನೋಡಬೇಕು.

ಅಧ್ಯಕ್ಷರು. ನಾಳೆಯಿಂದ ಒಂದೊಂದೇ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಬೇಕೆಂದಿದ್ದೇನೆ.

ಪ್ರಶ್ನೆಗಳ ಪರಿಸ್ಥಿತಿಯನ್ನು ಸ್ವಲ್ಪ ಹೇಳುತ್ತೇನೆ. ಒಟ್ಟು ೯೨೯ ಪ್ರಶ್ನೆಗಳು ಬಂದಿವೆ. ಅವುಗಳಲ್ಲಿ ೭೬೧ ಪ್ರಶ್ನೆಗಳು ಉತ್ತರಿಸಲ್ಪಟ್ಟವೆ. ಇನ್ನೂ ೧೬೮ ಪ್ರಶ್ನೆಗಳಿಗೆ ಉತ್ತರ ಬರಬೇಕು. ೧೫ ದಿವಸಗಳೊಳಗಾಗಿ ಉತ್ತರ ಬರಬೇಕಾಗಿದ್ದು ಬಾರದೆ ಇರುವುದರಿಂದ ರಿಮೈಂಡರ್ ಮೇಲೆ ರಿಮೈಂಡರ್ ಕಳುಹಿಸಿದ್ದು ಉತ್ತರಗಳು ೧೫೫ ಪ್ರಶ್ನೆಗಳಿಗೆ ಇನ್ನೂ ಬರಬೇಕಾಗಿದೆ. ಇದು ಈಗ ಇರುವಂಥ ಪರಿಸ್ಥಿತಿ. ಉತ್ತರಗಳು ಎಷ್ಟು ಪ್ರಶ್ನೆಗಳಿಗೆ ಬರುತ್ತವೆ ಅಷ್ಟು ಪ್ರಶ್ನೆಗಳನ್ನೂ ನಾವು ಪ್ರಿಂಟ್ ಮಾಡುತ್ತಿದ್ದೇವೆ. ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ನಮ್ಮ ಕಾರ್ಯಾಲಯದಿಂದ ಫೋನ್ ಮಾಡುತ್ತಿದ್ದೇವೆ. ಅಲ್ಲಿಗೂ ಉತ್ತರಗಳು ಬರುತ್ತಿಲ್ಲ.

Sri H. M. CHANNABASAPPA.—May I make a submission in this behalf. I have files relating to about 14 Questions for which replies have already been sent by my department, but so far they have not been included in the list of Questions. There seems to be something wrong somewhere. The Chair may kindly look into it.

MADAM SPEAKER.—From the public works department answers for 52 questions are yet to be received.

Sri H. M. CHANNABASAPPA.—I feel that there is something wrong somewhere which the chair may kindly look into it.

MADAM SPEAKER.—I will look into it.

Sri H. S. SIDDAPPA.— In January I had sent 3 Questions which were renewed twice. I verified from the Legislature Secretariate that even though they have sent a D. O. letter they have not received replies to those Questions so far. My feeling is that there is somebody's handling in this and hence the replies are not being sent.

Strike by the House Surgeons and Statement by the Minister for Health

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ರೂಲ್ ೩೧೨ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೇನೆ. ಆರೋಗ್ಯ ಮಂತ್ರಿಗಳು ನಿನ್ನೆಯ ದಿವಸ ಸಭೆಯಲ್ಲಿ ಹೌಸ್ ಸರ್ಜನ್ಸ್ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಆದರೆ ಈ ಹೊತ್ತಿನ ಪತ್ರಿಕೆಗಳನ್ನು ನೋಡಿದ್ದರಲ್ಲಿ ಎಲ್ಲ ಆಸ್ಪತ್ರೆಗಳಲ್ಲಿಯೂ ಇವರು ಮುಷ್ಕರ ಮಾಡಿದ್ದರಿಂದ ಅಲ್ಲಿಯ ಕೆಲಸವೆಲ್ಲ ಅಸ್ತವ್ಯಸ್ತವಾಗಿದೆ ಎಂದು ವರದಿ ಯಾಗಿದೆ. ನಿನ್ನೆ ಹೇಳಿಕೆ ಕೊಡುತ್ತ ಹೌಸ್ ಸರ್ಜನ್‌ಷಿಪ್

ಕೂಡ ಪಾರ್ಟ್ ಆಫ್ ದಿ ಕೋರ್ಸ್ ಎನ್ನುವ ಅಭಿಪ್ರಾಯ ಪಟ್ಟರು. ಇದರಿಂದ ಏನು ಭಾಸವಾಗುತ್ತದೆಂದರೆ ಆಸ್ಪತ್ರೆಗಳಲ್ಲಿ ಹೌಸ್ ಸರ್ಜನರು ಇರುವುದು ಅತ್ಯಗತ್ಯವಾಗಿ ಬೇಯೇ ಇಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಆಸ್ಪತ್ರೆಯಲ್ಲಿನ ಕೆಲಸಕ್ಕೆ ತೊಂದರೆ ಯಾಗಿರಬೇಕಾದರೆ ಅವರ ಸೇವೆ ಆಸ್ಪತ್ರೆಗಳಲ್ಲಿ ಅವಶ್ಯಕವಿದೆ ಎಂದು ಅರ್ಥವಾಗು ತ್ತದೆ. ಹೌಸ್ ಸರ್ಜನ್‌ಷಿಪ್ ಪಾರ್ಟ್ ಆಫ್ ದಿ ಕೋರ್ಸ್ ಆದರೆ ಅವರ ಸೇವೆಯ ಅವಶ್ಯಕತೆ ಇರುವುದಿಲ್ಲ. ಇಲ್ಲದೆ ಇದ್ದರೆ ಅತ್ಯಾವಶ್ಯಕವಾಗಿ ಅವರ ಸೇವೆ ಬೇಕಾಗು ತ್ತದೆ. ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಎಲ್ಲ ಕೆಲಸವನ್ನೂ ನೋಡಿಕೊಳ್ಳುವುದಕ್ಕೆ ತಕ್ಕಷ್ಟು ಜನರಿದ್ದರೆ ಅವರ ಸೇವೆ ಅನಾವಶ್ಯಕವಾಗುತ್ತದೆ. ಪತ್ರಿಕಾ ವರದಿಗಳನ್ನು ನೋಡಿದರೆ ಅವರ ಸೇವೆ ಆಸ್ಪತ್ರೆಗಳಿಗೆ ಬೇಕು ಎನ್ನುವ ಅಭಿಪ್ರಾಯ ನಮಗೆ ಬರುತ್ತದೆ. ಆದುದ ರಿಂದ ಮಾನ್ಯ ಆರೋಗ್ಯ ಮಂತ್ರಿಗಳು ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನು ಖಚಿತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯಶಾಖೆಯ ಮಂತ್ರಿಗಳು).—ಅವರ ಸೇವೆಯ ಪ್ರಶ್ನೆ ಬರುವುದಿಲ್ಲ. ಅವರು ಆಸ್ಪತ್ರೆಗಳಲ್ಲಿರತಕ್ಕದ್ದು ಕೆಲಸ ಕಲಿಯುವುದಕ್ಕೆ. ಆ ಕೆಲಸಕ್ಕೋಸ್ಕರ ಅವರು ಇರಲೇಬೇಕು. ಅವರು ಇದ್ದಾರೆ ಎಂದು ವರ್ಕ್ ಲೋಡ್ ರ್ಯಾಷನೇಲ್ ಮಾಡಿಕೊಂಡಿದ್ದಾರೆ. ಈ ಹೊತ್ತು ಬೆಳಗ್ಗಿನಿಂದ ನಾನು ಕಂಟ್ಯಾಕ್ಟ್ ನಲ್ಲಿದ್ದೇನೆ. ಆಸ್ಪತ್ರೆಗಳಲ್ಲಿನ ಕೆಲಸ ಅಸ್ತವ್ಯಸ್ತವಾಗಿಲ್ಲ, ಅಲ್ಲಿರುವವರಿಗೆ ಸ್ವಲ್ಪ ಕೆಲಸ ಜಾಸ್ತಿಯಾಗಿದೆ. ಅವಶ್ಯಕವಾದರೆ ನಾವು ಹೊರಗಿನಿಂದ ಕೆಲವು ಡಾಕ್ಟರುಗಳನ್ನು ತಂದು ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಆದರೆ ಹೌಸ್ ಸರ್ಜನ್‌ಗಳು ಹೋಗುತ್ತಿರತಕ್ಕ ರೀತಿ ಜನ್ಮಾಗಿಲ್ಲವೆಂದು ನಾನು ಹೇಳುತ್ತೇನೆ. ನಾನು ತಿಳಿದಿರುವುದ ರಲ್ಲಿ ಆಸ್ಪತ್ರೆಯಲ್ಲಿ ಯಾರಿಗೂ ತೊಂದರೆಯಾಗಿಲ್ಲ. ಔಟ್ ಪೇಷೆಂಟ್ ಸೆಕ್ಷನ್‌ನಲ್ಲಿ ಮಾತ್ರ ಸ್ವಲ್ಪ ತೊಂದರೆಯಾಗಿರಬಹುದು. ಅಲ್ಲಿರುವ ಡಾಕ್ಟರುಗಳಿಗೆ ಸ್ವಲ್ಪ ವರ್ಕ್ ಲೋಡ್ ಜಾಸ್ತಿಯಾಗುತ್ತದೆ.

But I am sure the Doctors in the Hospitals will rise to the occasion and see that the patients do not get unduly troubled. What is being given to these people is only a stipend and not a salary. I don't know how this discrimination with regard to the payment of this stipend has been there. I would like to rationalise it. But at this time if they want to threaten the Government like this. I would be the last person to take any hasty action. All the Housemen who come there I entirely agree that they must get same thing uniformly if that is the policy of the Government, otherwise, none should get it. I am getting each point examined. I have called for reports from all other States also to know what exactly is the position. I would like to

take a very equitable view of the whole thing. Even now since my friend Mr. Kagodu Thimmappa has raised this issue I would make a last appeal to them and say that it does not pay them if they try to embrass me. If they persist to embrass they would be doing a great social injustice. I don't want them to commit that mistake, if they want to say that Government is at fault, the Government cannot do it all of a sudden. It is a matter involving a huge financial commitment. As I have got it examined it comes to some lakhs.

Now-a-days we are struggling even for one or two lakhs. That is our position this year. I can assure the House that after I have become the Health Minister I have given five to six crores of rupees more. Never before these people had such an advantegeous position as they are having today. I have created a number of posts for these people 700 to 800 posts have been created and so many posts have been upgraded. To conform to the standards of the Indian Medical Association, I have been trying to impress upon the Finance Department to see that some more finances are given. For the information of the hon. members I may say that most of these House Surgeons are not poor people's children, most of them come from affluent families. There may be some who are needy. But I do not think all of them are needy. Even now it is open to them to see reason and agree with me and simply go back to their duty and allow me an opportunity to look into their case. But let them not try to pressurise us.

ಶ್ರೀ ಕಾಗೋಡು ತಿಮ್ಮಪ್ಪ.— ಇದರಲ್ಲಿ ಅವರಿಗೆ ಆಗಿರುವ ಅವ್ಯವಸ್ಥೆಯನ್ನು ಸರಿಪಡಿಸಿ ಸರಿಯಾದ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಇಂದು ಪತ್ರಿಕೆಗಳಲ್ಲಿ ಬಂದಿರುವುದು ಒಂದು ರೀತಿಯಾಗಿರುವುದರಿಂದಾಗಿ ಇಲ್ಲಿ ನಾನು ಇದನ್ನು ಸರಕಾರದ ಗಮನಕ್ಕೆ ತರಬೇಕಾಯಿತು.

ಶ್ರೀ ಎಚ್. ಸಿದ್ದವೀರಪ್ಪ.— ನಾನು ಇಂದು ಬೆಳಗ್ಗೆ ಇಲ್ಲಿನ ಡೀನ್‌ರವರೊಡನೆ ಕಲೆತು ವಿಚಾರ ಮಾಡಿದ್ದೇನೆ. ಆಸ್ಪತ್ರೆಗಳಲ್ಲಿ ಬರುವ ರೋಗಿಗಳಿಗೆ ಯಾವ ವಿಧವಾದ ತೊಂದರೆಗಳೂ ಆಗದಂತೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

These young men were working there. Naturally when the staff is less there would be some difficulty. ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ ಎಷ್ಟು ಜನ ಕ್ಯೂನಲ್ಲಿ ಬಹಳ ಹೊತ್ತಿನಿಂದ ಕಾದಿರುತ್ತಾರೆನ್ನುವುದು ಅವರಿಗೂ ಚೆನ್ನಾಗಿ ಅರ್ಥವಾಗುತ್ತದೆ.

There are bound to be some inconveniences in this country-we are putting up with a number of such difficulties. But I can assure the House that I will not allow the work in the hospitals to get paralised.

ಶ್ರೀ ಹೆಚ್. ಎಸ್. ಸಿದ್ದಪ್ಪ.— ಸ್ವಾಮೀ, ಮಾನ್ಯ ಮಂತ್ರಿಗಳು ಇಲ್ಲಿ ಹೌಸ್ ಸರ್ಜನ್‌ಗಳ ಬಗ್ಗೆ ಹೇಳುತ್ತಾ ಇದು ಒಂದು ರೀತಿಯಾಗಿ ಕೊಡುವ ಫೀಸ್ ಬಾಕಿ ಡಾಕ್ಟರುಗಳಿಗೆ ಕೊಡುವ ಹಾಗೆ ಇದು ಸ್ಟ್ಯಾಚುಟರಿ ಸಂಬಳವಲ್ಲ ಎಂದು ಹೇಳಿದರು, ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದಂತೆ ಇಲ್ಲ ಇದನ್ನು ಸರಿಯಾಗಿ ಕೊಡುವಂತೆ ಮಾಡಿ ಇಲ್ಲವೇ ಪೂರ್ಣವಾಗಿ ತಪ್ಪಿಸಿಬಿಡಿ. It is not a statutory salary.

ಶ್ರೀ ಎಚ್. ಸಿದ್ದವೀರಪ್ಪ.— ಇವರಿಗೆ ಕೊಡುತ್ತಿರುವುದು ಬಕ್ಷೀಸ್ ಅಲ್ಲ. ಇದು ಅವರು ಮಾಡುವ ಕೆಲಸಕ್ಕೆ ಸ್ಟೈಪೆಂಡ್ ಎಂದು ಕೊಡಲಾಗುತ್ತಿದೆ.

MADAM SPEAKER.— It is something like a scholarship.

Application of Rule 312 about admission of Notices

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್)— ನಾನು ತಮ್ಮ ಕಡೆಗೆ ರೂಲು ೩೧೨ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.— ತಾವು ದಯವಿಟ್ಟು ಕಳಿತುಕೊಳ್ಳಬೇಕು. ಈಗ ಅದರ ಬಗ್ಗೆ ಇಲ್ಲಿ ಹೇಳುವುದು ಬೇಡ.

ಶ್ರೀ ವಿ. ಎನ್. ಪಾಟೀಲ್.— ನಾನು ಒಬ್ಬರು ಪೋಲೀಸು ಹೆಡ್ ಕಾನಸ್ಟೇಬಲ್ ಬಗ್ಗೆ ನಡೆದ ಅವ್ಯವಸ್ಥೆಗಳ ಬಗ್ಗೆ ನೋಟೀಸು ಕಳುಹಿಸಿದೆ. ಇದರ ಮಿನಿಸ್ಟರು ಇಲ್ಲಿರುವುದರಿಂದ ತಾವು ಅವರ ಕಡೆಯಿಂದ ಇಲ್ಲಿ ಹೇಳಿಕೆ ಕೊಡಿಸ ಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು.— ನಾನು ನೋಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ನಾನು ಎರಡು ಪ್ರಶ್ನೆಗಳನ್ನು ಕಳಿಸಿದ್ದೆ. ಇದರಲ್ಲಿ ಒಂದು ಪ್ರಶ್ನೆಗೆ ಮಾತ್ರ ಇಲ್ಲಿ ಉತ್ತರ ಬಂದಿದೆ. ಬಾಕಿ ಉಳಿದಿರುವ ಇನ್ನೊಂದು ಪ್ರಶ್ನೆಗೂ ತಾವು ಉತ್ತರವನ್ನು ತರಿಸಿಕೊಡಬೇಕು ಎಂದು ಇಲ್ಲಿ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು.— ನಾನು ತಮಗಾಗಿಯೇ ಸರಕಾರದವರಲ್ಲಿ ಸ್ಪೆಷಲ್ ಆಗಿ ಮನವಿ ಮಾಡುತ್ತಿದ್ದೇನೆ, ಅವರ ಕಡೆಯಿಂದ ನೋಡಿ ತರಿಸಿಕೊಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಒಂದು ಮನವಿ ಮಾಡ ಬೇಕಾಗಿದೆ.

ಅಧ್ಯಕ್ಷರು.— ಈಗ ಇದರ ಬಗ್ಗೆ ಇಲ್ಲಿ ತಾವು ಏನನ್ನೂ ಪ್ರಸ್ತಾಪ ಮಾಡ ಬಾರದು.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಸ್ಪೆಷಲ್ ಆಗಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಹೇಳುವುದನ್ನು ತಾವು ತಪ್ಪು ತಿಳಿದುಕೊಳ್ಳಬಾರದು.

Sri H. M. CHANNABASAPPA (Minister for Public Works).— I rise to a Point of Order. It is not open to any hon. member of this House to give a direction to the Chair to sit down.

Sri C. M. ARUMUGHAM.— The hon. Minister while raising a Point of Order has given the Ruling himself.

MADAM SPEAKER.— He did not mean it !

ಶ್ರೀ ವಿ. ಎನ್. ಪಾಟೀಲ್.— ನಾನು ರೂಲು ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.— ನಾನು ರೂಲು ೩೧೨ರ ಬಗ್ಗೆ ರೂಲಿಂಗು ಕೊಟ್ಟಿದ್ದೇನೆ. ರೂಲು ೩೧೨ರ ಪ್ರಕಾರ ನೋಟೀಸು ಬಂದಾಗ ಅದನ್ನು ಪರಿಶೀಲಿಸಿದ್ದೇನೆ. ಆದರೆ ಅದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತಿಸಿ ಸರಕಾರದ ಹೇಳಿಕೆ ತರಿಸಿಕೊಡಲಾಗುತ್ತಿದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ.— ಮಾನ್ಯ ಅಧ್ಯಕ್ಷರೇ, ರೂಲು ೩೧೨ರ ಬಗ್ಗೆ ರೂಲಿಂಗ ಕೊಟ್ಟಿದ್ದೇನೆಂದು ಹೇಳಿದಿರಿ. ಇದರ ಅರ್ಥ ಇನ್ನು ಮುಂದೆ ಈ ಸದನದ ಸದಸ್ಯರು ಯಾರೂ ರೂಲು ೩೧೨ರ ಕೆಳಗೆ ಯಾವ ತರಹದ ನೋಟೀಸನ್ನೂ ಕಳುಹಿಸಬಾರದು ಎಂದು ಇದರ ಅರ್ಥವೇ ಹೇಗೆ ಎನ್ನುವುದು ತಿಳಿಯಲಿಲ್ಲ.

ಅಧ್ಯಕ್ಷರು.— ರೂಲು ೩೧೨ರ ಕೆಳಗೆ ನೋಟೀಸು ಬಂದಾಗ ಅದನ್ನು ತರಿಸಿ ಪರಿಶೀಲನೆ ಮಾಡಿದ್ದೇನೆ. ಅದು ಅಜೆಂಡಾದಲ್ಲಿ ಬರುವಾಗ ಕೊನೆಯಲ್ಲಿ ತರಬೇಕಾಗುತ್ತದೆ. ಇದರ ಬಗ್ಗೆ ರೂಲಿಂಗು ಆಗಲೇ ಕೊಡಲಾಗಿದೆ. ಮಾನ್ಯ ಸದಸ್ಯರು ರೂಲಿಂಗನ್ನು ತರಿಸಿ ಓದಿ ನೋಡಬಹುದು.

Release of Water from Koyna Project to some parts in Bijapur District

ಶ್ರೀ ಕೆ. ಬಿ. ಪಾಟೀಲ್.— ಬಿಜಾಪುರದ ಕಡೆಗೆ ಕೊಯ್ನಾ ನೀರು ಬರುತ್ತದೆ ಎಂದು ಹೇಳಿದ್ದರೂ ಇದುವರೆಗೆ ಅಲ್ಲಿನ ಜನಕ್ಕೆ ನೀರು ಬರಲಿಲ್ಲ ಮತ್ತು ಇದರ ಬಗ್ಗೆ ಇನ್ನೂ ಸರಿಯಾದ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರಕಾರ ತೀವ್ರವಾಗಿ ಕ್ರಮ ತೆಗೆದುಕೊಂಡು ಇಲ್ಲಿನ ಜನತೆಗೆ ನೀರು ಕೊಡಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.— ಮಾನ್ಯ ಶ್ರೀ ಪಾಟೀಲರವರು ಇಂದು ಬೆಳಗ್ಗೆ ತಾನೇ ಬಿಜಾಪುರದಿಂದ ಬಂದು ಇಲ್ಲಿನ ಸ್ಥಿತಿಯನ್ನು ಕಣ್ಣಾರೆ ನೋಡಿ ಬಂದು ಸರಕಾರದ ಗಮನಕ್ಕೆ ಇಲ್ಲಿ ತರುತ್ತಿದ್ದಾರೆ. ಇಲ್ಲಿ ಪ್ರತಿಯೊಂದು ವಾರ್ಡಿನಲ್ಲೂ ಜನಕ್ಕೆ ಕುಡಿಯುವ ನೀರು ಸಿಗುತ್ತಿಲ್ಲ. ಇಲ್ಲಿದ್ದ ಬಾವಿಗಳಿಗೆ ಪಂಪು ಹಾಕಬೇಕೆಂದು ಇದ್ದರೂ ಅಲ್ಲಿನ ಪಂಪುಗಳು ಕೆಟ್ಟುಹೋಗಿವೆ, ಇಲ್ಲಿನ ಹೆಂಗಸರು ಮಕ್ಕಳು ನೀರಿಗಾಗಿ ಬಹುವಾಗಿ ಪರದಾಡುತ್ತಿದ್ದಾರೆ. ನಮ್ಮ ಪರವಾಗಿ ಬೇಕಾದಷ್ಟು ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ಮಂತ್ರಿಗಳಾದ ಶ್ರೀ ಚನಬಸಪ್ಪನವರು ಹಿಂದೆ ಕೂಡ ಹೇಳಿದ್ದರು. ಆದರೆ ಇಲ್ಲಿನ ಪರಿಸ್ಥಿತಿ ಬಹು ಗಂಭೀರವಾಗಿದೆ. ಇಲ್ಲಿನ ಹೆಂಗಸರು ನೀರಿಗಾಗಿ ಬಾವಿ ಭಳ ದಿನ ಬೆಳಗಾದರೆ ಕಿತ್ತಾಡುತ್ತಿರುವುದನ್ನು ನಾವು ನೋಡುತ್ತ ಬರುತ್ತಿದ್ದೇನೆ, ಇದಕ್ಕೋಸ್ಕರ ನಾವು ತಮ್ಮ ಮೂಲಕ ಸರಕಾರದ ಗಮನ ಸೆಳೆದು ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡು ಇಲ್ಲಿನ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Statement of the Minister for Public works and Electricity

re : Release of water from Koyna Project

2-00 P. M.

Sri H. M. CHANNABASAPPA (Minister for Public Works).—Madam Speaker, this question is being raised everyday and also the position explained by Government almost everyday. Yesterday, I have made an exhaustive statement on this issue. Subsequently, I have got in touch with the concerned people in Bijapur and the latest position has also been ascertained. It is true that consequent on Krishna River drying up, there has been some difficulty for the water. The capacity of the tank is to provide about 8 million units of water to about 1,05,000 population of Bijapur which works out to about 8 gallons per head.

That is the position in the normal situation. The tank has water. The position today is, the water is muddy and it is not fit for drinking. I have directed them to create settling tanks and pump to the settling tanks so that it may be useful in times of scarcity. The second point is: Now they have sunk Borewells and the aggregate supply from these borewells is of the order of 4 lakh units. This will work out to about 4 gallons per head. There are some pockets where the borewells are not connected by pipes. To those places, Government has made arrangements and they have also been geared up to take water by tankers and deliver to the areas which are devoid of these borewells. Hectic efforts are going on almost on a war-footing and the officers are going ahead with puming of water and connecting pipes to the reservoirs and making the water available through pipes. Such of the areas which cannot be served by the pipe-lines, water is being supplied through tankers. I quite see, in times of scarcity when 8 gallons per head is reduced to 3 gallons per head, there would be some amount of competition and that too when water had to be rationed amongst the people. Whatever possible efforts could be made, Government is prepared to make and they are making to make the water available.

Last night I got in touch with the Deputy Commissioner and the Executive Engineer of Bijapur and have given them instructions that they need not spare any effort; whatever might be the cost, cost is no consideration. they will have to make a provision to make available at least not less than 50 percent of the total water required and ration it properly so that everybody may get the necessary basic requirement of life. Therefore it is not correct to say that Government is not alive to the gravity of the situation. If any hon. member were to give me any suggestion as to how best to tide over the crisis, I have no objection to welcome the suggestion and act upon it. I welcome the suggestions from other members though they may not belong to that district. Water is the basic necessity and Government will not spare any effort in that regard.

Sri J. L. KABADI.—Since the Hon. Minister has agreed to consider our suggestions, I would like to offer a few suggestions in this regard.

Sri H. M. CHANNABASAPPA.—The suggestions could be made to me even outside the House. I shall discuss with the hon. members and try to implement their useful suggestions.

Wage Rates to Labourers at the Upper Krishna Project

ಶ್ರೀ ಬಾಪುಗೌಡರಾಯಪ್ಪ (ಜಹಪೂರ).— ಮಾನ್ಯ ಅಧ್ಯಕ್ಷರೆ, ಕೃಷ್ಣ ಮೇಲ್ದಂಡೆ ಕಾಲುವೆ ಕೆಲಸ ಮಾಡುತ್ತಿರುವ ಕೂಲಿಗಾರರಿಗೆ ಕಡಿಮೆ ಕೂಲಿ ಸಿಗುತ್ತಿದೆ ಎಂದು ನಾವು ಈ ಹಿಂದೆ ಹೇಳಿದಾಗ, ಮಾನ್ಯ ಚನ್ನಬಸಪ್ಪನವರು ಅದನ್ನು ಹೆಚ್ಚು ಮಾಡಲಾಗುತ್ತದೆಂದು ಹೇಳಿದರು. ಮತ್ತು ಆ ಬಗ್ಗೆ ಆರ್ಡರ ಹೊರಡಿಸುತ್ತೇವೆಂದು ಹೇಳಿದರು. ನಾನು ೧೨, ೧೩, ೧೪ನೇ ತಾರೀಖು ನನ್ನ ಮತಕ್ಷೇತ್ರಕ್ಕೆ ಹೋಗಿದ್ದೆ. ಆದರೆ ಅದಿನ್ನೂ ಕಾರ್ಯಗತವಾಗಿಲ್ಲ. ಈಗಲೂ ೭೫ ಪೈಸೆಯಿಂದ ೧೫೦ ಪೈಸೆವರೆಗೆ ಮಾತ್ರ ಕೂಲಿ ಸಿಗುತ್ತಿದೆ. ಮತ್ತು ವಾರಕ್ಕೆ ಒಂದು ಪಾವು ಗೋದಿ ಮಾತ್ರ ಕೊಡುತ್ತಿದ್ದಾರೆ. ಇಂದು ಅಲ್ಲಿ ಸಾವಿರಾರು ಮಂದಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ವಾರಕ್ಕೆ ಒಂದು ಪಾವು ಮಾತ್ರ ಹಂಚಿದರೆ ಮತ್ತು ಕಡಿಮೆ ಕೂಲಿ ಕೊಟ್ಟರೆ ಅವರು ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ತಾಲ್ಲೂಕ ಮಟ್ಟದಲ್ಲಿ ಅಲಾಟ್ ಆಗಿದ್ದು ೩ ಸಾವಿರ ಕ್ವಿಂಟ್‌ಲ ಗೋದಿ ಸಾವಿರ ಕ್ವಿಂಟಾಲ ಮೇಜಿ, ಸಾವಿರ ಕ್ವಿಂಟಾಲ ಮೈಲೂ. ಆದರೆ ಗೋಡೋನನಿಂದ ಲಿಫ್ಟ ಮಾಡುವುದಕ್ಕೆ ಪರವಾನಿಗೆ ಕೊಟ್ಟಿದ್ದು ೨೫೦ ಕ್ವಿಂಟಾಲಿಗೆ ಮಾತ್ರ. ಅಂದರೆ ಅಲಾಟ್ ಮಾಡುವ ಪದ್ಧತಿ ಒಂದಾದರೆ, ಲಿಫ್ಟ್ ಮಾಡುವ ಪದ್ಧತಿ ಇನ್ನೊಂದಾಗಿದೆ. ಇಂದು ಅಲ್ಲಿಗೆ ಅಲಾಟಮೆಂಟ ಮಾಡುತ್ತಿರುವುದಕ್ಕೂ, ಜನರಿಗೆ ಕೊಡುತ್ತಿರುವುದಕ್ಕೂ ಸಂಬಂಧವಿಲ್ಲವಾಗಿದೆ. ಈ ರೀತಿ ಕಡಿಮೆ ರೇಷನ್ ಮತ್ತು ಕಡಿಮೆ ಕೂಲಿ ಕೊಡುತ್ತಿರುವುದರಿಂದ ಅಲ್ಲಿ ಪರಿಸ್ಥಿತಿ ಭೀಕರವಾಗಿದೆ. ಕಲ್ಬುರ್ಗಿ ಜಿಲ್ಲೆಯಲ್ಲ ಈ ಒಂದು ಪರಿಸ್ಥಿತಿ ಉಂಟಾಗಿದೆ. ಕೂಲಿ ಜಾಸ್ತಿ ಮಾಡುವ ಬಗ್ಗೆ ಆರ್ಡರ ಹೊರಡಿಸಲಾಗುವುದೆಂದು ಶ್ರೀ ಮಾನ ಚನ್ನಬಸಪ್ಪನವರು ಮತ್ತು ಮುಖ್ಯ ಮಂತ್ರಿಗಳು ಹೇಳಿದ್ದರೂ ಸಹ ಇನ್ನೂ ಹೊರಡಿಸಿಲ್ಲ. ಅವರು ಹೇಳಿಕೆ ಕೊಟ್ಟು ಒಂದು ತಿಂಗಳಾದರೂ ಸಹ ಅಲ್ಲಿಯ ಅಧಿಕಾರಿಗಳು ನಮಗೆ ಇನ್ನೂ ಆರ್ಡರ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಅಧಿಕಾರಿಗಳು ಈ ವಿಷಯದಲ್ಲಿ ನಿಸ್ಸಹಾಯಕರಾಗಿದ್ದಾರೆ. ಆಹಾರಧಾನ್ಯಗಳು ಸರಿಯಾಗಿ ಬರುತ್ತಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಮಾನ ಚನ್ನಬಸಪ್ಪನವರಲ್ಲಿ ನಾನು ಕೈಜೊಡಿಸಿ ಕೇಳಿಕೊಳ್ಳುವುದೇನೆಂದರೆ ಏನಾದರು, ಹೇಳಿಕೆ ಕೊಡುವಾಗ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಡಬೇಡಿ ಎಂದು. ಏನಾದರು ಹೇಳಿಕೆ ಕೊಟ್ಟರೆ ಅದರಲ್ಲಿ

೧೨ ಆಣೆ ಕೆಲಸವನ್ನು ಆದರೂ ಮಾಡಿಸಿ. ಅವರಿಗೆ ಹೊಟ್ಟೆಗೆ ಅನ್ನವಿಲ್ಲದಿದ್ದರೆ ಕೆಲಸವನ್ನಾದರೂ ಹೇಗೆ ಮಾಡುತ್ತಾರೆ? ಕೂಲಿ ನೋಡಿದರೆ ೭೫ ಪೈಸೆಯಿಂದ ೧೫೦ ಪೈಸೆವರೆಗೆ ಇದೆ, ಗೋಧಿಯ ಹಂಚಿಕೆ ಸರಿಯಾಗಿಲ್ಲ, ಈ ಎರಡು ಕಾರಣಗಳಿಂದ ಅಲ್ಲಿ ಹಾಹಾಕಾರ ಎದ್ದಿದೆ. ಶ್ರೀಮತಿ ಇ.ಇ.ವಾಜ ಅವರು ಅಲ್ಲಿಗೆ ೫ ಸಾವಿರ ಕ್ವಿಂಟಾಲ ಕೊಡಲಾಗಿದೆ ಎಂದು ಹೇಳಿಕೆ ಕೊಟ್ಟರು. ಆದರೆ ೭೫೦ ಕ್ವಿಂಟಾಲ ಮಾತ್ರ ಕೊಟ್ಟಿರುವುದು. ಪೇಪರನಲ್ಲಿ ಹೇಳಿಕೆ ಕೊಡುವುದು ಒಂದಾದರೆ, ಹಂಚುವುದು ಬೇರೆ ಯಾಗಿದೆ. ಅಲ್ಲಿಗೆ ಸಾಕಷ್ಟು ಆಹಾರವನ್ನು ಲಿಫ್ಟ್ ಮಾಡುವುದಕ್ಕೆ ಆಹಾರವಿಲ್ಲ ಎಂದು ಹೇಳುತ್ತಿದ್ದಾರೆ. ನಿಮ್ಮಲ್ಲಿ ಒಂದು ಏಳೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿಬಿಡಿ. ಆವರು ಬೇರೆ ಏನಾದರು ಮಾಡಿಕೊಳ್ಳುತಾರೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಹೇಳಿಕೆ ಕೊಡ ಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

†ಶ್ರೀ ವಿಶ್ವನಾಥ ರೆಡ್ಡಿ (ಯಾದಗಿರಿ).— ಮಾನ್ಯ ಅಧ್ಯಕ್ಷರೆ ನಾನು ೧೧ನೇ ತಾರೀಖಿನ ದಿವಸ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅಲ್ಲಿಯ ಕೂಲಿಗಾರರ ಕೂಲಿಯನ್ನು ಜಾಸ್ತಿ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದರೂ ಸಹ ಇನ್ನೂ ಕಾರ್ಯಗತವಾಗಿಲ್ಲ. ಆ ವಿಷಯವನ್ನು ಸವಿಸ್ತಾರವಾಗಿ ಮಾನ್ಯ ಬಾಪೂಗೌಡರು ಈಗ ಹೇಳಿದರು. ಇಂದು ಅಪ್ಪರ ಕೃಷ್ಣ ಕೆನಾಲ್ ವರ್ಕನಲ್ಲಿ ಕೆಲಸ ಮಾಡಲು ಸಾಕಷ್ಟು ಲೇಬರ್ಸ್ ಬರುತ್ತಿಲ್ಲದಿರುವುದಕ್ಕೆ ಕಾರಣಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆ. ಮತ್ತು ಆ ಬಗ್ಗೆ ಚೀಫ್-ಇಂಜಿನಿಯರ ಅವರ ಜೊತೆಯಲ್ಲಿ ಮೀಟಿಂಗ ಮಾಡಿ ಸರಿಪಡಿಸಬೇಕೆಂದು ಸಹ ಹೇಳಿದ್ದೆ. ಅಲ್ಲಿಗೆ ಕೂಲಿಗಾರರು ಸಾಕಷ್ಟು ಪ್ರಮಾಣದಲ್ಲಿ ಬರದ್ದಿರವುದಕ್ಕೆ ಕಾರಣವೆಂದರೆ, ಸಾಕಷ್ಟು ಕೂಲಿ ಸಿಗದಿರುವುದು, ಆಹಾರಧಾನ್ಯ ಸಾಕಷ್ಟು ಸಿಗದಿರುವುದು ಮತ್ತು ಮೆಡಿಕಲ್-ಎಡ್ ಸಿಗದಿರುವುದು. ಇದೆಲ್ಲವನ್ನೂ ಸರಿಪಡಿಸಿದರೆ ೧೦ ರಿಂದ ೨೦ ಸಾವಿರದವರೆಗೆ ಕೂಲಿಗಾರರು ಕೆಲಸ ಮಾಡಲು ಅಲ್ಲಿಗೆ ಬರುತ್ತಾರೆ. ಆದಕಾರಣ ಈ ಬಗ್ಗೆ ಚೀಫ್-ಇಂಜಿನಿಯರ ಆವರ ಜೊತೆಯಲ್ಲಿ ಮೀಟಿಂಗ ಮಾಡಿ ತೀವ್ರವಾಪ ಕ್ರಮ ಕೈಕೊಂಡರೆ, ಬೆಂಗಳೂರು ಹಾಗು ಇನ್ನಿತರ ಭಾಗಗಳಿಗೆ ಹೋಗಿರುವ ಜನರನ್ನು ಲಿಫ್ಟ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

Sri H.M.CHANNABASAPPA.— On this issue I do not want to have any difference of opinion with any member of this House. The Hon. Member Sri Bapu Gowda just about 10 minutes back came to me and told me that the orders have not been implemented in regard to raising of the wage rates. At any time had I made an appeal to the House I made it with an assurance that whatever you want the Government to do in this connection, the Government would

certainly do it within the permissible limit. I cannot have any difference of opinion with regard to this matter either with the members of this side or the members of that side. Immediately after he complained about wages on the other day, orders have been issued in pursuance of the assurance made not only on the spot but also on the floor of the House that the payments have to be made in accordance with the enhanced rates. Now, Sri Bapu Gowda brought to my notice it has not been implemented. I am very much surprised myself. I do not want to enter into an argument in this regard with the Hon. Member. If there is any delay in increasing the rate and if there is lapse on the part of the officers to implement it, I can assure the House that I will take drastic action against them, and if the rates assured have not been paid for such a period during which it ought to have been given, back payment will be made. There is no difficulty about it. Let me ascertain what exactly has happened; if it has so happened as Mr. Bapu Gowda has stated, I must find out where exactly the mistake lies and make a statement on this matter by tomorrow at about 1 p.m.

In regard to availability of labour in the Krishna Canal works Sri Viswanatha Reddy complained the people are not coming forward for work because the rates are low. All the workers of that area are being paid Rs. 3/- on average. We have ordered that these people should be paid Rs. 3/- on average and many members bear witness to that and Sri Byre Gowda also was a witness to that the Government was paying that rate of wages to a normal labourer. In spite of that they made representations and further they complained about the cost of blasting materials the labourer has to bear out of his earnings. I did feel that it would be a hard hit if the labourers are made to pay the cost of the blasting materials out of their wages they earn. I straightaway ordered that the cost of blasting materials should not be part of their earnings. I have given orders that 12½ percent over and above what a person earns a week should be given extra to him as the cost of blasting materials. The reason given by the Hon.

Members that people not going to the workspot because the earnings are less than the other places is not correct. Probably the reasons might be that they have to go a little distance for away from their villages and have to live a sort of a secluded life. We are always sympathetic as far as these people are concerned. As Sri Viswanatha Reddy knows that arrangements have been made to shift about 60 to 70 people who had come all along from Gulbarga to Bangalore in search of work. I did not allow grass to grow than the reasonable time and made immediate arrangements to send them to such places where they were willing to go to earn their living. With such earnestness the Government is attending to the problems of these people. Therefore I will have to verify the several factors when the Hon. Members made some charges and make a statement regarding all these matters tomorrow after the question hour.

Any Hon. Member of that area may come to me and discuss with me about these problems and if anything is to be done in the matter, the Government will certainly do it.

ಶ್ರೀ ಬಾಪುಗೌಡ ರಾಯಪ್ಪ.—ಕೃಷ್ಣಾ ಮೇಲ್ದಂಡೆಯ ಕೆನಾಲ್ ಕೆಲಸಕ್ಕೆ ಇವರು ಒಬ್ಬ ಕೂಲಿಗೆ ೩ ರೂಪಾಯಿ ಕೂಲಿಯನ್ನು ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಕೊಟ್ಟಿರುವುದನ್ನು ಅವರೇಜ್ ಲೆಕ್ಕ ತೆಗೆದುಕೊಂಡರೆ ಒಬ್ಬ ಕೂಲಿಗೆ ೧ ರೂಪಾಯಿ ೪೦ ಪೈಸಾ ಬೀಳುತ್ತದೆ.

ಅಧ್ಯಕ್ಷರು.—ಈ ಬಗ್ಗೆ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಾಪುಗೌಡ ರಾಯಪ್ಪ.—ಆರ್ಡರ್ ಮಾಡಿ ಕಳುಹಿಸಿದ್ದೇವೆ ಎಂದು ಹೇಳಿದರು. ಒಂದು ತಿಂಗಳಿಂದ ಏನೂ ಇಲ್ಲ.

ಅಧ್ಯಕ್ಷರು.—ಬರೆದು ಕಳುಹಿಸಿ. ನಾಳೆ ಸ್ಟೇಟ್‌ಮೆಂಟ್ ಕೊಡುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾಮಗಾರಿಗಳಿಗೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಆದರೆ ಆ ಕಾಮಗಾರಿಗಳನ್ನು ಬ್ಯಾನ್ ಮಾಡಿದ್ದಾರೆ. ಆ ಕಾಮಗಾರಿಗಳು ನಡೆಯದೆ ಸ್ಥಗಿತವಾಗಿವೆ. ಆದ್ದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸ ಕಾರ್ಯಗಳು ನಡೆಯದೇ ಇರುವಾಗ ಆ ಇಲಾಖೆ ಎತಕ್ಕೆ ಇರಬೇಕು? ವಿಧಿನಿಯಮನು ಬದ್ಧವಾಗಿ ಈ ಕೆಲಸ ಕಾರ್ಯಗಳನ್ನು ತೆಗೆದು ಹಾಕಿದೆಯೇ? ಇದರ ಪರಿಸ್ಥಿತಿ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸ

ಬೇಕು. ಇಂಜಿನಿಯರುಗಳಿಗೆ ಕೆಲಸವಿಲ್ಲದೆ ಅವರು ಸುಮ್ಮನೆ ಕುಳಿತುಕೊಂಡಿದ್ದಾರೆ. ಅವರಿಗೆ ಸುಮ್ಮನೆ ಸಂಬಳ ಕೊಡುತ್ತಿದೆ. ನಾವು ಕಂದಾಯ ಕೊಟ್ಟು ಆ ಹಣದಲ್ಲಿ ಅವರಿಗೆ ಸಂಬಳವನ್ನು ಕೊಟ್ಟು ಬಿಳಿ ಆನೆಯನ್ನು ಸಾಕಿದ ಹಾಗಾಗಿದೆ. ಆದ್ದರಿಂದ ತಾವು ಸ್ಪಷ್ಟವಾಗಿ ಹೇಳಬೇಕು. ತಾವು ಬ್ಯಾನನ್ನು ತೆಗೆಯದಿದ್ದರೆ ಕಾಮಗಾರಿಗಳು ನಡೆಯುವುದಿಲ್ಲ. ಇಂಜಿನಿಯರಿಗೆ ಸುಮ್ಮನೆ ಸಂಬಳ ಕೊಡಬೇಕಾಗಿದೆ. ಹೆಂಗಸಿಗೆ ಆಪರೇಷನ್ ಮಾಡಿಸಿ ಗಂಡುಮಗು ಹೆರು ಹೆರು ಎಂದು ಹೇಳಿದ ಹಾಗಾಗಿದೆ. ಈ ಮಾತನ್ನು ಜನ ಸಹಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಬುಡಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ಕೆಲಸ ಇಲ್ಲ. ಈ ಮಂತ್ರಿಗಳು ಏತಕ್ಕೆ ಇರಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

The position is this. It was true Madam Speaker, that there was a economy order in the month of February 15th and it was interpreted that this was meant to be in operation up to 31st March till the new Budget was presented. There is a misconception that this order in force is meant for certain parts of the State. I have made it amply clear during the budget speech that there is an impression amongst certain members of the old Mysore that there has been some retordation in the development of irrigation works and assured that I will remove by positive action any such impression and I think that this will satisfy the Hon. Members.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಳೆಯ ಮೈಸೂರು ಹಾಳಾಗಿ ಹೋಗುತ್ತಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಈ ಸಭೆ ಮುಗಿಯುವುದರೊಳಗೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು. ಈ ಸರ್ಕಾರ ಬಂದಮೇಲೆ ನೀವು ತಾರತಮ್ಯ ಮಾಡಿದ್ದೀರಿ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಧೈರ್ಯವಾಗಿ ಬಿಚ್ಚು ಮನಸ್ಸಿನಲ್ಲಿ ಈ ಸಭೆ ಮುಗಿಯುವುದರೊಳಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಬಜ್ಜೆಟ್ಟನ್ನು ಸರಿಯಾಗಿ ಓದಿಲ್ಲ ಎಂದು ಕಾಣುತ್ತದೆ. ಅವರು ಬಜ್ಜೆಟ್ಟನ್ನು ಓದಿದರೆ ಅವರಿಗೆ ಆ ವಿಷಯವೆಲ್ಲವೂ ಸರಿಯಾಗಿ ಗೊತ್ತಾಗುತ್ತದೆ.

Tours of the Members in Drought hit Areas

ಶ್ರೀ ವಾಟಾಳ್ ನಾಗರಾಜ್.—ಬರಗಾಲ ಪೀಡಿತ ಪ್ರದೇಶಗಳಿಗೆ ತಮ್ಮ ನಾಯಕತ್ವದಲ್ಲಿ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರು ಹೋಗಿ ನೋಡಿಕೊಂಡು ಬಂದ ಮೇಲೆ ಅದಕ್ಕೆ ಸಂಬಂಧಪಟ್ಟ ಒಂದು ವರದಿಯನ್ನು ತಾವು ಕೊಟ್ಟಿದ್ದೀರಿ. ನಾವು ಆ ಪ್ರದೇಶಕ್ಕೆ ಹೋದಂತಹ ಸಂದರ್ಭದಲ್ಲಿ ನಾವು ೩–೪ ಜಿಲ್ಲೆಗಳು ಮತ್ತು ೮–೧೦ ತಾಲ್ಲೂಕುಗಳನ್ನು ಸುತ್ತಾಡಿದೆವು. ಅಭಾವ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧದಲ್ಲಿ ಸರ್ಕಾರದ ಇನ್ ಚಾರ್ಜ್‌ನಲ್ಲಿ ಇಂಜಿನಿಯರ್ ಇನ್ ಚೀಫ್ ಶ್ರೀ ವಿ.ಗ್ದಂ ಅವರನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ನಮಗೆ ಗೊತ್ತಿರುವ ಹಾಗೆ ನಾವು ಪ್ರವಾಸ ಹೋದಾಗ ಅವರು ಒಂದು ಕಡೆಯೂ ಸಹ ನಮ್ಮನ್ನು ಭೆಟ್ಟಿ ಮಾಡಲಿಲ್ಲ.

ಅಧ್ಯಕ್ಷರು.—ಇದು ಹಳೆಯ ಕಥೆ ಯಾವುದಾದರೂ ಹೊಸದು ಇದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.— ಹಳೆಯದಾದರೂ, ಹೊಸದಾಗಿ, ಒಂದು ಗುರುತರವಾದ ಜವಾಬ್ದಾರಿಯುತವಾದ ವಿಷಯವನ್ನು ನಾನು ಹೇಳಬೇಕಾಗಿದೆ. ಈ ಬಗ್ಗೆ ಆ ಅಧಿಕಾರಿಯನ್ನು ಕರೆಸಿ ಏನಾದರೂ ಕೇಳಿದ್ದೀರಾ ಅಥವಾ ಅವರು ಯಾವ ಕಾರಣದಿಂದ ಬರಲಿಲ್ಲವೆಂದು ವಿಚಾರಣೆ ನಡೆಸಿದ್ದೀರಾ ? ಇದೇ ರೀತಿ ೧೫ ದಿವಸಗಳ ಕೆಳಗೆ ಬೆಂಗಳೂರಿನ ಮೇಯರ್‌ರವರು ನೀರಿನ ತೊಂದರೆಯ ಬಗ್ಗೆ ಅವರಿಗೆ ಫೋನ ಮಾಡಿದರೆ ಫೋನಿನಲ್ಲಿ ಸಿಗಲಿಲ್ಲ ಆ ಮೇಲೆ ಖುದ್ದಾಗಿ ಭೇಟಿ ಮಾಡಲು ಇಂಟರವ್ಯೂ ತೆಗೆದುಕೊಳ್ಳುವುದಕ್ಕೆ ಹೋದರೆ ಅದನ್ನು ಸಹ ಕೊಡಲಿಲ್ಲ. ಇದರಿಂದ ಬೆಂಗಳೂರಿನ ಎಲ್ಲಾ ನಾಗರೀಕರಿಗೆ ಅವಮಾನ ಮಾಡಿದ ಹಾಗೆ ಆಗಿದೆ. ಇಂಥ ಅಧಿಕಾರಿಗಳಿಗೆ ನೀವು ಕೊಟ್ಟಿರತಕ್ಕಂತಹ ಪವರ್ಸ ಆದರೂ ಏನು? ಇವರು ಬೆಂಗಳೂರಿನ ಪ್ರಥಮ ಪ್ರಜೆಗೆ ಅಗೌರವ ಮಾಡಿದ್ದಾರೆ. ಇದರ ಬಗ್ಗೆ ಮಂತ್ರಿಯವರು ಒಂದು ಹೇಳಿಕೆಯನ್ನು ಕೊಡಬೇಕು. ತಮ್ಮನ್ನು ಸಹ ಇವರು ಬಂದು ನೋಡಿಲ್ಲ, ನಮ್ಮನ್ನು ಸಹ ಡೆಲಿಗೇಶನ್ ಹೋದಾಗ ಬಂದು ಭೇಟಿ ಮಾಡಿಲ್ಲ; ಮತ್ತು ಬೆಂಗಳೂರಿನ ಪ್ರಥಮ ಪ್ರಜೆಗೆ ಇಂಟರ್‌ವ್ಯೂ ಕೊಡದೆ ಅವಮಾನ ಮಾಡಿದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಮಂತ್ರಿಯವರು ಕೊಡಬೇಕೆಂದು ಹೇಳುತ್ತೇನೆ.

Mysore High Court (Amendment) Bill, 1973
Motion to Consider

MADAM SPEAKER.—I have received the following message from the Governor of Mysore.

> "In pursuance of Clause 3 of article 207 of the Constitution of India, I, Mohanlal Sukhadia, Governor of Mysore, do hereby recommend that the Mysore High Court (Amendment) Bill, 1973 may be considered by the Legislative Assembly."

Sri D. K. NAIKAR.—(Minister for Law and Parliamentary Affairs).—Sir, On behalf of the Hon. Chief Minister, I beg to move :

"That The Mysore High Court (Amendment) Bill, 1973, be taken into consideration.

MADAM SPEAKER.—Motion moved :—

"That The Mysore High Court (Amendment) Bill, 1973, be taken into consideration."

Sri T. R. SHAMANNA.—The subject taken up is in an order different from the order noted in the agenda. If every day the subject is taken up in an order different from the agenda, it would be difficult for us to send amendments or to prepare ourselves. So, what I am requesting is that it should be in keeping with the order in the agenda. Yesterday also it happened like that.

ಅಧ್ಯಕ್ಷರು.—ಕೆಲವು ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಕೋಆಪರೇಟ್ ಮಾಡುವುದಕ್ಕೋಸ್ಕರ ಹಾಗೆ ಮಾಡಬೇಕಾಗಿ ಬರುತ್ತದೆ. ಅದರಲ್ಲಿ ಏನೂ ತಪ್ಪು ಇಲ್ಲ. There is no harm in it.

†ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೆ, ಈಗ ಇದ್ದಂತಹ ಪ್ರೊವಿಜನ್ ಆರ್ಟಿಕಲ್ ೨೨೬, ೨೨೭ ಮತ್ತು ೨೨೮ನೇ (೧)ನೇ ಕ್ಲಾಸ್ ಪ್ರಕಾರ ಅರ್ಜಿಗಳು ಎರಡು ಜನ ಇದ್ದಂತಹ ಒಂದು ಬೆಂಚಿಗೆ ಬರುತ್ತದೆ. ಬೆಂಚಿನ ತೀರ್ಮಾನದ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲ ಹೋಗಬಹುದು. ಆದರೆ ೩೦ನೇ ತಿದ್ದುಪಡಿಯಾದ ನಂತರ ಸುಪ್ರೀಂ ಕೋರ್ಟಿಗೆ ಹೋಗುವ ಅವಕಾಶವನ್ನು ರಿಸ್ಟ್ರಿಕ್ಟ್ ಮಾಡಲಾಗಿದೆ. ಇಂಥ ಕೇಸುಗಳಲ್ಲಿ ಕಾನೂನನ್ನು ವಿಚಾರಣೆ ಮಾಡುವಂತಹ ಪ್ರಶ್ನೆ ಇದೆ ಎಂದು ಸರ್ಟಿಫಿಕೇಟ್ ಕೊಟ್ಟ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲ ಮಾಡಬಹುದು. ಆದ್ದರಿಂದ ಕೆಲವು ಕೇಸುಗಳಲ್ಲಿ ಬಡ ಜನರಿಗೆ ಸುಪ್ರೀಂ ಕೋರ್ಟಿಗೆ ಹೋಗುವ ಅವಕಾಶ ದೊರೆಯುವದಿಲ್ಲ. ಆದ್ದರಿಂದ ಇದಕ್ಕೆ ತಿದ್ದುಪಡಿಯನ್ನು ತಂದು ಮೊದಲು ಸಿಂಗಲ್ ಜಡ್ಜ್‌ನಿಂದ ವಿಚಾರಣೆಯಾದ ಮೇಲೆ, ಇಬ್ಬರು ಜಡ್ಜ್‌ಸ್ ಇರುವಂತಹ ಬೆಂಚಿಗೆ ಅಪೀಲಿನಲ್ಲಿ ಹೋಗುವಂತಹ ಅವಕಾಶವನ್ನು ಮಾಡಲಾಗಿದೆ. ಹಿಂದೆ ೧೯೫೨ ಮತ್ತು ೧೯೬೦ರಲ್ಲಿ ಆದ ಲಾ ಮಿನಿಸ್ಟರ್ಸ್ ಕಾನ್‌ಫರೆನ್ಸ್‌ನಲ್ಲಿಯೂ ಸಹ ಇದು ಸರಿಯಾದ ಪ್ರೊಸೀಜರ್ ಎಂದು ಶಿಫಾರಸು ಮಾಡಿದ್ದಾರೆ. ಅದಲ್ಲದೆ ಲಾ ಕಮಿಶನ್‌ನ ೧೪ನೇ ರಿಪೋರ್ಟ್‌ನಲ್ಲಿ ಸಹ ಮದ್ರಾಸ, ಬಾಂಬೆ ಮತ್ತು ಇತರ ಮೆಜಾರಿಟಿ ರಾಜ್ಯಗಳಲ್ಲಿ ಈ ಪ್ರೊಸೀಜರ್ ಅಡಾಪ್ಟ್ ಮಾಡಿರುವುದರಿಂದ ಸ್ಪೀಡೀ ಡಿಸ್ಪೋಸಲ್ಸ್ ಆಗುತ್ತದೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅಲ್ಲದೆ ಕೇರಳ, ನಾಗಪುರ, ಕಲ್ಕತ್ತ,

ಆಂಧ್ರಪ್ರದೇಶ, ಬಾಂಬೆ, ಅಲಹಾಬಾದ, ಮತ್ತು ಡೆಲ್ಲಿ ಮುಂತಾದ ಕಡೆಗಳಲ್ಲಿ ಇದೇ ಸಿಸ್ಟಮ್ ಇರುವುದರಿಂದ ನಮ್ಮಲ್ಲಿಯೂ ಸಹ ಇದನ್ನು ಮಾಡಬೇಕೆಂದು ತಿದ್ದು ಪಡಿಯನ್ನು ಮಾಡಲಾಗಿದೆ. ಇದನ್ನು ಸಭೆ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

†Sri T. R. SHAMANNA.—(Fort) Madam Speaker, it is a small amendment but it is of considerable importance to the litigants. As you are all aware, justice also now-a-days has become very costly and, at the same time, the judges cannot be said to be always going according to equity and justice. From the decisions given in the courts, we find that though the litigants spend a lot of money, in many cases, they are not getting justice. One important feature of this Bill is that if a case has been taken before a single judge, there is a provision for appeal, whereby the litigant can appeal in the same court to a bench of two judges. And, of course, if an appeal has to be taken to the Supreme Court, there is a lot of expenditure to be incurred. Delhi being far away from the capital of this State, naturally to engage a Lawyer to appear before the Supreme Court and to meet several other charges in connection with the Supreme Court appeal, there will be a lot of expenditure. If there is appeal to be found in the High Court of the State, it will be advantageous in many respects. But as already seen, the judges now appointed are to a certain extent, to the convenience of the Government rather than according to the principles involved. In the recent appointment of the Supreme Court Chief Justice, of course, politics has played its part and it is not a healthy feature that judges are appointed on considerations other than the usual practice that has been adopted hitherto. Convenience should not be the criterion for appointment of judges.

2-30 P. M.

Here there are many clauses relating to the Constitution. I have sent an amendment also to the Act to the effect that when there is an appeal against the order of single Judge to a Bench of two Judges, that Bench of two Judges should consist of Judges other than the Judge who

passed the original decree or order. The reason that prompted me to give that amendment is that the Judge who passed the original order or decree has already formed his opinion and if he is one of the Judges in the Bench constituted to dispose of the appeal against his order, that Judge will continue to hold his own views in disposing of the appeal. There will be again controversy about the Judgement given by the two-Judge Bench. Therefore, to avoid this controversy and to get real justice in appeals, I have suggested an amendment to the relevant section of the principal Act.

With these remarks, I welcome the Bill and request that it may be adopted.

†ಶ್ರೀ ವಿ. ಎನ್. ಪಾಟೀಲ (ಹುಮನಾಬಾದ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನ ಕೆಲವು ಭಾಗಗಳನ್ನು ನಾನು ಸ್ವಾಗತಮಾಡುತ್ತೇನೆ. ಕೆಲವು ಕಡೆಗಳಲ್ಲಿ ಇನ್‌ಟಿನ್ಷನಲಿ ಇನ್‌ಕ್ಲೂಡ್ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಅದು ಅಮೆಂಡಮೆಂಟ ಆಗುವುದಿಲ್ಲ. ಕೆಲವು ವಿಷಯಗಳನ್ನು ನಾನು ಕ್ರಿಟಿಸೈಜ ಮಾಡ ಬೇಕಾಗಿದೆ. ಇನ್ನು ಕೆಲವು ವಿಷಯಗಳ ಬಗ್ಗೆ ನಾನು ರಚನಾತ್ಮಕವಾದ ಸಲಹೆ ಗಳನ್ನು ಕೊಡುತ್ತಿದ್ದೇನೆ. ಒಟ್ಟಿನಲ್ಲಿ ಇದರಲ್ಲಿರತಕ್ಕ ಕೆಲವಾರು ಲೋಪ ದೋಷ ಗಳನ್ನು ಎಗ್ಜಾಮಿನ ಮಾಡಿ ರಿ-ಕಾನಸ್ಟಿಟ್ಯೂಟ ಮಾಡಬೇಕಾಗಿದೆ. ಇದರಲ್ಲಿ ಒಬ್ಬ ನ್ಯಾಯಾಧೀಶ ಕೂತುಕೊಳ್ಳುವುದು ಬೇಡ, ಇಬ್ಬರು ಕೂತುಕೊಳ್ಳಲಿ ಎಂಬ ಮಾತು ಮಾತ್ರ ಇರುತ್ತದೆ. ಇದು ಇನ್‌ಜಸ್ಟಿಸ ಆಗಿರುತ್ತದೆಂದು ವಿರೋಧಪಕ್ಷ ದವರ ಕಡೆಯಿಂದ ಬಂದಿದೆ. ಆದರೆ ಹೆಬಿಯಾಸ ಕಾರ್ಪಸ ತರಹ ರಿಟ್ ಪಿಟಿಷನ ಗಳ ಬಗ್ಗೆ ಶೇಕಡ ೯೯ರಷ್ಟು ಜನ ಎರಡು ನ್ಯಾಯಾಧೀಶರ ಹತ್ತಿರ ರಿಟ್ ಪಿಟಿಷನ್ ಫೈಲ ಮಾಡಬೇಕೆಂದು ಹೇಳುತ್ತಾರೆ. ಆಗಲೂ ವಿರೋಧ ಬಂದರೆ ಸುಪ್ರೀಂ ಕೋರ್ಟಿಗೆ ಹೋಗಿ ಎಂದು ಹೇಳುತ್ತಾರೆ. ಇದರಲ್ಲಿ ಒಂದು ಸಂಶಯ ಬರುತ್ತ ದೆಂದು ಹೇಳುತ್ತೇನೆ. ಇದರಲ್ಲಿ ಒಂದು ಪೊಲಿಟಿಕಲ ಪ್ರೆಷರನ್ನು ತಮ್ಮ ಕೈಕೆಳಗೆ ಇಟ್ಟುಕೊಳ್ಳುತ್ತಿದ್ದಾರೆ. ಇದರಿಂದ ಒಬ್ಬ ಲಿಟಿಗೆಂಟ ಪಾರ್ಟಿಗೆ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಅಲ್ಲಿ ನ್ಯಾಯ ದೊರಕಿಸಿಕೊಡಬೇಕಾದರೆ ಇನ್ನೂ ಕಷ್ಟ. ಸುಪ್ರೀಂ ಕೋರ್ಟನಲ್ಲಿ ಯಾವಾಗಲೂ ತನ್ನ ಕಮಿಷನ್ನಿಗೆ ಅನ್ಯಾಯ ಮಾಡಬೇಕೆಂದು ಹೋಗುವುದಕ್ಕಾಗುವುದಿಲ್ಲ. ಯಾವಾಗಲೂ ಮೊದಲು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದರೆ ಮಾತ್ರ ಸುಪ್ರೀಂ ಕೋರ್ಟಿಗೆ ಹೋಗಬೇಕು. ಲಿಟಿಗೆಂಟ ಪರ್ಸನ್ಸ ಒಂದು ಸಾವಿರದಲ್ಲಿ ಒಬ್ಬಿಬ್ಬರು ಇರಬಹುದು. ಅಂತಹ ಒಂದು ಸನ್ನಿವೇಶ ಬರುತ್ತದೆ. ರಿಟ್ ಪಿಟಿಷನ್ನಿನಲ್ಲಿ ಲಿಟಿಗಂಟ ಅಪೀಲು ಫೈಲ ಮಾಡಬೇಕಾಗಿದೆ. ಅದಕ್ಕೆ ಇಬ್ಬರು ಜಡ್ಜಸ ಇರತಕ್ಕ ಒಂದು ಬೆಂಚ ಕಾನೆಸ್ಟಿ

ಟ್ಯೂಟ ಮಾಡಬೇಕಾಗುತ್ತದೆ. ಒಬ್ಬ ನ್ಯಾಯಾಧೀಶರು ಡಿಸಿಷನ ಕೊಡುವಾಗ ಅದರಲ್ಲಿ ಏನಾದರೂ ಪೊಲಿಟಿಕಲ್ಲ ಡಿಸಿಷನ ಬರುವುದಾದರೆ, ಆಗ ಅದನ್ನು ಇನ್ನೊಬ್ಬರು ವಿಚಾರ ಮಾಡಬೇಕು. ಆಗಲೂ ವಿರೋಧವಿದ್ದರೆ ಸುಪ್ರೀಂ ಕೋರ್ಟಿನಲ್ಲಿ ಇನ್ನೂ ಹೆಚ್ಚಿಗೆ ಜಡ್ಜಸಗಳನ್ನು ನೇಮಕ ಮಾಡುವ ಬಗ್ಗೆ ಆಲೋಚನೆಮಾಡಿ ಅದನ್ನು ಇಬ್ಬರು ಜಡ್ಜಸ ಇರುವ ಒಂದು ಬೆಂಚಿಗೆ ರೆಫರ ಮಾಡಬೇಕಾಗುತ್ತದೆ. ಯಾವ ನ್ಯಾಯಾಧೀಶರು ತೀರ್ಪು ಕೊಡುತ್ತಾರೋ ಅದೇ ನ್ಯಾಯಾಧೀಶರು ಅಪೀಲು ಕೇಳುವ ಬೆಂಚಿನಲ್ಲಿ ಜಡ್ಜ ಆಗಿರಬಾರದು. ಹೈಕೋರ್ಟ ಜಡ್ಜ ಅವರನ್ನು ಅಲ್ಲಿ ನೇಮಕ ಮಾಡಿದರೂ ಡಿಸ್ಟ್ರಿಕ್ಟ ಜಡ್ಜ ಡಿಸಿಷನ ಕೊಟ್ಟಮೇಲೆ ಅದು ಪುನಃ ಅಪೀಲಿಗೆ ಬರುತ್ತದೆ. ಆಗ ಸರ್ಕಾರ ಹೈಕೋರ್ಟಿನಲ್ಲಿ ಏನು ಡಿಸಿಷನ ಕೊಟ್ಟಿದ್ದಾರೋ ಅದನ್ನು ನೋಡಿ ಅದರ ಬಗ್ಗೆ ಮತ್ತೊಮ್ಮೆ ಅಪೀಲು ಕೇಳುವುದಕ್ಕೆ ಅರ್ಹತೆ ಇಲ್ಲ ವೆಂದು ಹೇಳಿ ಮತ್ತೊಂದು ಬೆಂಚ ಮಾಡಿ ಚೀಫ ಡಿಸ್ಟ್ರಿಕ್ಟ ಜಡ್ಜಗೆ ಅದನ್ನು ಕಳುಹಿಸಿಕೊಡುತ್ತಾರೆ. ಆಗಲೇ ಜುಡಿಷಿಯಲ್ಲ ಎನ್‌ಕ್ವೈರಿ ಮಾಡಿ ಒಂದು ಜುಡಿಷಿಯಲ್ಲ ಡಿಸಿಷನ ಸಹ ಬರುತ್ತದೆ. ಮೆರಿಟ್ ಆಫ್ ಕೇಸಸ್‌ನಲ್ಲಿ ಅದನ್ನು ಕನಸಿಡರ ಮಾಡುತ್ತಾರೆ. ನ್ಯಾಯಾಧೀಶರಲ್ಲಿ ಒಂದು ರೀತಿಯ ಗೌರವವನ್ನು ಇಟ್ಟುಕೊಂಡು ಬಂದರೆ, ಆಗ ಅಪೀಲುಗಳ ಬಗ್ಗೆ ಒಂದು ಫೈನಲ್ಲ ಡಿಸಿಷನ ಜಾಗ್ರತೆ ಯಾಗಿ ಆಗುವುದು. ಅದರಲ್ಲಿ ಸಿಂಗಲ್ ಜಡ್ಜ ಡಿಸಿಷನ ಆಗಿರುವುದನ್ನು ಅಪೀಲು ಮೂಲಕ ಬೆಂಚ ಆಫ್ ಟು ಜಡ್ಜಸ ಅವರು ಕೇಳಬಹುದು. ಈ ರಿಟ್ ಪಿಟಿಷನ್ಸ ಬಗ್ಗೆ ಹೈಕೋರ್ಟ ಮತ್ತು ಸುಪ್ರೀಂ ಕೊರ್ಟುಗಳಲ್ಲಿ ಕ್ಲಾರಿಪಿಕೇಷನ್ಸ ಆದ ಮೇಲೆ ಆರ್ಟಿಕಲ್ ೨೩೩ರ ಪ್ರಕಾರ ಅಪೀಲುಗಳನ್ನು ಸಿಂಗಲ ಜಡ್ಜ ಅವರು ಕೇಳಬಹುದೆಂದು ಮಾಡುವುದು ಒಳ್ಳೆಯದು. ಆಗ ಜನಗಳಿಗೆ ಸುಪ್ರೀಂ ಕೋರ್ಟಿಗೆ ಅಪೀಲು ಮಾಡ ಬೇಕಾಗುತ್ತದೆಂಬ ಒಂದು ಅಂಜಿಕೆ ಹೊರಟು ಹೋಗುತ್ತದೆ. ಅನೇಕ ರಾಜಕಾರಣಿ ಗಳು ಇವತ್ತು ನ್ಯಾಯಾಸ್ಥಾನಗಳಿಗೆ ಬರುತ್ತಿದ್ದಾರೆ. ಲಾ ಮಿನಿಸ್ಟರ ಇದರ ಬಗ್ಗೆ ಒಂದು ಸ್ಪೆಸಿಫಿಕ್ ಅಂಡರಟೇಕಿಂಗ ಕೊಡಬೇಕು. ಇನ್ನು ಮುಂದೆ ನ್ಯಾಯಾಂಗ ದಿಂದ ಶಾಸ್ಯಾಂಗಕ್ಕೂ ಬರುತ್ತಾರೆ. ಈ ಮಾತನ್ನು ಮಾನ್ಯ ಶ್ರೀ ಶಾಮಣ್ಣನವರೂ ಹೇಳಿದರು. ನ್ಯಾಯಾಸ್ಥಾನಗಳಲ್ಲಿ ರಿಟ್ ಅರ್ಜಿಗಳು ಬರಬೇಕೆಂಬುದರಲ್ಲಿ ನಮ್ಮ ಪಕ್ಷ ನಿಮ್ಮ ಪಕ್ಷವೆಂಬ ಭೇದಭಾವವೇನೂ ಇಲ್ಲ. ಪ್ರತಿಯೊಂದು ವಿಷಯವನ್ನು ಬಹಳ ಸೂಕ್ಷ್ಮವಾಗಿ ಅರಿತುಕೊಳ್ಳುವ ನ್ಯಾಯಾಧೀಶರು ಇರಬೇಕು. ನಮ್ಮ ದೇಶದಲ್ಲಿ ಯಾವ ಜನಾಂಗಕ್ಕೆ ಅನ್ಯಾಯವಾಗಿದೆಯೋ ಅವರ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಅಲ್ಲಿ ಪ್ರಯತ್ನಮಾಡಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಶ್ರೀ ಪಾಟೀಲ ಅವರದು ಕಮ್ಯೂನಿಸ್ಟ ಸರ್ಕಾರ, ಅದು ಸಧ್ಯದಲ್ಲಿಯೇ ಬರುತ್ತದೆ.

ಶ್ರೀ ವಿ. ಎನ್. ಪಾಟೀಲ.—ಯಾವುದೇ ಸರ್ಕಾರ ಬರಲಿ, ಆಗ ಅದರಂತೆ ಅದು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಇನ್ನು ಯಾವುದಾದರೂ ಕಾರಣಗಳಿಂದ

ನಮ್ಮ ಸರ್ಕಾರ ಬರುವುದಿಲ್ಲವೆಂದರೆ ನಾಳೆ ನಿಮ್ಮನ್ನು ಬಲಿ ಹಾಕುವ ಸರ್ಕಾರ ಬಂದಾಗ್ಗೆ ನೀವು ಇದನ್ನು ಬಿಟ್ಟುಹೋಗಬೇಕಾಗುತ್ತದೆ.

ಶ್ರೀ ಎಸ್. ವೈ. ಪಾಟೀಲ.—ನಿಮ್ಮ ಕಮ್ಯೂನಿಸ್ಟ್ಸನಲ್ಲಿ ಗಲ್ಲಿಗೇಟಿಸುವುದೂ ಸಹ ಇದೆ. ಬೇಕು ಎಂದರೆ, ಕಮ್ಯೂನಿಸ್ಟ ಸರ್ಕಾರವನ್ನು ಅವರು ಒಂದು ದಿವಸ ದಲ್ಲಿಯೇ ತರುತ್ತಾರೆ.

ಶ್ರೀ ವಿ. ಎನ್. ಪಾಟೀಲ.—ಪ್ರೋಗ್ರೆಸಿವ ಫೋರ್ಸಸ ಏನಿದೆಯೋ ಅದನ್ನು ನಮ ದೇಶಕ್ಕೆ ಬಿಟ್ಟುಕೊಡಬೇಕಾಗಿದೆ. ಅವರು ಕಮ್ಯೂನಿಸ್ಟ್ಸ ಆದರೂ ದೇಶಕ್ಕೆ ಒಳ್ಳೆಯದನ್ನು ಮಾಡಬೇಕು. ಅವರಲ್ಲದೆ ಬೇರೆ ಯಾರೂ ರ್ಯಾಡಿಕಲ್ಸ ಅಲ್ಲವೆಂದು ನಾನು ಹೇಳುವ ಹಾಗೆ ಇಲ್ಲ. ನಾವು ಅದನ್ನು ನೋಡಿಲ್ಲ. ನಮ್ಮದು ಮನಾಪಲಿಯಲ್ಲ. ಆದರೆ ಕಮ್ಯೂನಿಸ್ಟ್ಸ ಸರ್ಕಾರ ಎಂದೂ ಬರುವುದಿಲ್ಲವೆಂದು ಎಲ್ಲರೂ ಹೇಳಿದರು. ಇಂತಹ ಒಂದು ಭಾವನೆಯನ್ನು ಇಟ್ಟುಕೊಳ್ಳಬಾರದು. ಆ ಒಂದು ಸರ್ಕಾರವನ್ನು ತಡೆಗಟ್ಟುವುದಕ್ಕೆ ಯಾರಿಗೂ ಶಕ್ತಿ ಇಲ್ಲ. ಇನ್ನು 'ಅಹಿಂಸೋ ಪರಮೋಧರ್ಮ' ಎಂಬ ಚಿಹ್ನೆ ಕಾಂಗ್ರೆಸ ಟೋಪಿಯಿಂದ ಕಾಣುವ ಹಾಗೆ ಅನೇಕ ತತ್ವಗಳನ್ನು ಬರೆಸಿದ್ದಾರೆ. ಆ ತತ್ವದ ಪ್ರಕಾರ ರಿವಲ್ಯೂಷನ ತಂದಿದ್ದಾರೆ. ಅದು ರಿಯಲ್ಲ ರಿವಲ್ಯೂಷನ್ನೇ? ಅಥವಾ ರಿವಲ್ಯೂಷನ ಅಲ್ಲವೇ ಎಂಬುದಾಗಿ ನಾನು ತಮ್ಮ ಕಡೆ ಪ್ರಶ್ನೆ ಕೇಳುತ್ತೇನೆ. ಆದುದರಿಂದ ನನಗೆ ಮಾನ್ಯ ಅಧ್ಯಕ್ಷರು ಸ್ವಲ್ಪ ಪೊಲಿಟಿಕಲ್ ಪ್ರೊಟೆಕ್ಷನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ದಿವಸ ಎಲ್ಲ ವಿಚಾರಗಳಲ್ಲೂ ಹೊಸ ಹೊಸದನ್ನು ಕಾಣುತ್ತಿರುವಾಗ, ಹಳೇ ಕಂದಾಚಾರ ಪದ್ಧತಿಗಳನ್ನು ಕೈಬಿಡ ತಕ್ಷ ಕಾಲದಲ್ಲಿ ಸಮಾಜದಲ್ಲಿ ಎಲ್ಲ ರಂಗದಲ್ಲೂ ರ್ಯಾಡಿಕಲ ಛೇಂಜಸನ್ನು ಕಾಣುತ್ತಿರುವಾಗ ಈ ಜ್ಯುಡಿಷಿಯರಿಯಲ್ಲಿ ಇನ್ನೂ ನೂರಕ್ಕೆ ತೊಂಭತ್ತರಷ್ಟು ಜಡ್ಜಿಗಳು ಆ ಹಳೇ ಸಂಪ್ರದಾಯದಲ್ಲೇ ಇದ್ದರೆ ಹೇಗೆ? ಈ ದಿವಸ ನಾವು ಹೊಸ ಸಮಾಜವನ್ನು ರಚಿಸ ತಕ್ಕ ಕಾಲವಲ್ಲಿ ಆ ಬದಲಾವಣೆಗಳಿಗೆ ನ್ಯಾಯಾಲಯದಲ್ಲೂ ಒಂದು ರಕ್ಷಣೆ ಸಿಗಬೇಕು ಅದಕ್ಕೆ ಅನುಕೂಲವಾದ ಬಿಲ್ಲನ್ನು ಸರ್ಕಾರದವರು ಇಂದು ತಂದಿದ್ದಾರೆ. ಆದರೆ ಶ್ರೀ ಶಾಮಣ್ಣನವರು ಹೇಳಿದ್ದು ಸರಿಯಲ್ಲ ಎಂದು ಹೇಳಲು ನಾನು ಇಷ್ಟನ್ನು ಹೇಳಬೇಕಾಯಿತು. ನನಗೆ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಮೈಸೂರು ಹೈಕೋರ್ಟ (ಅಮೆಂಡ ಮೆಂಟ) ಬಿಲ್ಲ ೧೯೭೩ ಇದನ್ನು ಸ್ವಾಗತಿಸುತ್ತ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ—

ಈ ದಿವಸ ಅನೇಕ ಹೈಕೋರ್ಟುಗಳಲ್ಲಿ ರಿಟ್‌ಪೆಟಿಷನ್ನುಗಳ ವಿಚಾರಣೆಗೆ ಎರಡು ಜನ ಜಡ್ಜಿಗಳು ಕುಳಿತು ವಿಚಾರಣೆ ನಡೆಸಿ ಒಂದು ತೀರ್ಮಾನವನ್ನು ಕೊಟ್ಟ

ಮೇಲೆ ಅದರ ಮೇಲೆ ಅಪೀಲನ್ನು ಹಾಕಬೇಕಾಗಿದ್ದರೆ ಅವರು ಸುಪ್ರೀಂ ಕೋರ್ಟಿಗೇ ಹೋಗಬೇಕಾಗಿತ್ತು. ಆದರೆ ಇನ್ನು ಮುಂದೆ ಅದನ್ನು ತಪ್ಪಿಸಿ ಆ ಅಪೀಲನ್ನು ಇಲ್ಲಿ ಹೈಕೋರ್ಟಿನಲ್ಲಿ ಎರಡು ಜನ ಜಡ್ಜಿಗಳು ಇರತಕ್ಕ ಒಂದು ಬೆಂಚಿಗೆ ಅಪೀಲನ್ನು ಹಾಕುವುದಕ್ಕೆ ಅವಕಾಶ ಮಾಡಬೇಕೆಂದು ಈಗ ಈ ಬಿಲ್ಲನ್ನು ತಂದಿದ್ದಾರೆ. ಆದರೆ ಇದರಲ್ಲಿ ಈ ಹೆಬಿಯಸ್ ಕಾರ್ಪಸ್ ಬಗ್ಗೆ ಬರತಕ್ಕ ರಿಟ್‌ಗಳನ್ನು ಹೊರತುಪಡಿಸಿ ಬಾಕಿಯ ರಿಟ್‌ಗಳಿಗೆಲ್ಲಾ ಇದರಲ್ಲಿ ಅವಕಾಶ ಮಾಡಿದ್ದಾರೆ. ಇದರೆ ಈ ಹೆಬಿಯಸ್ ಕಾರ್ಪಸ್ ರಿಟ್ಟುಗಳು ಬಹುತೇಕ ರಾಜಕೀಯ ಪಕ್ಷಗಳಿಗೇ ಹೆಚ್ಚಿನ ಸಂಬಂಧವುಳ್ಳ ದ್ದಾಗಿದೆ. ಈ ದಿವಸ ಒಂದು ರಾಜಕೀಯ ಪಕ್ಷ ಅಧಿಕಾರದಲ್ಲಿರಬಹುದು, ನಾಳೆ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರಬಹುದು. ಆದರೆ ಈ ರಿಟ್‌ನಲ್ಲಿ ಬರತಕ್ಕದ್ದೆಲ್ಲಾ ಒಬ್ಬ ವ್ಯಕ್ತಿಯನ್ನು ಬಂಧನದಲ್ಲಿಡತಕ್ಕ ವಿಚಾರ ಬಿಟ್ಟರೆ ಬೇರೇನೂ ಇಲ್ಲ. ಈ ಮಸೂದೆಯಲ್ಲಿ ಎಲ್ಲ ರಿಟ್ಟುಗಳಿಗೂ ಸಿಂಗಲ್ ಬೆಂಚಿನಲ್ಲಿ ತೀರ್ಮಾನವಾದವುಗಳಿಗೆ ಅದೇ ನ್ಯಾಯಾಲಯದಲ್ಲಿ ಇಬ್ಬರು ಜಡ್ಜರು ಇರತಕ್ಕ ಡಿವಿಜನಲ್ ಬೆಂಚಿಗೆ ಅಪೀಲು ಹಾಕುವುದಕ್ಕೆ ಹೇಗೆ ಒಂದು ಅವಕಾಶವನ್ನು ಕಲ್ಪಿಸಲಾಗಿದೆಯೋ ಅದೇ ರೀತಿ ಈ ಹೆಬಿಯಸ್ ಕಾರ್ಪಸ್ ರಿಟ್ಟುಗಳಿಗೂ ಅದರಲ್ಲಿ ಅವಕಾಶ ಮಾಡಿಕೊಡಬೇಕಾದ್ದು ನ್ಯಾಯ. ರಾಜಕೀಯ ವರ್ಗದಲ್ಲಿರತಕ್ಕ ಜನಕ್ಕೆ ಈ ಸೌಲಭ್ಯ ಅತ್ಯಗತ್ಯ. ಅದಕ್ಕೆ ಅವಕಾಶಮಾಡಿಕೊಟ್ಟರೆ ಏನೂ ತಪ್ಪಾಗುವುದಿಲ್ಲ. ಇನ್ನು ಈ ರಿಟ್ಟುಗಳನ್ನು ಆ ಉಚ್ಚ ನ್ಯಾಯಾಲಯಕ್ಕೆ ದೆಹಲಿಗೆ ತೆಗೆದುಕೊಂಡು ಹೋಗಬೇಕೆಂದರೆ ಪಾರ್ಟಿಗೂ ಬಹಳ ಖರ್ಚಾಗುತ್ತದೆ—ಸರ್ಕಾರಕ್ಕೂ ವಿಶೇಷ ಹಣ ಖರ್ಚಾಗುತ್ತದೆ. ಈ ದಿವಸ ನಮ್ಮ ರಾಜ್ಯದಿಂದ ಆ ಸುಪ್ರೀಂ ಕೋರ್ಟಿಗೆ ಅಪೀಲ ಹೋಗಿರತಕ್ಕ ರಿಟ್ಟುಗಳಲ್ಲಿ ಇನ್ನೂ ಇತ್ಯರ್ಥವಾಗದೆ ಒಂದು ಸಾವಿರಕ್ಕೂ ಮೇಲ್ಪಟ್ಟು ಕೇಸುಗಳು ಇನ್ನೂ ಹಾಗೇ ಪೆಂಡಿಂಗ ಇರುತ್ತವೆ. ಅಲ್ಲದೆ ಒಂದು ಕೇಸಿಗೆ ಎಷ್ಟೇ ಕಡಿಮೆ ಎಂದರೂ ೧೦ ಸಾವಿರ ರೂಪಾಯಿಗಳಿಗೆ ಕಡಮೆ ಖರ್ಚಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ — ಅವುಗಳೆಲ್ಲಾ ಸಾಮಾನ್ಯವಾಗಿ ಸರ್ವೀಸ ಕೇಸುಗಳು.

ಶ್ರೀ ಕಾಗೋಡು ತಿಮ್ಮಪ್ಪ.—ಹೌದು, ಆ ಸರ್ಕಾರಿ ನೌಕರರ ಸೇವೆಗೆ ಸಂಬಂಧಪಟ್ಟ ಸೀನಿಯಾರಿಟಿ ನಿಯಮಗಳನ್ನು ಮಾಡದೆ ಇರುವುದರಿಂದ ಈ ತೊಂದರೆ ಬಂದಿದೆ. ಆ ರಿಟ್ಟುಗಳಲ್ಲಿ ನೂರಕ್ಕೆ ೯೦ ಸರ್ಕಾರಕ್ಕೆ ಸಂಬಂಧಪಟ್ಟವು. ಅಂದಾಗ ವಿನಾಕಾರಣ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಬಹುದು ಎಂಬುದನ್ನು ಯೋಚಿಸಿ. ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಖರ್ಚು ಬರುತ್ತದೆ. ಅಷ್ಟೇ ಅಲ್ಲದೆ ಸಿಂಗಲ್ ಬೆಂಚಿನಿಂದ ಡಿವಿಜನ ಬೆಂಚಿಗೆ ಅಪೀಲಿಗೆ ಅವಕಾಶ ಮಾಡಿದಾಗ ಅವರು ಹೊಸದಾಗಿ ಲಾಯರನ್ನು ಇಡಬೇಕಾದ್ದಿಲ್ಲ, ಖರ್ಚೂ ಕೂಡ ಕಡಮೆ ಆಗುತ್ತದೆ. ಅಲ್ಲದೆ ಈ ರಿಟ್‌ಗಳ ಜೊತೆಗೆ ಈ ಹೆಬಿಯಸ್ ರಿಟ್ ಅರ್ಜಿಗಳನ್ನೂ ಸೇರಿಸುವುದರಿಂದ ಸರ್ಕಾರಕ್ಕೆನೂ ಇತರ ರಿಟ್‌ಗಳಂತೆ ಖರ್ಚು ಬರುವುದಿಲ್ಲ. ಇಲ್ಲಿ ಬರೀ ವ್ಯಕ್ತಿಯನ್ನು

ಬಂಧನದಿಂದ ಬಿಡುಗಡೆ ಮಾಡುವುದೊಂದೇ ಇದರಲ್ಲಿ ಬರತಕ್ಕ ಪ್ರಶ್ನೆ. ಆದುದರಿಂದ ಸೆಕ್ಷನ್ (೯)ರಲ್ಲಿ ಈ ಹೆಬಿಯಸ್ ಕಾರ್ಪಸ್ ರಿಟ್‌ಗಳನ್ನೂ ಸೇರಿಸಬೇಕೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್ಲು).— ಮಾನ್ಯ ಅಧ್ಯಕ್ಷರೇ ಸಭೆಯ ಮುಂದೆ ಮುಂಡಿಸಿರತಕ್ಕ ೧೯೭೩ನೇ ಮೈಸೂರು ಹೈಕೋರ್ಟ್ (ಅಮೆಂಡಮೆಂಟ್) ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ವಿಚಾರದಲ್ಲಿ ಈಗಾಗಲೇ ನನ್ನ ಮಿತ್ರರಾದ ತಿಮ್ಮಪ್ಪನವರು ಮತ್ತು ವಿ. ಎನ್. ಪಾಟೀಲರು ಮಾತನಾಡಿದ್ದಾರೆ. ಆದರೆ ಇವರಿಬ್ಬರೂ ಸಭೆಯ ಮುಂದೆ ಏನು ಒಂದು ಪ್ರಾಮುಖ್ಯವಾದ ಪ್ರಶ್ನೆಯನ್ನೆತ್ತಿದ್ದಾರೆ. ಅದು ಸ್ಥಾನಬದ್ಧತೆಗೆ ಸಂಬಂಧಪಟ್ಟ ವಿಷಯವಾಗಿದೆ. ಇದು ನಮ್ಮ ದೇಶದಲ್ಲಿ ಒಂದು ಅನಾವಶ್ಯಕವಾದ ಕಾನೂನು. ಇದನ್ನು ಹಿಂದೆ ಅಧಿಕಾರದಲ್ಲಿ ಇಂಗ್ಲೀಷರು ಇಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿದ್ದ ಕಾಲದಲ್ಲಿ ಜನರ ಆಶೋತ್ತರಗಳನ್ನು ಮೊಟಕು ಮಾಡಲು, ಸ್ವಾತಂತ್ರ್ಯದ ಹೋರಾಟವನ್ನು ಹತ್ತಿಕ್ಕಲು ಈ ಒಂದು ಕಾನೂನನ್ನು ಜಾರಿಗೆ ತಂದಿದ್ದರು. ಆದರೆ ಆ ಜನರು ದೇಶವನ್ನು ಬಿಟ್ಟು ಹೋದರೂ ಆಡಳಿತವನ್ನು ನಡೆಸತಕ್ಕ ಜನರಲ್ಲಿ ಆ ಭಾವನೆ ಮಾತ್ರ ಇನ್ನೂ ಹೋಗಲಿಲ್ಲ. ಜನರ ಸಮಸ್ಯೆ ತೀವ್ರವಾದಾಗ ಜನರನ್ನು ಸಂಘಟನೆ ಮಾಡಬೇಕಾದಾಗ ರಾಜಕೀಯ ಕಾರಣದಿಂದ ಸರಕಾರ ಈ ಕಾನೂನನ್ನು ಉಪಯೋಗಮಾಡುತ್ತದೆ. ಆಡಳಿತ ಪಕ್ಷದ ಮನೋಭಾವ ಬದಲಾವಣೆಯಾಗುವುದಕ್ಕೆ ಒಂದು ಉದಾಹರಣೆ ಲಾ ಮಂತ್ರಿಗಳ ಕಾಯಿದೆಯಲ್ಲೇ ಇದೆ. ಹೇಬಿಯಸ್ ಕಾರ್ಪಸ್‌ಗೆ ಸಂಬಂಧಪಟ್ಟಂತೆ ಕೂಡ ನಮ್ಮ ಮಿತ್ರರು ಹೇಳಿದಂತೆ ಈ ಬಿಲ್ಲಿನಲ್ಲಿ ತೋರಿಸಿರುವ ಅವಕಾಶ ಕಲ್ಪಿಸಬೇಕಾಗಿತ್ತು. ಆದರೆ ಅದಕ್ಕೆ ಗಮನಕೊಟ್ಟಿಲ್ಲ. ರಿಟ್ ವಿಚಾರದಲ್ಲಿ ಎಲ್ಲರಿಗೂ ಕೂಡ ಒಂದೇ ರೀತಿಯ ಅವಕಾಶ ಕೊಡಬೇಕು. ಇದಕ್ಕೆ ತಕ್ಕ ಅವಕಾಶ ಮಾಡಬೇಕು. ಇದು ಸೂಕ್ತವಾಗಿರುವುದರಿಂದ ಪರಿಶೀಲಿಸಬೇಕು.

ಇದಾದಮೇಲೆ ಶ್ರೀ ಶಾಮಣ್ಣನವರು ಒಂದು ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಶ್ರೀ ವಿ. ಎನ್. ಪಾಟೀಲರು ಉತ್ತರ ಕೊಟ್ಟಿದ್ದಾರೆ. ಈ ಪ್ರಶ್ನೆಯನ್ನು ಮೊಟ್ಟ ಮೊದಲು ಎತ್ತಿದವರು ಶ್ರೀ ನಂಬೂದ್ರಿಪಾದರವರು. ಇದನ್ನು ಎತ್ತಿದಾಗ ದೇಶದಲ್ಲಿ ಅಲ್ಲಕಲ್ಲೋಲವಾಯ್ತು. ಅವರನ್ನು ಕೇರಳ ಹೈಕೋರ್ಟಿಗೆಳೆದು ಅಲ್ಲಿ ಅವರಿಗೆ ಒಂದು ಸಾವಿರ ರೂಪಾಗಳ ಜುಲ್ಮಾನೆ ವಿಧಿಸಲ್ಪಟ್ಟಿತು. ಸುಪ್ರೀಂ ಕೋರ್ಟಿನಲ್ಲಿ ಕೂಡ ೫೦ ರೂಪಾಯಿ ಜುಲ್ಮಾನೆ ಹಾಕಿದರು. ಇದನ್ನು ಹೇಳುವುದು ದೇಶದಲ್ಲಿ ಮೊದಲೇ ಮುನ್ನೆಚ್ಚರಿಕೆ ಕೊಟ್ಟಿದ್ದೇವೆ. ನ್ಯಾಯಾಂಗ ಯಾವರೀತಿ ಮುಂದುವರೆಯುತ್ತಿದೆ ಎಂಬುದನ್ನು ನೋಡಬಹುದು. ಈ ರೀತಿ ಮುಂದುವರೆದರೆ ಜನರ ಪರಿಸ್ಥಿತಿ ಏನಾಗಬಹುದು, ಈ ರೀತಿ ಕಾನೂನನ್ನು ಇಂಟರಪ್ರಿಟ್ ಮಾಡುವುದಾದರೆ

ಏನಾಗಬಹುದು ಎಂದು ಎಚ್ಚರಿಕೆ ಕೊಟ್ಟಾಗ ನಮ್ಮ ಮೇಲೆ ಆರೋಪ ಹೊರಿಸಿದರು. ಇಂದು ಕೇಂದ್ರ ಸರಕಾರವಾಗಲಿ ರಾಜ್ಯ ಸರಕಾರವಾಗಲಿ ಜನರ ಕಷ್ಟವನ್ನು ಅರ್ಥ ಮಾಡಿಕೊಳ್ಳಲು ಶಕ್ತಿ ಯಾರಿಗಿದೆ ಅಂಥವರನ್ನು ಮಾತ್ರ ಶ್ರೇಷ್ಠ ನ್ಯಾಯಾಲಯದಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಜಡ್ಜಿಯಾಗಿ ನೇಮಕ ಮಾಡಬೇಕು, ಹಾಗೆ ಮಾಡಿ ಆವರ ಮೂಲಕ ಜನರ ಹಿತವನ್ನು ಕಾಪಾಡಬೇಕು ಎಂದು ಸಲಹೆಮಾಡಿ ಈ ಮಸೂದೆಯನ್ನು ಸ್ವಾಗತಿಸಿ ಹೇಬಿಯಸ್ ಕಾರ್ಪಸ್ ವಿಚಾರದಲ್ಲೂ ಕೂಡ ಇದೇ ರೀತಿಯ ಅವಕಾಶ ಕೊಡಬೇಕು, ಎಲ್ಲಾ ರಿಟ್ಟುಗಳನ್ನೂ ಒಂದೇ ರೀತಿ ಭಾವಿಸಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri C. M. ARUMUGHAM (Kolar Gold Fields).— Madam Speaker, first of all I want to touch upon a point which the Hon. Minister has not disclosed in this Bill and that is about the financial implication. They must say what would be the expenditure if this reorganisation is made if the Bill is passed into law. It is stated in the Financial Memorandum that 'it is not possible to assess the probable expenditure as it depends upon the number of Judges so appointed'. That means, they contemplate the appointment of some Judges. When that is so, they must come forward and say what would be the expenditure. It is relevant in a Bill of this nature and they must come forward with a statement in that behalf.

At the outset, I welcome the Bill as it will help the litigants who are now going to the Supreme Court on appeal. I welcome this Bill because it provides that all applications under articles 226, 227 and 228 should be tried by a single Judge and that there should be an appeal against that judgment to a Bench consisting of two Judges. This should apply even to habeas corpus writs; otherwise on political considerations a party is made to incur some expenditure.

We are living in the South. From Cape Comorin to Delhi is about 2,000 miles. Therefore, for us and others in the South to go to Delhi and get justice is very costly. A litigant has to go all the way to Delhi and almost in an unknown place has to engage a lawyer. The Supreme Court is very far away. In order to spare the litigant public all

the troubles and worries involved in going to Delhi, Government may think about a radical measure in the judiciary, *viz.*, that provision may be made for appeal to a Bench from the judgment of a single Judge of the High Court. This is a suggestion which I am making. The Government may consult the Judiciary and the Government of India also in this matter.

Apart from that, the Bangalore High Court is not centrally located in Mysore State. The people of Belgaum have to travel about 400 miles to come to the High Court here, the people of Gulbarga 450 miles and for the people of Bidar it is still far away. In the light of the experience of past several years, is it not possible for the Government to have a Bench of the High Court either at Belgaum or Gulbarga, as has been done in the State of Maharashtra and U. P. Maharashtra has got one Bench at Bombay and another at Nagpur; so also U. P. But for the construction of Vidhana Soudha, the headquarters would have been shifted to some other centrally located place. Since we have established the headquarters at Bangalore, it is necessary to make justice easier and cheaper and in order to confidence in the people living far away from Bangalore that they can get easier and cheaper justice, it is necessary to have a Bench either at Belgaum or Gulbarga.

There is a lot of delay in the disposal of writ petitions. Sometimes a clerk who has gone on a writ to the High Court retires before his writ application is taken up and heard by the High Court. Therefore, they must reorganise the whole set up and if necessary think in terms of appointing more Judges to dispose of these cases. Justice delayed can be construed as justice denied. Therefore, in that light our Law Minister should take proper and adequate action to appoint adequate number of Judges to dispose of the pending cases,

With these few words I welcome this measure.

3-00 P.M.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೆ, ನ್ಯಾಯಾಂಗ ಸಚಿವರು ತಂದಿರತಕ್ಕ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದರಿಂದ ಬಹಳ ಜನಕ್ಕೆ ಡೆಲ್ಲಿಗೆ ಹೋಗಿ ಕಾಲವಿಳಂಬ ಮಾಡುವುದು, ಹಣವನ್ನು ಖರ್ಚು ಮಾಡುವುದು ಮತ್ತು ಏನೇನು ತೊಂದರೆಯಾಗುತ್ತಿತ್ತು ಅದನ್ನು ತಪ್ಪಿಸ ತಕ್ಕಂಥ ಒಂದು ಮಾರ್ಗ ಇದು. ಇನ್ನೊಂದು ಮುಖ್ಯ ವಿಷಯ ಏನೆಂದರೆ, ಕೇಸುಗಳು, ರಿಟ್‌ಗಳು, ಡಿಸ್ಪೋಸಲ್ ಆಗುವುದಕ್ಕೆ ಒಂದು ಹೊಸ ವಿಧಾನವಾಗಿದೆ. ಆದ್ದರಿಂದ ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದರ ಜೊತೆಯಲ್ಲಿ ಇನ್ನೊಂದು ಸಲಹೆಯನ್ನು ನಾನು ಅವರಿಗೆ ಕೊಡಬಯಸುತ್ತೇನೆ. ಬಹುಶಃ ನೈಸೂರು ಹೈಕೋರ್ಟು ಬಿಲ್ಡಿಂಗ ಬಹಳ ಪುರಾತನವಾದದ್ದು. ಅದನ್ನು ನಾವು ನೋಡಿದರೆ, ಒಂದು ರೀತಿಯ ಡಂಜನ್ ಇದ್ದ ಹಾಗೆ ಇದೆ. ಜಡ್ಜಸ್ ಕೂತುಕೊಳ್ಳ ತಕ್ಕ ಕೊಠಡಿಗಳಾಗಲೀ, ಕಚೇರಿಗಳಾಗಲೀ, ವ್ಯವಸ್ಥಿತವಾಗಿಲ್ಲ. ಇದು ಬ್ರಿಟಿಶರ ಕಾಲದ್ದು ಮತ್ತು ಬಹಳ ಹಳೆಯ ಬಿಲ್ಡಿಂಗ. ಜಡ್ಜಸ್‌ಗಳಿಗೆ ಅಲ್ಲಿ ಸರಿಯಾದ ಸೌಲಭ್ಯ ಇಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಮಾಡುತ್ತೇನೆ. ಜಡ್ಜಸ್‌ಗಳಿಗೆ ಮಂತ್ರಿಗಳಿಗೂ ಹೆಚ್ಚಿನ ಸೌಲಭ್ಯವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅವರಿಗೆ ಸರ್ಕಾರದ್ದೇ ಮನೆ ಕೊಡಬೇಕು, ಸರ್ಕಾರದ್ದೇ ಕಾರು ಕೊಡಬೇಕು. ಮೊನ್ನೆ ನಿವೃತ್ತ ಸುಪ್ರೀಂ ಕೋರ್ಟ ನ್ಯಾಯಾಧೀಶರು ಆದ ಶ್ರೀಮಾನ ಹೆಗ್ಗಡೆಯವರು ನಮ್ಮ ಮನೆ ಮಂತ್ರಿಗಳ ಮನೆಗಿಂತ ತೀರಾ ಕಡಿಮೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಇವತ್ತು ಅವರ ಪರಿಸ್ಥಿತಿ, ಅವರು ಸಣ್ಣ ಮನೆಯಲ್ಲಿ ವಾಸ ಮಾಡ ತಕ್ಕ ಪರಿಸ್ಥಿತಿಯಾಗಿದೆ. ಆದ್ದರಿಂದ ಜಡ್ಜಸ್‌ಗಳಿಗೆ ಸರಿಯಾದಂಥ ಸೌಲಭ್ಯವನ್ನು ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅವರಿಗೆ ಸಂಪೂರ್ಣವಾಗಿ ಎಲ್ಲಾ ರೀತಿಯ ಸೌಲಭ್ಯವನ್ನು ಕೊಡಬೇಕು. ಮತ್ತು ಅವರಿಗೆ ಸರ್ಕಾರದ್ದೇ ಕಾರು ಕೊಡಬೇಕು, ಮನೆ ಕೊಡಬೇಕು ಮತ್ತು ಹೆಚ್ಚಿನ ಸಂಬಳವನ್ನು ಕೊಡಬೇಕು. ಈ ರೀತಿ ಕೊಡುವುದರಿಂದ ನನಗನ್ನಿಸುತ್ತದೆ, ಅವರು ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನವನ್ನು ಪಡೆದಿದ್ದಾರೆ. ಆ ಸ್ಥಾನಕ್ಕೆ ತಕ್ಕ ಗೌರವ ಮರ್ಯಾದೆ ಸಲ್ಲುತ್ತದೆ ಎನ್ನುವ ಮಾತನ್ನು ತಿಳಿಸುತ್ತೇನೆ. ಈಗಿರುವ ಹೈಕೋರ್ಟು, ಯಾವುದೋ ದ್ವಾಪರಯುಗದ್ದು ಅಲ್ಲಿ ಸರಿಯಾದ ಕುರ್ಚಿಗಳಿಲ್ಲ, ಬೆಂಚು ಇಲ್ಲ, ಫ್ಯಾನ್ ಇಲ್ಲ, ಸರಿಯಾದ ಟೇಬಲ್ ಇಲ್ಲ, ಈ ರೀತಿ ಅವ್ಯವಸ್ಥೆ ಇದೆ. ಇವೆಲ್ಲವನ್ನೂ ಸರಿಪಡಿಸುವುದಕ್ಕೆ ತಾವು ತಮ್ಮ ಗಮನವನ್ನು ಹರಿಸಬೇಕು. ಈ ಮಸೂದೆಯನ್ನು ಒಳ್ಳೆಯ ಮಾರ್ಗದಲ್ಲಿ ತಂದಿದ್ದೀರಿ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ಇಲ್ಲಿರುವ ರೀತಿ ಮಾಡಿದರೆ ಜನಗಳಿಗೆ, ಅದರಲ್ಲೂ ಹೋರಾಟಗಾರರಿಗೆ, ಚಳುವಳಿಗಾರರಿಗೆ, ರಾಜಕಾರಣಿಗಳಿಗೆ ಅನುಕೂಲವಾಗುತ್ತದೆ. ಇದನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತಾ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಭಂಗಿ (ಜಮಖಂಡಿ).— ಮಾನ್ಯ ಅಧ್ಯಕ್ಷರೆ, ಕಾನೂನು ಸಚಿವರು ತಂದಂಥ ಈ ಬಿಲ್ಲನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ಒಂದು ವಿಷಯದಲ್ಲಿ ನನಗೆ ಸಂದೇಹ ಏನೆಂದರೆ, ಸಿಂಗಲ್ ಜಡ್ಜ ನಿರ್ಣಯ ಮಾಡಿದಂಥ ವಿಷಯದ ಮೇಲೆ, ಒಂದು ಅಪೀಲು ಹೈಕೋರ್ಟ ಬೆಂಚಿನಲ್ಲಿ ನಡೆಯತಕ್ಕದ್ದು ಎಂದು ಈ ತಿದ್ದುಪಡಿಯ ವಿಧಾನದಲ್ಲಿ ಹೈಕೋರ್ಟಿಗೆ ಹೋಗುವ ಅಧಿಕಾರ ಇದೆಯೋ ಇಲ್ಲವೊ ಗೊತ್ತಿಲ್ಲ. ಬೆಂಚಿನ ನಿರ್ಣಯ ಕೊನೆಯ ನಿರ್ಣಯವೇ ಹೇಗೆ, ಈ ಬಗ್ಗೆ ಈ ಬಿಲ್ಲಿನಲ್ಲಿ ಯಾವ ರೀತಿಯಿಂದಲೂ ಸ್ಪಷ್ಟೀಕರಣ ಇಲ್ಲ. ಈ ವಿಷಯದಲ್ಲಿ ನಾನು ಸಲಹೆ ಮಾಡುವುದು ಏನು ಎಂದರೆ, ಹೈಕೋರ್ಟು ಬೆಂಚಿನವರು ಅಪೀಲು ನಿರ್ಣಯ ಮಾಡಿದರೂ ಕೂಡ ಸೆಕೆಂಡ ಅಪೀಲು ಸುಪ್ರೀಂ ಕೋರ್ಟಗೆ ಹೋಗತಕ್ಕ ಅಧಿಕಾರ ಇರತಕ್ಕದ್ದು. ಈ ಬಗ್ಗೆ ತಿದ್ದುಪಡಿಯಲ್ಲಿ ಮಾಡತಕ್ಕದ್ದು ಎಂದು. ಈ ಸಮಯದಲ್ಲಿ ನಾನು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಈಗ ಸಧ್ಯಕ್ಕೆ ಹೈಕೋರ್ಟಿನಲ್ಲಿ ಸೆಂಡಿಂಗ ಇದ್ದಂಥ ಚಾಲೂ ಎಲ್ಲಾ ಅರ್ಜಿಗಳನ್ನು ಆಯಾ ಕಾಲದಲ್ಲಿ ಇದ್ದಂಥ ಕೋರ್ಟಿಗೆ ಅನುಸಾರವಾಗಿ ಐದು ರೂಪಾಯಿ ಟಿಕೆಟ್ ಹಚ್ಚಿ ರಿಟ್ ಪಿಟಿಷನ್ಸ್ ಅನ್ನು ದಾಖಲು ಮಾಡಿದ್ದಾರೆ. ಇದರ ಬಗ್ಗೆ, ತಿದ್ದುಪಡಿ ಮಸೂದೆಯಿಂದ ತಿಳಿಯುವುದು ಏನೆಂದರೆ ಆಯಾ ಅರ್ಜಿಗಳಿಗೆ ಹೆಚ್ಚಿನ ಕೋರ್ಟ ಫೀ ಹಚ್ಚುವುದು ಅವಶ್ಯಕ ವಿಲ್ಲವೇ? ಆ ಕಾಲದಲ್ಲಿ ಕೋರ್ಟ ಫೀ ಟಿಕೇಟ ಮೇಲೆ ಸಿಂಗಲ ಜಡ್ಜ, ಜಡ್ಜ ಮಾಡತಕ್ಕದ್ದು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಈ ದೃಷ್ಟಿಯಿಂದ ಈ ಎರಡು ವಿಷಯದ ಬಗ್ಗೆ ಸ್ಪಷ್ಟವಾಗಿ ಖುಲಾಸೆ ಮಾಡಬೇಕೆಂದು ನಾನು ಲಾ ಮಿನಿಸ್ಟರಿಗೆ ಸಲಹೆ ಮಾಡುತ್ತೇನೆ. ಇಷ್ಟು ಹೇಳಿ, ಈ ಬಿಲ್ಲಿಗೆ ಸ್ವಾಗತ ಬಯಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಕೆ. ನಾಯ್ಕರ.— ಅಧ್ಯಕ್ಷರೇ, ನಾನು ಈಗ ಮಂಡಿಸಿದಂಥ ಹೈಕೋರ್ಟು ಅಮೆಂಡಮೆಂಟ ಬಿಲ್ಲನ್ನು ಅನೇಕ ಮಾನ್ಯ ಸದಸ್ಯರು ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು, ಪಾಟೀಲರು ಮತ್ತು ಇನ್ನುಳಿದ ಅನೇಕ ಮಾನ್ಯ ಸದಸ್ಯರು ಹೇಬಿಯಸ್ ಕಾರ್ಪಸ್ ರಿಟ್‌ಗಳನ್ನು ಹೊರತುಪಡಿಸಿ ಬಾಕಿ ರಿಟ್‌ಗಳಿಗೆಲ್ಲಾ ಅವಕಾಶ ಮಾಡಿದ್ದಾರೆ, ಹೇಬಿಯಸ್ ಕಾರ್ಪಸ್ ರಿಟ್‌ಗಳಿಗೂ ಅವಕಾಶ ಮಾಡಿ ಕೊಡಬೇಕಾದ್ದು ನ್ಯಾಯ, ಸರ್ಕಾರ ಈ ಬಗ್ಗೆ ಸರಿಯಾದ ಗಮನವನ್ನು ಕೊಡಬೇಕು ಎನ್ನುವುದನ್ನು ಹೇಳಿದ್ದಾರೆ. ಆದರೆ ಹೇಬಿಯಸ್ ಕಾರ್ಪಸ್ ಏನು ಇದೆ, ಇದು ಪರ್ಸನಲ್ ಲಿಬರ್ಟಿಗೆ ಸಂಬಂಧಪಟ್ಟಿದ್ದರಿಂದ ಮತ್ತು ಹ್ಯೂಮನ್ ಲಿಬರ್ಟಿಗೆ ಸಂಬಧಪಡುವುದರಿಂದ, ಸಿಂಗಲ್ ಜಡ್ಜ ಕಡೆಯಿಂದ ಇದು ನಿರ್ಣಯಕ್ಕೆ ಒಳಗಾಗ ಬಾರದು ಎನ್ನುವ ಉದ್ದೇಶದಿಂದ ಇದನ್ನು ಫುಲ್ ಬೆಂಚಿಗೆ ಬಿಟ್ಟುಕೊಟ್ಟಿದೆ. ಅದಕ್ಕೆ ಸಕಾರಣ ಹೇಳುವದಾದರೆ, ಈ ಪ್ರೊಸೀಜರ್ ಮದ್ರಾಸ, ಬೊಂಬಾಯಿ ಮತ್ತು ಇತರ ಕಡೆಗಳಲ್ಲಿಯೂ ಕೂಡ ಇದೆ. ಅಲ್ಲಿ ಸಿಂಗಲ್ ಜಡ್ಜಿಗೆ ಈ ಹೇಬಿಯಸ್ ಕಾರ್ಪಸ್

ರಿಟ್ ಪಿಟಿಷನ್ ನಿರ್ಣಯ ಮಾಡುವ ಅಧಿಕಾರ ಕೊಟ್ಟಿಲ್ಲ, ಪುಲ್ ಬೆಂಚಿಗೆ ಕೊಟ್ಟಿದೆ. ಹಿಂದೆ ಲಾ ಕಮೀಷನ್ ಕೂಡ ಈ ವಿಷಯವನ್ನು ಸಿಂಗಲ್ ಜಡ್ಜಿಗೆ ಕೊಡಬೇಕು ಎಂದು ಅಭಿಪ್ರಾಯ ಪಟ್ಟಿರಲಿಲ್ಲ. ಇದನ್ನು ಕೊಡದೆ ಇದ್ದಂಥ ಸ್ಟೇಟ್‌ಗಳಲ್ಲಿ ಸರಿಯಾದ ತೀರ್ಮಾನಗಳು ಆಗಿವೆ ಎಂದು ಕಂಡುಕೊಂಡು ಈ ಅಮೆಂಡಮೆಂಟನ್ನೂ ತಂದಿದ್ದೇನೆ. ಇನ್ನು ಅಮೆಂಡಮೆಂಟನ್ನು ಮಾಡಿ ಸೂಚಿಸಿದಂಥ ಮಾನ್ಯ ಸದಸ್ಯರಾದ ಶಾವಣ್ಣನವರು ಯಾವ ಸಿಂಗಲ್ ಜಡ್ಜ್ ಮುಂದೆ ನಿರ್ಣಯವಾಗಿರುತ್ತದೊ ಆ ಜಡ್ಜ್ ಪುನಃ ಅಪೀಲು ಬೆಂಚಿನಲ್ಲಿ ಇರಕೂಡದು ಎಂದು ಅಮೆಂಡಮೆಂಟ್‌ನಲ್ಲಿ ಸೂಚನೆ ಮಾಡಿದ್ದಾರೆ. ಆ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ಹೇಳುವುದು ಏನೆಂದರೆ ಯಾವ ಜಡ್ಜ್ ಒರಿಜನಲ್ ಜುರಿಸ್‌ಡಿಕ್ಷನ್ ಎಕ್ಸರಸೈಜ ಮಾಡುತ್ತಾರೆ. ಆ ರೀತಿ ಎಕ್ಸರಸೈಜ ಮಾಡಿದ ನಂತರ ಅವರು ಅಪಿಲೇಟ ಅಥಾರಿಟಿ ಆಗಲಾರರು. ಈ ಒಂದು ನಿಯಮವನ್ನು ಯಾವಾಗಲೂ ಕೂಡ ನೆರವೇರಿಸುತ್ತಾ ಬಂದಿದ್ದಾರೆ ಯಾವ ಜಡ್ಜ್ ಜಡ್ಜ್‌ಮೆಂಟ ಕೊಡುತ್ತಾರೋ ಆ ಜಡ್ಜ್‌ನ್ನು ಪುನಃ ಬೆಂಚಿನಲ್ಲಿ ಹಾಕುವ ಪರಿಪಾಠ ಇಲ್ಲ. ಇದು ಪ್ರಿನ್ಸಿಪಲ್ ಆಫ್ ಜಸ್ಟೀಸ್ ಪ್ರಕಾರ ಹಾಗೆ ಅವರನ್ನು ಹಾಕಲಿಕ್ಕೆ ಬರುವದಿಲ್ಲ. ಆದ್ದರಿಂದ ಈಗ ಸೂಚನೆ ಮಾಡಿರತಕ್ಕ ಅಮೆಂಡಮೆಂಟ ಅನಾವಶ್ಯಕ ಮತ್ತು ಮಾನ್ಯ ಸದಸ್ಯರು ಇದನ್ನು ಒತ್ತಾಯ ಮಾಡುವದಿಲ್ಲವೆಂದು ನಾನು ಆಶೆ ಮಾಡುತ್ತೇನೆ.

ಮಾನ್ಯ ಸ್ನೇಹಿತರು, ಹೈಕೋರ್ಟು ಬಿಲ್ಡಿಂಗ ಬಗ್ಗೆ, ಫರ್ನಿಚರ ಬಗ್ಗೆ ಮತ್ತು ಸವಲತ್ತುಗಳನ್ನು ಕೊಡುವ ಬಗ್ಗೆ ಕೆಲವೊಂದು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಸೌಲಭ್ಯಗಳು ಇರುವದು ಸೂಕ್ತ; ಅದನ್ನು ನಾನು ಒಪ್ಪುತ್ತೇನೆ. ಆದರೆ ರಾಜ್ಯಾಂಗದಲ್ಲಿ ಅವರಿಗೆ ಇರಬೇಕಾದ ಸೌಲಭ್ಯಗಳು ಏನು ಇವೆ, ಅವನ್ನು ಪ್ರತಿಯೊಬ್ಬರಿಗೂ ಕೊಡುತ್ತಾ ಇದ್ದೇವೆ. ಹೆಚ್ಚಿನ ಸೌಲಭ್ಯಗಳನ್ನು ಎಂದರೆ ಬಿಲ್ಡಿಂಗ ರೂಪದಲ್ಲಿ ಮತ್ತು ಇನ್ನು ಯಾವುದಾದರೂ ರೂಪದಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಹೈಕೋರ್ಟಿಗೆ ಕೊಡುತ್ತಾ ಬಂದಿದ್ದೇನೆ. ಆ ಬಗ್ಗೆ ಸರ್ಕಾರ ಯಾವಾಗಲೂ ವಿರೋಧ ಮಾಡಿಲ್ಲ. ಮತ್ತು ಆ ಬಗ್ಗೆ ಗಮನ ಕೊಡುತ್ತೇವೆ ಎಂದು ಇಷ್ಟು ಹೇಳುತ್ತೇನೆ.

ಶ್ರೀ ವಾಟಾಳ ನಾಗರಾಜ.—ಮಂತ್ರಿಗಳಿಗೆ ಇದ್ದಹಾಗೆ ಅವರಿಗೆ ಮನೆಗಳು ಇರಲಿ.

ಶ್ರೀ ಡಿ. ಕೆ. ನಾಯ್ಕರ.—ಅದು ಕಾನ್ಸಟಟ್ಯೂಟಶನ್‌ನಲ್ಲಿ ಇಲ್ಲ, ಇನ್ನು ಶ್ರೀಮಾನ್ ಆರ್ಮುಗಂ ಅವರು ಆರ್ಟಿಕಲ್ ೨೨೬, ೨೨೭, ೨೨೮ರ ಪ್ರಕಾರ ಯಾವ ರೀತಿಯಿಂದ ಅಪೀಲನ್ನು ಬೆಂಚಿಗೆ ಪ್ರೊವೈಡ ಮಾಡಿದ್ದಾರೆಯೋ ಅದೇ ಪ್ರಕಾರ ಹೇಬಿಯಸ್ ಕಾರ್ಪಸ್ ರಿಟ್ಟಿಗೂ ಕೂಡ ಸಿಂಗಲ್ ಜಡ್ಜ್ ಡಿಸೈಡ ಮಾಡಿದ ವಿಷಯದಲ್ಲಿ ಅಪೀಲು ಪ್ರೊವೈಡ ಮಾಡಬೇಕು ಎನ್ನುವ ಸಜೆಷನ್ ಕೊಟ್ಟಿದ್ದಾರೆ.

ಆದರೆ ೨೨೬, ೨೨೭, ೨೨೮, ಆರ್ಟಿಕಲ್ ಪ್ರಕಾರ ಒರಿಜನಲ್ ಜ್ಯೂರಿಸ್‌ಡಿಕ್ಷನ್ ಎಕ್ಸರ್‌ಸೈಜ್ ಮಾಡುವ ಅರ್ಜಿಗಳು ಬರುವುದಿಲ್ಲ ಅವು ಅಸಲು ಅರ್ಜಿಗಳು ಅಲ್ಲ. ಅವು ಯಾವುದೇ ರೂಪದಲ್ಲಿ ಬಂದರೂ, ಒರಿಜನಲ್ ಜ್ಯೂರಿಸ್‌ಡಿಕ್ಷನ್ ಬೇರೆ ಕೋರ್ಟ್‌ಗೆ ಸಂಬಂಧಪಡುತ್ತದೆ. ಇಲ್ಲಿಗೆ ಬರಬೇಕಾದರೆ, ರಿವಿಜನ್ ಪಿಟಿಷನ್ಸ್, ಸೆಕೆಂಡ್ ಅಪೀಲ್ಸ್ ಅಥವಾ ಮಿಸಲೇನಿಯಸ್ ಅಪ್ಲಿಕೇಶನ್ಸ್ ಇಲ್ಲಿ ಒರಿಜನಲ್ ಜ್ಯೂಡಿಸ್‌ಡಿಕ್ಷನ್ ಎಕ್ಸರ್‌ಸೈಜ್ ಮಾಡಿ ಆರ್ಡರ್ ಪಾಸುಮಾಡುವ ಕೇಸುಗಳು ಬರುವುದಿಲ್ಲ. ಯಾವ ಸಂದರ್ಭದಲ್ಲಿಯೂ ಒರಿಜನಲ್ ಜ್ಯೂರಿಸ್ ಡಿಕ್ಷನ್ ಎಕ್ಸರ್‌ಸೈಜ್ ಮಾಡುವುದು ಫೈನಲ್ ಆರ್ಡರ್ ಆಗಬಾರದು. ಆ ತತ್ವದ ಮೇಲೆ ಈ ಅಪೀಲನ್ನು ಕೊಟ್ಟಿದೆ. ಬಂಗಿಯವರು ಬೆಂಚಿನ ನಿರ್ಣಯ ಕೊನೆಯದು. ಸುಪ್ರೀಂ ಕೋರ್ಟ್‌ಗೆ ಹೋಗಲಿಕ್ಕೆ ಬರುವುದಿಲ್ಲ ಎನ್ನುವ ಶಂಖೆಯನ್ನು ಎತ್ತಿ ತೋರಿಸಿದ್ದಾರೆ. ಅದು ಹಾಗಲ್ಲ ಪುನಃ ಹೈಕೋರ್ಟ್ ಜಡ್ಜ್‌ಮೆಂಟ್ ಮೇಲೆ ಸುಪ್ರೀಂ ಕೋರ್ಟ್‌ಗೆ ಹೋಗಬೇಕಾದರೆ ಅದಕ್ಕೆ ಅವಕಾಶ ಸಂವಿಧಾನದ ೧೩೪ನೇ ಆರ್ಟಿಕಲ್ ಪ್ರಕಾರ ಇದೆ. ಆದುದರಿಂದ ಯಾವುದೇ ಭಯವನ್ನು ಮಾನ್ಯ ಸದಸ್ಯರು ಹೊಂದಬಾರದೆಂದು ವಿಜ್ಞಾಪಸೆ ಮಾಡಿ ಈ ಬಿಲ್ಲಿನ ಮೇಲೆ ಮಾನ್ಯ ಸದಸ್ಯರು ಹಲವಾರು ಸೂಚನೆಗಳನ್ನು ಕೊಟ್ಟು ಸ್ವಾಗತ ಮಾಡಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ವತಿಯಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಬಿಲ್ಲಿಗೆ ಅವರ ಸಮ್ಮತಿ ಸೂಚಿಸಿ ಇದನ್ನು ಪಾಸ್ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

MADAM SPEAKER.— I will now put the consideration motion to the vote of the House. The question is :

"That the Mysore High Court (Amendment) Bill, 1973 be taken into consideration."

The motion was adopted

Clause 2

MADAM SPEAKER.—I will put the clause to the vote of the House. The question is :

"That clause 2 do stand part of the Bill."

The motion was adopted

Clause 2 was added to the Bill

Clause 3

MADAM SPEAKER.—There is an amendment tabled by hon. Member Sri T. R. Shamanna.

Sri T. R. SHAMANNA.— In view of the assurance given by the Hon. Minister I do not propose to move my amendment.

MADAM SPEAKER.—Then I will put clause 3 to the vote of the House. The question is :

"That clause 3 do stand part of the Bill."

The motion was adopted

Clause 3 was added to the Bill.

Clause 4, 5

MADAM SPEAKER.—The question is :

"That clauses 4 and 5 do stand part of the Bill."

The motion was adopted

"Clauses 4 and 5 do stand part of the Bill."

MADAM SPEAKER.—The clause 1 etc., question is :

"That clause 1, the long Title the Preamble and the Enacting Formula do stand part of the Bill."

The motion was adopted

Clause 1, the long Title the Preamble and the Enacting Formula were added to the Bill.

Motion to pass

Sri D. K. NAIKAR.—I move :

"That the Mysore High Court (Amendment) Bill, 1973 be passed."

MADAM SPEAKER.—The question is :

"That the Mysore High Court (Amendment) Bill, 1973 be passed."

The motion was adopted
and the Bill was passed

Mysore Inams Abolition Laws (Amendment) Bill 1973 — Motion to consider

MADAM SPEAKER.—Now the Hon. Minister for Revenue to move the Mysore Inams Abolition Laws (Amendment) Bill, 1973.

Sri N. HUTCHMASTHY GOWDA (Minister for Revenue). — Madam Speaker, I beg to move :

"That the Mysore Inams Abolition Laws (Amendment) Bill, 1973 be taken into consideration."

MADAM SPEAKER.—Motion moved.

"That the Mysore Inams Abolition Laws (Amendment) Bill, 1973 be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ತಿದ್ದುಪಡಿ ಮಸೂದಾ ಕಾನೂನಿನ ಉದ್ದೇಶ ಬಹಳ ಸೀಮಿತವಾಗಿದೆ ಎಂದು ನಾನು ಭಾವಿಸುತ್ತೇನೆ. ೧೯೭೧ನೇ ಇಸ್ವಿ ಡಿಸೆಂಬರ್ ನಲ್ಲಿ ಮೂಲ ಕಾಯ್ದೆಗೆ ತಂದಂಥ ತಿದ್ದುಪಡಿಯ ಇನಾಂ ಗ್ರಾಮಗಳೇ ಇರಲಿ ಅಥವಾ ಸರ್ಕಾರಿ ಗ್ರಾಮಗಳೆ ಇರಲಿ ಅಲ್ಲಿ ಇದ್ದಂಥಾ ಎಲ್ಲಾ ಮೈನರ್ ಇನಾಂಗಳೂ ಕೂಡ ಹೋಗಿಬಿಟ್ಟದೆ ಆದಾದ ಮೇಲೆ ಈ ತಿದ್ದುಪಡಿ ಕಾನೂನಿನಲ್ಲಿ ಏನು ವಿಶೇಷ ಇದೆ ಎಂದರೆ ಅವರು ಆಕ್ಯುಪೆಂಟ್ಸ್ ಆಗಿ ರಿಜಿಸ್ಟರ್ ಆಗಬೇಕೆಂದು ಅವರೆಲ್ಲರೂ ಡಿಪ್ಯುಟಿ ಕಮಿಷನರ್‌ಗಳಿಗೆ ಒಂದು ನಿರ್ದಿಷ್ಟವಾದ ಕಾಲದಲ್ಲಿ ಅರ್ಜಿ ಹಾಕಿಕೊಂಡು ಅವರು ಆಕ್ಯುಪೆಂಟ್ಸ್ ಆಗಬೇಕಾಗಿತ್ತು ಅಲ್ಲಿ ಎರಡು ಸಂದರ್ಭಗಳಿವೆ. ಒಂದನೆಯದು ಅವು ಇನಾಂ ಗ್ರಾಮಗಳು ಆಗಿದ್ದ ಸಂದರ್ಭದಲ್ಲಿ ತಿದ್ದುಪಡಿ ಮಸೂದಾ ಕಾನೂನು ೧೯೭೪ನೇ ಇಸ್ವಿಯಲ್ಲಿ ಜಾರಿಗೆ ಬರುವುದಕ್ಕೆ ಮುಂಚೆ ವೆಸ್ಟ್ ಆಗಿದ್ದರೆ ನಿರ್ದಿಷ್ಟವಾದ ತಾರೀಖನ್ನು ರೂಲ್‌ನಲ್ಲಿ ಪ್ರಿಸೈಕ್ರಿಬ್ ಮಾಡಬೇಕೆಂದು ಇದೆ. ಆ ತಾರೀಖು ೧೯೭೧ನೇ ಇಸ್ವಿ ಫೆಬ್ರವರಿ ೨೧ಕ್ಕೆ ನಿಗದಿ ಆಗಿತ್ತು. ಅಷ್ಟರೊಳಗೆ ಎಲ್ಲರೂ ಆಕ್ಯುಪೆಂಟ್ಸ್ ಆಗಬೇಕೆನ್ನತಕ್ಕವರೆಲ್ಲರೂ ಅರ್ಜಿ ಹಾಕಿಕೊಳ್ಳಲಿಲ್ಲ. ಅವರು ಅರ್ಜಿ ಹಾಕದಿದ್ದರೆ ಏನು ಆಗುತ್ತದೆ ಎಂದರೆ ಪೂರಾ ಜಮೀನು ಸರ್ಕಾರಕ್ಕೆ ಸೇರಬೇಕಾಗುತ್ತದೆ. ಅವರು ಆಗ ಅರ್ಜಿ ಹಾಕಿಕೊಳ್ಳದಿದ್ದರೆ ಈ ತಾರೀಖನ್ನು ಮುಂದೆ ಹಾಕುವ ಪ್ರಸಂಗ ಬಂದಿದೆ. ಮೈನರ್ ಇನಾಂಗಳು ಎಲ್ಲೆಲ್ಲಿ ಇವೆ. ಆ ಮೈನರ್ ಇನಾಂಗಳು ಕೂಡ ತಿದ್ದುಪಡಿ ಮಸೂದಾ ಕಾನೂನು ಆದಮೇಲೆ ಯಾವ ಕಾಲದಲ್ಲಿ ವೆಸ್ಟ್ ಆಗುತ್ತದೆಂದು ಡೇಟ್ ಗೊತ್ತುಮಾಡಿದ್ದಾರೆ. ೧೯೭೦ನೇ ಇಸ್ವಿ ಜುಲೈ ೧೫ನೇ ತಾರೀಖು ಗೊತ್ತು ಮಾಡಿದಾಗ ವೆಸ್ಟ್ ಆದ ತಾರೀಖು ಒಂದು ವರ್ಷದೊಳಗೆ ಎಂದು ಕಾನೂನಿನಲ್ಲಿ ಇದೆ. ಎರಡರಲ್ಲೂ ವಿಚಿತ್ರ ಪ್ರಸಂಗ ಉಂಟಾಗಿದೆ. ಒಂದನೆ ಯದು ತಿದ್ದುಪಡಿ ಮಸೂದಾ ಕಾನೂನಿನ ಪ್ರಕಾರ ಇನಾಂ ಆಗಿದ್ದಂಥ ಕಾಲದಲ್ಲಿ ಹಾಕಿ

ದಂಥ ವಾಯಿದೆ ಸಾಲದೆ ಅವರು ಹೆಚ್ಚು ದಿವಸ ಬೇಕೆಂದು ಕೇಳುತ್ತಿದ್ದಾರೆ. ಆದ ಕ್ಕಾಗಿ ರೂಲ್ಸ್‌ನಲ್ಲಿಲ್ಲ ಕಾಲವನ್ನು ಹೆಚ್ಚು ಮಾಡುವುದಕ್ಕೆ ಬದಲಾಗಿ ಕಾನೂನಿನಲ್ಲಿ ತರುವುದು ಒಳ್ಳೆಯದೆಂದು ತಿದ್ದುಪಡಿ ಮಸೂದಾ ಕಾನೂನು ಜಾರಿಗೆ ಬಂದು ಒಂದು ವರ್ಷದ ಕಾಲ ಕೊಡತ್ಕದೆಂದು ತಿದ್ದುಪಡಿ ತಂದಿದೆ. ಅದರ ಜೊತೆಗೆ ಮೈನರ್ ಇನಾಂಗಳಿಗೆ ಗೊತ್ತಾದಂಥ ಕಾಲ ಅದನ್ನು ಕೂಡ ಬದಲಾವಣೆ ಮಾಡಿ ತಿದ್ದುಪಡಿ ಮಸೂದಾ ಕಾನೂನು ಆದ ಒಂದು ವರ್ಷದೊಳಗೆ ಅರ್ಜಿ ಹಾಕಿಕೊಂಡು ಅವರು ಕ್ಲೇಮ್ಸ್ ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಇದರಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಇದು ಎರಡನೆಯದು. ಇನ್ನೊಂದು ರಿಲಿಜಯಸ್ ಮತ್ತು ಚಾರಿಟಬಲ್ ಇನಾಂಗಳ ಅಬಾಲಿಷನ್ ಆಕ್ಟ್‌ನಲ್ಲಿ ಅಲ್ಲಿ ಏನು ಆಗಿದೆಂದರೆ, ಕದೀಮ ಟಿನೆಂಟ್ಸ್ ಮತ್ತು ಪರ್ಮನೆಂಟ್ ಟಿನೆಂಟ್ಸ್ ದೇವಸ್ಥಾನ ವಗೈರೆ ಧಾರ್ಮಿಕ ಸಂಸ್ಥೆಗಳಲ್ಲಿ ಪೂಜಾರಿಗಳ ಸ್ವತಃ ಜಮೀನು ಮಾಡುತ್ತಾ ಇದ್ದಾರೆ. ಅವರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅವರನ್ನು ಕೈ ಬಿಟ್ಟಿದ್ದಾರೆ. ಅವರು ಸ್ವತಃ ಜಮೀನು ಮಾಡುತ್ತಾ ಇರುವುದರಿಂದ ಅವರು ಗೇಣಿ ಕೊಡದೇ ಇದ್ದರೂ ಸಹ ಅವರನ್ನು ಕೂಡ ಆಕ್ಯುಪೆಂಟ್ಸ್ ಆಗಿ ರಿಜಸ್ಟರ್ ಮಾಡಬೇಕೆಂದು ಉದ್ದೇಶ ಸರ್ಕಾರಕ್ಕೆ ಇರುವುದರಿಂದ ಅವರನ್ನು ಜಮೀನು ಆಕ್ಯುಪೆಂಟ್ ಮಾಡಬೇಕೆಂಬ ಉದ್ದೇಶದಿಂದ ಅದನ್ನು ಈ ಮಸೂದಾ ಕಾನೂನಿನಲ್ಲಿ ಸೇರಿಸಿದೆ ಮತ್ತು ಅವರು ಆಕ್ಯುಪೆಂಟ್ ಆಗಬೇಕಾದರೆ ಭೂ ಕಂದಾಯ ೧೦೦ ರಷ್ಟು ಕೊಡ ಬೇಕು ಎಂದು ತಿದ್ದುಪಡಿಯಲ್ಲಿ ತಂದಿದೆ. ಅವರನ್ನು ಆಕ್ಯುಪೆಂಟ್ಸ್ ಮಾಡಬೇಕಾದರೆ ಒಂದು ವರ್ಷದೊಳಗೆ ಅವರೂ ಕೂಡ ಅರ್ಜಿ ಹಾಕಿಕೊಳ್ಳಬೇಕು ಅವರು ಅರ್ಜಿ ಹಾಕಿಕೊಂಡ ಮೇಲೆ ಅವರು ಆಕ್ಯುಪೆನ್ಸಿ ಪ್ರೈಜ್ ಕೊಟ್ಟ ಮೇಲೆ ಅವರನ್ನೂ ಆಕ್ಯುಪೆಂಟ್ಸ್ ಎಂದು ಹೇಳಿ ಗೊತ್ತುಮಾಡಬೇಕೆಂದು ಇನ್ನೊಂದು ತಿದ್ದುಪಡಿ ಇದೆ.

[MR. DEPUTY SPEAKER in the Chair].–

ಇನ್ನೊಂದು, ದೇವಸ್ಥಾನಗಳ ಇನಾಂ ಜಮೀನುಗಳನ್ನು ಟಿನೆಂಟಾಗಿ ಯಾರು ಅನುಭವಿಸುತ್ತಿದ್ದಾನೆ, ಅವನಿಗೆ ಜಮೀನು ಕೊಡುವಾಗ ಅವರ ಜಮೀನು ಮತ್ತು ಇನಾಂ ಜಮೀನು ಎರಡೂ ಸೇರಿ ಎಷ್ಟು ಇರಬೇಕು ಎಂದು ನಿರ್ಧಾರ ಮಾಡಬೇಕು ಎಂದು ಈ ತಿದ್ದುಪಡಿಯನ್ನು ತಂದಿದ್ದೇನೆ. ಆಕ್ಯುಪೆಂಟ ಯಾರೆಂದು ಗೊತ್ತು ಮಾಡಬೇಕು ಎಂಬುದು ಇನ್ನೊಂದು ತಿದ್ದುಪಡಿ. ಇಷ್ಟು ತಿದ್ದುಪಡಿಗಳಿವೆ. ಈ ತಿದ್ದುಪಡಿಗಳಿಗೆ ಮಾನ್ಯ ಸಭೆ ಒಪ್ಪಿಗೆ ಕೊಟ್ಟು ಕಾನೂನಿನಲ್ಲಿ ಇರತಕ್ಕ ದೋಷಗಳನ್ನು ಬಗೆಹರೆಸುವುದಕ್ಕೆ ಸಹಾಯಮಾಡಬೇಕು ಎಂದು, ಈ ಸಭೆಯ ಮುಂದೆ ಇಷ್ಟು ತಿದ್ದುಪಡಿಗಳನ್ನು ಮಂಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ

ಇನಾಂಗಳನ್ನು ರದ್ದುಮಾಡಿ, ಆ ಜಮೀನನ್ನು ಗೇಣಿದಾರರಿಗೆ ಮಾಲೀಕತ್ವ ಕೊಡ ತಕ್ಕ ಕೆಲಸ ೧೯೫೪ರಿಂದ ಪ್ರಾರಂಭವಾಗಿ, ಇದನ್ನು ಮುಕ್ತಾಯ ಮಾಡತಕ್ಕ ಕೆಲಸ ದಲ್ಲಿ ನಾವು ೧೯೭೩ನೇ ಇಸವಿಯಲ್ಲಿದ್ದೇವೆ. ಬಹುಶಃ ಈ ಕೆಲಸ ಬಹಳ ಹಿಂದೆಯೇ; ಆಗಬೇಕಾಗಿತ್ತು. ಹಿಂದಿನ ಸರ್ಕಾರಗಳ ಮನೋದೃಷ್ಟಿ ಮತ್ತು ಅವರಿಗೆ ಇದ್ದಂಥ ಆಸಕ್ತಿಹೀನತೆ ಏನಿತ್ತು, ಅದರಿಂದ ಈ ಕಾನೂನಿನ ಪೂರ್ಣ ಪ್ರಯೋಜನ, ಇನಾಂ ಜಮೀನಿನ ಗೇಣಿದಾರರಿಗೆ ಸಲ್ಲತಕ್ಕ ಕೆಲಸವನ್ನು ಮಾಡಲಿಲ್ಲ. ಅಷ್ಟೇ ಅಲ್ಲ, ನಮ್ಮ ಕಂದಾಯ ಮಂತ್ರಿಗಳು ಏನು ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಇದೇ ತಿದ್ದು ಪಡಿಯನ್ನು ಹಿಂದೆ ತಂದಿದ್ದರೆ ಬಹುಶಃ ಈ ರಾಜ್ಯದ ಇನಾಂ ಜಮೀನಿನ ಗೇಣೀ ದಾರರು ಕಳೆದ ೧೦ ವರ್ಷದಲ್ಲೇ ಭೂಮಾಲೀಕರಾಗಿ ಇವರು ದೇಶದಲ್ಲಿ ಮನುಷ್ಯ ರಾಗಿ ಬದುಕುತ್ತಿದ್ದರು. ಇವರ ಶಾಪದ ಫಲದಿಂದಾಗಿ ಹಿಂದಿನ ಸರ್ಕಾರಗಳು ಉರುಳಿ ಹೋದುವು. ಆದುದರಿಂದ ಯಾರಾದರೂ ತಾವು ಇದ್ದಂಥ ಕಾಲದಲ್ಲಿ ಮಾಡತಕ್ಕ ಕೆಲಸವನ್ನು ಮನಃಪೂರ್ವಕವಾಗಿ, ಪ್ರಾಮಾಣಿಕವಾಗಿ ಮಾಡಬೇಕು. ಆ ರೀತಿ ಮಾಡಿದರೆ ಅಧಿಕಾರದಿಂದ ಹೋದ ಮೇಲೂ ಅವರು ಶಾಶ್ವತವಾಗಿ ಜಗತ್ತಿ ನಲ್ಲಿ ಸಮಾಜದ ವ್ಯಕ್ತಿಗಳಾಗಿ ಬದುಕುತ್ತಾರೆ. ಇಲ್ಲದೇ ಹೋದರೆ ಆರೆಬರೆ ಮನಸ್ಸಿ ನಿಂದ ಮಾಡುವುದರಿಂದ ಯಾವ ಕೆಲಸವೂ ಪೂರ್ಣವಾಗುವುದಿಲ್ಲ. ಹಳೇ ಮೈಸೂರು ರಾಜ್ಯದಲ್ಲಿ ಇನಾಮಿಗೆ ಸಂಬಂಧಪಟ್ಟ ಎರಡು ಕಾನೂನುಗಳಿವೆ. ಒಂದು ರಿಲಿ ಜಿಯಸ್ ಅಂಡ್ ಚಾರಿಟಬಲ್ ಇನಾಂ ಆಕ್ಟ, ಇನ್ನೊಂದು ಪರ್ಸನಲ್ ಅಂಡ್ ಮಿಸಲೇನಿಯಸ್ ಇನಾಂ ಅಬಾಲಿಷನ್ ಆಕ್ಟ. ಈ ಕಾನೂನನ್ನು ಹಿಂದೆ ೧೯೫೪-೫೬ ರಲ್ಲಿ ಮತ್ತು ೧೯೫೫–೫೬ರಲ್ಲಿ ತಂದಿದ್ದರು. ಪರ್ಸನಲ್ ಜಮಿಸಲೇನಿಯಸ್ ಅಬಾ ಲಿಷನ್ ಆಕ್ಟನ್ನು ೧೯೫೪ನೇ ಇಸವಿಯಲ್ಲಿ ಪಾಸಮಾಡಿ, ಅದನ್ನು ಜಾರಿಗೆ ಕೊಟ್ಟಿದ್ದು ೧೯೫೯ನೇ ಇಸವಿಯಲ್ಲಿ. ೧೯೫೯ನೇ ಇಸವಿಯಲ್ಲಿ ಹಾಕಿರತಕ್ಕ ಅರ್ಜಿಗಳು ಇನ್ನೂ ಕೂಡ ನಡೆಯುತ್ತಿವೆ; ಇತ್ಯರ್ಥ ಆಗಿಲ್ಲ. ಅಷ್ಟೇ ಅಲ್ಲ, ಈ ಕಾನೂನಿನ ವ್ಯಾಪ್ತಿಯಲ್ಲಿ ಸಿಗಬೇಕಾದಂಥ ಪೂರ್ಣ ಪ್ರಯೋಜನವನ್ನು ಕೊಡಲಿಲ್ಲ. ಹೀಗಾಗಿ ಈ ಭೂ ಸುಧಾರಣಾ ಮಸೂದೆಯನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಗೇಣೀ ಪದ್ಧತಿ ಯನ್ನು ಈ ವರ್ಷದಲ್ಲಿ ಅಂದರೆ, ೧೯೭೩ನೇ ವರ್ಷದಲ್ಲಿ ಮುಕ್ತಾಯ ಮಾಡಬೇಕು; ಅದರ ಚರಮ ಗೀತೆಯನ್ನು ಹಾಡಬೇಕು. ಇವತ್ತು ಸರ್ಕಾರದವರು ಅದರ ಹಿನ್ನೆಲೆ ಯಲ್ಲಿ ಈ ಕಾನೂನಿಗೆ ಒಂದು ತಿದ್ದುಪಡಿ ತಂದಿರುವುದಕ್ಕೆ ನಿಜವಾಗಿ ಈ ರಾಜ್ಯದ ಇನಾಂ ಜಮೀನಿನ ಗೇಣಿದಾರರ ಪರವಾಗಿ ಹೃತ್ಪೂರ್ವಕವಾಗಿ ಸರ್ಕಾರವನ್ನು ವಂದಿಸುತ್ತೇನೆ. ಏತಕ್ಕೆಂದರೆ, ಇದರಲ್ಲಿ ಹಿಂದೆ ಅನೇಕ ಲೋಪದೋಷಗಳಿದ್ದುವು. ತಂದಂಥ ಕಾನೂನನ್ನು ಸಕಾಲದಲ್ಲಿ ಕಾರ್ಯಗತ ಮಾಡದೇ ಇರುವುದರಿಂದ ಜನರಿಗೆ ಸಿಗಬೇಕಾದ ಸೌಲಭ್ಯ ಸಿಗದೇ ಹೋಯಿತು. ಕಾನೂನಿನ ಪ್ರಯೋಜನ ಪಡೆಯೋಣ ಎಂದು ಜನರು ಮುಂದೆ ಬಂದಾಗ ಅವರನ್ನು ಬರೀ ಕೋರ್ಟಿನ ವ್ಯಾಪ್ತಿಯಲ್ಲಿ ಸಿಕ್ಕಿಸಿ, ನರಳಿಸಿ, ಜೀವಮಾನವೆಲ್ಲ ಓಡಾಟ ಮಾಡುವುದು ತಪ್ಪಲಿಲ್ಲ, ಹಣ ಉಳಿಯಲಿಲ್ಲ ಎನ್ನುವ ಪರಿಸ್ಥಿತಿ ಇವತ್ತು ಆಗಿದೆ.

ಮಾನ್ಯ ಅಧ್ಯಕ್ಷರೇ, ನಾನು ತಮಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಮುಂಬಯಿ, ಹೈದರಾಬಾದ ಪ್ರದೇಶಗಳಿಗೆ ಸಂಬಂಧಪಟ್ಟ ರಿಲಿಜಿಯಸ್ ಚಾರಿಟಬಲ್ ಇನಾಂ ಅಬಾಲಿಷನ್ ಆಕ್ಟ ಆಗಲೀ ಈ ಸದನಕ್ಕೆ ಬಂದು ಒಪ್ಪಿಗೆ ಕೊಟ್ಟಿದ್ದೇವೆ. ಅದು ಕಾನೂನಾಗಿ ಬರತಕ್ಕ ಸನ್ನಿವೇಶ ಇದೆ. ಅದರಲ್ಲಿ ಒಂದು ಮೂಲಭೂತವಾದಂಥ ತತ್ವವನ್ನು ಈ ಸಭೆಯಲ್ಲಿ ತೀರ್ಮಾನ ಮಾಡಿದ್ದಾರೆ. ಏನಂದರೆ, ಇನಾಮಿಗೆ ಸಂಬಂಧಪಟ್ಟ ಯಾರೇ ಗೇಣೀದಾರರು ಇರಲಿ ಅವರಿಗೆ ಖಾತೆ ಆಗಬೇಕು, ಅವರು ಗೇಣೀದಾರರು ಆಗಬೇಕು ಎಂದು, ಮೂಲಭೂತವಾಗಿ ಇದನ್ನು ಒಪ್ಪಿಕೊಂಡು ಅಲ್ಲಿರತಕ್ಕ ಎಲ್ಲ ಗೇಣೀಕಾರರಿಗೆ ಖಾತೆ ಆಗುವ ರೀತಿಯಲ್ಲಿ ಮಾಡಿದ್ದಾರೆ. ಕದೀಮ ರೈತ, ಪರ್ಮನೆಂಟ ಟೆನೆಂಟ, ಪ್ರೊಟಿಕ್ಟೆಡ್ ಟೆನೆಂಟ್ಸ ಎಂದು ಮೂರು ವರ್ಗ ಮಾಡಿ, ಆರ್ಚಕರು ಕೂಡ ಸ್ವತಃ ದೇವಸ್ಥಾನಗಳಿಗೆ ಸೇವೆ ಸಲ್ಲಿಸಿರತಕ್ಕಂಥ ಸಂದರ್ಭದಲ್ಲಿ ಆ ಸೇವೆಗೆ ಬದಲಾಗಿ ಜಮೀನನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಅಂತಹ ಪೂಜಾರಿ ಮತ್ತು ಅರ್ಚಕರಿಗೆ ಜಮೀನಿನ ಮಾಲೀಕತ್ವ ಕೊಡಬೇಕು ಕಂದಾಯದ ೧೦೦ ಪಟ್ಟು ಮೊಬಲಗನ್ನು ಕೊಟ್ಟರೆ, ಎಲ್ಲ ಅರ್ಚಕರಿಗೆ, ಭೂಮಾಲೀಕತ್ವ ಕೊಡತಕ್ಕ ಮೂಲ ತತ್ವವನ್ನು ಈ ಸದನದಲ್ಲಿ ನಾವು ತೀರ್ಮಾನ ಮಾಡಿದ್ದೇವೆ. ಆ ತೀರ್ಮಾನದ ತಳಹದಿಯ ಮೇಲೆ ಅದಕ್ಕನುಗುಣವಾಗಿ ನಮ್ಮ ಹಳೆಯ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ೨ ಇನಾಂ ಕಾನೂನುಗಳು ಏನಿವೆ, ಅವಕ್ಕೂ ಕೂಡ ತಿದ್ದುಪಡಿ ತಂದು, ತನ್ಮೂಲಕ ಎಲ್ಲಾವರ್ಗದ ಗೇಣೀದಾರರಿಗೆ ಕೂಡ ಖಾತೆಯನ್ನು ಕೊಡಬೇಕು, ಜೊತೆಗೆ ಮೈನರ ಇನಾಮಿಗೆ ಸಂಬಂಧಪಟ್ಟ, ದೇವಸ್ಥಾನಕ್ಕೆ ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಪೂಜಾರಿ ಮತ್ತು ಅರ್ಚಕರು ಇದ್ದರೆ ಅವರಿಗೂ ಕೂಡ ಮಾಲೀಕತ್ವ ಕೊಡಬೇಕು ಎನ್ನುವ ಉದ್ದೇಶದಿಂದ ಇವತ್ತು ಅಂತಹ ತಿದ್ದುಪಡಿಯನ್ನು ತರುವುದಕ್ಕೆ ಸರ್ಕಾರ ಮುಂದಾಗಿದೆ ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ, ಮೈಸೂರು ಪರ್ಸನಲ್ ಅಂಡ್ ಮಿಸಲೇನಿಯಸ್ ಇನಾಂ ಅಬಾಲಿಷನ್ ಆಕ್ಟಿನಲ್ಲಿ ಕದೀಮ ರೈತ; ಪರ್ಮನೆಂಟ ರೈತ ಮೂರನೆಯದು ಕ್ವಾಸಿ ಪರ್ಮನೆಂಟ ನಾಲ್ಕನೆಯದು ಅವರ ಜೊರತಾಗಿ ಇರುವ "other tenants" ಈ ಪ್ರಕಾರ ೪ ವರ್ಗವಾಗಿ ವಿಂಗಡಿಸಿದ್ದಾರೆ. ಹೆಚ್ಚು ಕಡಿಮೆ ಕದೀಮ ರೈತ, ಮತ್ತು ಪರ್ಮನೆಂಟ ಟೆನೆಂಟ್ಸ್‌ನ್ನು ರುಜುವಾತು ಮಾಡುವುದು ಕಷ್ಟ; ನಮ್ಮ ರಾಜ್ಯದಲ್ಲಿ ಅವರು ನೂರಾರು ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ಕೊಟ್ಟರ ತಕ್ಕ ವಾಕ್ಯವನ್ನು ಮತ್ತು ಅರ್ಥವನ್ನು ನೋಡಿಕೊಂಡರೆ, ಅದಕ್ಕೆ ಬೇಕಾದಂಥ ದಾಖಲೆಗಳನ್ನು ಕೋರ್ಟಿನಲ್ಲಿ ಒದಗಿಸಿ ಅದನ್ನು ಸಾಬೀತು ಮಾಡಿ, ಈ ವರ್ಗಗಳು ಸಲಭ್ಯ ಪಡೆಯುವುದು ಕಷ್ಟವಿದೆ. ಕದೀಮ ರೈತ ಮತ್ತು ಪರ್ಮನೆಂಟ ರೈತ ಸಾಮಾನ್ಯವಾಗಿ ಖಾತೆ ಪಡೆಯುವುದಕ್ಕಾಗುವುದಿಲ್ಲ. ರೈತನ ಹತ್ತಿರ ಸಂಬಂಧಪಟ್ಟ

ಯಾವುದೇ ದಾಖಲೆಗಳು ಇರುವುದಿಲ್ಲ. ಮೂಲ ಗೇಣೀ ರಿಜಿಸ್ಟರ್ಡ್ ಕರಾರು ಇದ್ದರೆ, ಸಾಧ್ಯ. ಅದು ಹೊರತಾಗಿ ಕ್ವಾಸಿ ಪರ್ಮನೆಂಟ ಟೆನೆಂಟ ಇದ್ದಾರೆ. ಅವರು ಯಾರೆಂದರೆ, ೧೯೪೯ನೇ ಇಸವಿಯ ಹಿಂದೆ ೬ ವರ್ಷ ಕಂಟಿನ್ಯುಯಸಾಗಿ, ಅಂದರೆ ೧೯೪೯ನೇ ಇಸವಿಯಿಂದ ಕಾನೂನು ಜಾರಿಗೆ ತಂದ ಲಾಗಾಯಿತು ವರೆಗೆ ಅವ್ಯಾಹತವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದರೆ ಅವರೇ ಕ್ವಾಸಿ ಪರ್ಮನೆಂಟ ಟೆನೆಂಟ. ನಮ್ಮ ತಾಲೂಕಿನಲ್ಲಿ ಅವರು ಅಗಾಧವಾಗಿ ಇದ್ದಾರೆ.

Sri T. R. SHAMANNA.—I would like to know from the hon. member the difference between a khadeem tenant and a permanent tenant.

ಶ್ರೀ ಕಾಗೋಡು ತಿಮ್ಮಪ್ಪ.—ಕದೀಮು ಟೆನೆಂಟ್ ಮತ್ತು ಪರ್ಮನೆಂಟ ಟೆನೆಂಟ ಎನ್ನುವ ವಾಕ್ಯವನ್ನು ಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ನನಗೇ ಆಗಿಲ್ಲ. ಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಆಗದೇ ಇರುವುದರಿಂದ, ಅದರಿಂದ ಪರಿಹಾರ ಪಡೆಯುವುದಕ್ಕಾಗಿಲ್ಲ. ಹೆಚ್ಚಾಗಿ ಪರ್ಮನೆಂಟ ಟೆನೆಂಟ್ಸು, ಮೂಲ ಗೇಣೀದಾರರು ಬರುತ್ತಾರೆ. ಕದೀಮು ಟೆನೆಂಟ್ಸು ಮಾಲೀಕನು ಇದ್ದಹಾಗೆ, ಎಂದರೆ, 'ಇನಾಂದಾರರಿಗೆ ಕಂದಾಯ ರೂಪದಲ್ಲಿ ಕೊಡುತ್ತಾರೆ, ಗೇಣೀ ಕೊಡುವುದಿಲ್ಲ.

3-30 P. M.

ಕ್ವಾಸಿ ಪರ್ಮನೆಂಟ್ ರೈತನಿಗೆ ಯಾವ ದಾಖಲೆ ವಗೈರೆಗಳು ಇರುವುದಿಲ್ಲ. ೧೦೦ಕ್ಕೆ ೯೦ ಭಾಗ ಓರಲ್ ಆಗಿ ಇರುತ್ತದೆಯೇ ವಿನಾಃ ಬರವಣಿಗೆ ಮುಖಾಂತರ ಇರುವುದಿಲ್ಲ. ೧೯೪೯ನೇ ಇಸವಿಯಿಂದ ನೋಡಿದರೂ ಕೂಡ ಪಹಣಿಯಲ್ಲಿ ಅವನ ಹೆಸರು ಸಿಕ್ಕುತ್ತಾ ಇಲ್ಲ. ನೂರಾರು ವರ್ಷಗಳಿಂದಲೂ ಅವನು ಆ ಜಮೀನನ್ನು ಅನುಭವಿಸಿಕೊಂಡು ಬರುತ್ತಾ ಇದ್ದರೂ ಕೂಡ ಅದು ಯಾವ ದಾಖಲೆಯಲ್ಲೂ ಇಲ್ಲದೇ ಇರುವುದರಿಂದ ಅವನು ರುಜುವಾತು ಮಾಡುವುದಕ್ಕೆ ಕಷ್ಟವಾಗುತ್ತದೆ. ಸೆಕ್ಷನ್ ೯ರ ಪ್ರಕಾರ ಆರ್ಡಿನರಿ ಟೆನೆಂಟ್ಸೇ ಗೇಣಿ ಕೊಡುವ ಪದ್ಧತಿಯೇ ಮುಂದು ವರೆಯುತ್ತಾ ಇದೆ. ಈಗ ನಮ್ಮ ಸಾಗರದಲ್ಲಿ ಶ್ರೀಮಾನ್ ಬದ್ರಿನಾರಾಯಣರವರ ಊರಿನಲ್ಲಿ ಈ ರೀತಿ ಆಗುತ್ತಾ ಇದೆ. ಸುಮಾರು ೨೦೦-೩೦೦ ಜನರು ನೂರಾರು ವರ್ಷಗಳಿಂದ ಗೇಣಿ ಮಾಡಿಕೊಂಡು ಬಂದರೂ ಅದು ಯಾವ ದಾಖಲೆಯಲ್ಲೂ ಇಲ್ಲ. ಆದುದರಿಂದ ಅವರು ಸೆಕ್ಷನ್ ೯ರ ಪ್ರಕಾರ ಆರ್ಡಿನರಿ ರೈತರಾಗಿಯೇ ಪರಿಗಣಿಸಿದ್ದಾರೆ. ಈ ಕಾನೂನು ಬಂದರೂ ಕೂಡ ಪ್ರಯೋಜನ ಸಿಕ್ಕದೇ ಗೇಣಿದಾರರಾಗಿಯೇ ಮುಂದುವರೆಯುತ್ತಿದ್ದಾರೆ. ಅವರಿಗೆ ಮೊದಲೇ ಖಾತೆ ಆಗಿದ್ದರೆ ೧೯೬೦-೬೧ನೇ ಇಸವಿಯಿಂದಲೇ ಅವರು ಆ ಜಮೀನಿನ ಮಾಲೀಕರಾಗಿ ಮುಂದು ವರೆಯುತ್ತಿದ್ದರು. ಹೈದ್ರಾಬಾದ ರಿಲಿಜಿಯಸ್ ಆಂಡ್ ಛಾರಿಟಿಬಲ್ ಆಕ್ಟ್ ಪ್ರಕಾರ ಅವರು ಪ್ರೊಟಿಕ್ಟೆಡ್ ಟೆನೆಂಟ್ ಆಗುತ್ತಾರೆ. ಈ ಕಾನೂನು ಬಂದ ಲಾಗಾಯಿತು ೧೨ ವರ್ಷದ ಹಿಂದಿನ ಲೆಕ್ಕ ತೆಗೆದುಕೊಂಡು ಬಂದರೆ ಅವನು

ಪ್ರೊಟೆಕ್ಟೆಡ್ ಟೆನೆಂಟ್ಸ್ ಆಗುತ್ತಾನೆ. ಅವನು ಕ್ವಾಸಿ ಪರ್ಮನೆಂಟ್ ಅಲ್ಲದೇ ಇದ್ದರೂ ಕೂಡ ಆರ್ಡಿನರಿ ಟೆನೆಂಟ್ ಆದರೂ ಆಗಬೇಕು. ಈ ರೀತಿ ಅವರಿಗೆ ಖಾತೆ ಮಾಡಿಸಿಕೊಟ್ಟು ಅವರು ಒಂದು ಖಾಯಂ ಟೆನೆಂಟ್ ಆಗುವ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಅದರ ಟೆನೆಂಟ್ಸ್ ವಿಷಯ ಹೇಳುವುದಾದರೆ ಹಿಂದಿನ ಮುಂಬೈ ಪ್ರದೇಶದ ರಿಲಿಜಿಯಸ್ ಆಂಡ್ ಛಾರಿಟಿಬಲ್ ಟ್ರಸ್ಟ್ ಪ್ರಕಾರ ೬ ವರ್ಷದಿಂದ ಅವನು ಜಮೀನು ಸಾಗುವಳಿ ಮಾಡಿಕೊಂಡು ಬಂದರೆ ವರೂ ಕೂಡ ಕಂದಾಯದ ೧೦೦ ರಷ್ಟು ಮೊಬಲಗನ್ನು ಕೊಟ್ಟರೆ ಅವನಿಗೆ ಖಾತೆ ಮಾಡಬಹುದು ಎಂದು ಒಪ್ಪಿಕೊಂಡಿದ್ದರ ಮೇಲೆ ಸರ್ಕಾರದವರು ಈಗ ಅದಕ್ಕೆ ಒಂದು ಸೂಕ್ತ ತಿದ್ದುಪಡಿಯನ್ನು ತಂದಿದ್ದಾರೆ. ಇದರಿಂದ ಏನಾಗಿದೆ ಎಂದರೆ ಇನಾಂದಾರರಿಗೆ ಸಂಬಂಧಪಟ್ಟಂತೆ ಯಾರ ಕೂಡಾದರೂ ಗೇಣಿದಾರರು ಇದ್ದಾರೋ ಅವರು ವಕ್ಕಲಿಗರ ಖಾತೆಗೆ ಬರುತ್ತಾರೆ. ಅವರು ಆ ಭೂಮಿಯ ಮಾಲೀಕರಾಗುತ್ತಾರೆ; ಅವರು ಈ ಶೋಷಣೆಯಿಂದ ಮುಕ್ತರಾಗುತ್ತಾರೆ. ಈ ರೀತಿ ಅವರನ್ನು ಮುಕ್ತರನ್ನಾಗಿ ಮಾಡುವಂಥ ಒಂದು ಬಿಲ್ ತಂದಿರುವುದರಿಂದ ತಮ್ಮನ್ನು ಎಷ್ಟು ಹೊಗಳಿದರೂ ಸಾಕಾಗುವುದಿಲ್ಲ. ಈ ಗೇಣಿ ಪದ್ಧತಿಯನ್ನು ನೋಡಿ ನೋಡಿ ಮಾನ್ಯ ಮಂತ್ರಿಗಳು ಈವೊತ್ತಿನ ದಿವಸ ಈ ಒಂದು ಬಿಲ್ಲನ್ನು ತಂದಿದ್ದಾರೆ. ಕಳೆದು ಒಂದು ವರ್ಷದಿಂದ ನಮ್ಮ ಸೊರಬ ತಾಲ್ಲೂಕಿನಲ್ಲಿ ಪಹಣಿ ವಿಷಯದಲ್ಲಿ ಏನಾಗಿದೆ ಎಂದರೆ ಬೇಕಾದಷ್ಟು ಅವ್ಯವಸ್ಥೆಗಳು ಆಗಿವೆ. ಇದರ ಬಗ್ಗೆ ಸರ್ಕಾರಕ್ಕೂ ಹೇಳಿದ್ದೇನೆ. ಅವರು ಈಗಾಗಲೇ ಅದರ ಬಗ್ಗೆ ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ೩–೪ ವರ್ಷದಿಂದ ಪಹಣಿಯಲ್ಲಿ ಬದಲಾವಣೆ ಮಾಡುವುದು, ಅವರನ್ನು ವಕ್ಕಲೆಬ್ಬಿಸುವುದು ಈ ಕೆಲಸ ಮಾಡುತ್ತಿದ್ದಾರೆ.

Sri B. B. SAYANAK.— Sir, there is no Quorum (Quorum bell was rung)

ಶ್ರೀ ಕಾಗೋಡು ತಿಮ್ಮಪ್ಪ.— ಈ ಪಹಣಿಯ ಒಂದು ತಿದ್ದುಪಡಿಯಿಂದ ಅನೇಕ ಜನರಿಗೆ ಬಹಳ ತೊಂದರೆಯಾಗಿದೆ. ಅವರುಗಳು ಎಷ್ಟೋ ವರ್ಷಗಳಿಂದ ಜಮೀನನ್ನು ಮಾಡಿಕೊಂಡು ಬರುತ್ತಾ ಇದ್ದರೂ ಕೂಡ ಅವರಿಗೆ ಆ ಜಮೀನುಗಳು ದೊರಕದೇ ಇರುವ ಪರಿಸ್ಥಿತಿ ಇದೆ. ಉದಾಹರಣೆ ಹೇಳುವುದಾದರೆ ನಮ್ಮೂರ ಹತ್ತಿರ ಇರುವ ಒಂದು ಊರಿನಲ್ಲಿ ೨೭ ಜನ ಟೆನೆಂಟ್ಸ್‌ಗಳು ಇದ್ದರು. ಅವರು ನೂರಾರು ವರ್ಷಗಳಿಂದ ಆ ಜಮೀನುಗಳನ್ನು ಮಾಡಿಕೊಂಡು ಬರುತ್ತಾ ಇದ್ದರು. ಸೆಕ್ಷನ ೧೪ರ ಪ್ರಕಾರ ಆ ಜಮೀನ್ದಾರರು ಕೋರ್ಟಿಗೆ ಅರ್ಜಿ ಹಾಕಿದರು, ಅದು ವಜಾ ಆಗಿ ಅದನ್ನು ನಾನ್ ರೆಸ್ಯೂಮಬಲ್ ಲ್ಯಾಂಡ್ ಎಂದು ತೀರ್ಮಾನ ಮಾಡಿದರು. ಆದರೂ ಕೂಡ ಪೋಲೀಸಿನವರು ಅದರ ಮೇಲೆ ಪ್ರಭಾವ ಬೀರಿ ಸೆಕ್ಷನ್ ೧೦೭ ಮತ್ತು ೧೪೪ರ ಪ್ರಕಾರ ಕೇಸುಗಳನ್ನು ಹಾಕುತ್ತಿದ್ದಾರೆ. ಈ ರೀತಿ ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಈ ಬಗ್ಗೆ ಸಾಕಷ್ಟು ನನ್ನ ಅನುಭವಕ್ಕೆ ಬಂದಿದ್ದನ್ನು

ಹೇಳುತ್ತೇನೆ. ಕಳೆದ ೨೫ ವರ್ಷಗಳಿಂದಲೂ ಈ ರೀತಿ ನಡೆಯುತ್ತಾ ಇರತಕ್ಕಂಥ ಪದ್ಧತಿ ಯಾವತ್ತು ನಿರ್ಮೂಲವಾಗುತ್ತದೆ, ಯಾವೊತ್ತು ಅಂತ್ಯಗೊಳ್ಳುತ್ತದೆ ಎಂದು ಜನ ನೋಡುತ್ತಾ ಇದ್ದರು. ಅದು ಈವೊತ್ತಿನ ದಿವಸ ಮುಕ್ತಾಯವಾಗುವಕಾಲ ಬಂದಿದೆ. ಅದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಈ ಕಾನೂನನ್ನು ತಿದ್ದುಪಡಿ ಮಾಡುವ ಮುಖಾಂತರ ಎಲ್ಲಾ ಗೇಣಿದಾರರಿಗೂ ಖಾತೆ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಆದುದರಿಂದ ಇದನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ಮಾನ್ಯ ಕಂದಾಯ ಮಂತ್ರಿಗಳು ಈವೊತ್ತು ಮಂಡಿಸಿರತಕ್ಕಂಥ ತಿದ್ದುಪಡಿ ಏನು ಇದೆ ಇದರಲ್ಲಿ ಪರ್ಸನಲ್ ಆಂಡ್ ಮಿಸಲೇನಿಯಸ್ ಅಬಾಲಿಷನ್ ಆಕ್ಟಿಗೆ ಸಂಪೂರ್ಣವಾಗಿ ತಿದ್ದುಪಡಿ ತಂದಿದ್ದಾರೆ. ಇದರ ಜೊತೆಗೆ ನಮ್ಮ ಹಳೇ ಮೈಸೂರು ರಾಜ್ಯದ ರಿಲಿಜಿಯಸ್ ಆಂಡ ಛಾರಿಟಬಲ್ ಆಕ್ಟ ಆಫ್ ೧೯೫೫ ರಲ್ಲಿ ಏನು ಇದೆ ಎಂದರೆ ಅದರಲ್ಲಿ ಎರಡು ವರ್ಗದ ರೈತರನ್ನು ಸೃಷ್ಟಿ ಮಾಡಿದ್ದಾರೆ. ಖದೀಮು ಟಿನೆಂಟ ಮತ್ತು ಪರ್ಮನೆಂಟ ಟಿನೆಂಟ ಎಂದು ಎರಡು ತರಹ ಇದೆ. ಇದು ಅಲ್ಲದೇ ಹೋದವರು ಅರ್ಡಿನರಿ ಟಿನೆಂಟ ಆಗುತ್ತಾರೆ. ಖದೀಮು ಟಿನೆಂಟ ಹೆಚ್ಚಿಗೆ ಸಿಕ್ಕುವುದಿಲ್ಲ. ಖದೀಮು ಟಿನೆಂಟ ಮುಜರಾಯಿ ದೇವಸ್ಥಾನಗಳಲ್ಲಿ ಹೆಚ್ಚಾಗಿ ಇದ್ದಾರೆ. ಸೆಕ್ಷನ್ ೬ರ ಪ್ರಕಾರ ಅದರ್ ಟಿನೆಂಟ್ಸ ಟು ಬೀ ಅಂಡರ ಗ್ರೌಮೆಂಟ್. ಅವರು ಬಹಳ ಕಡಿಮೆ. ಅವರು ಪರ್ಮನೆಂಟ ಟಿನೆಂಟಿಗೆ ಒಳಪಡದೇ ಹೋದರೆ ಸರ್ಕಾರದ ರೈತರಾಗಿ ಮುಂದುವರೆದುಕೊಂಡು ಬರುವ ವ್ಯವಸ್ಥೆಯನ್ನು ಈ ಕಾನೂನಿನಲ್ಲಿ ಮಾಡಿದ್ದಾರೆ. ಹೈದ್ರಾಬಾದ ಮತ್ತು ಮುಂಬೈ ಪ್ರದೇಶದ ರಿಲಿಜಿಯಸ್ ಎಂಡ ಛಾರಿಟಬಲ್ ಆಕ್ಟ ಪ್ರಕಾರ ೩ ತರಹ ಇದೆ. ಅದರಲ್ಲಿ ಇರತಕ್ಕಂಥಾದ್ದು (೧) ಪರ್ಮನೆಂಟ ಟಿನೆಂಟ್ (೨) ಖದೀಮು ಟಿನೆಂಟ್ (೩) ಪ್ರೊಟೆಕ್ಟೆಡ್ ಟಿನೆಂಟ್. ಈ ಪ್ರೊಟೆಕ್ಟೆಡ್ ಟಿನೆಂಟಿನಲ್ಲಿ ಪೂಜಾರಿಗಳಿಗೆ ಮತ್ತು ಅರ್ಚಕರುಗಳಿಗೆ ಏನು ಹಕ್ಕು ಭಾದ್ಯತೆ ಕೊಡಬೇಕೋ ಅದನ್ನು ಕೊಡಬೇಕೆಂದು ಅದರಲ್ಲಿ ಅಳವಡಿಸಿದ್ದಾರೆ. ಆಕ್ಟ ನಂಬರ ೧೮ ಆಫ್ ೧೯೫೫ ಇದು ಪರ್ಸನಲ್ ಆಂಡ್ ಮಿಸಲೇನಿಯಸ್ ಅಬಾಲಿಷನ್ ಆಕ್ಟಿಗೆ ತಿದ್ದುಪಡಿ ಸೂಚಿಸಿದ್ದಾರೆ. ಅದೇ ರೀತಿ ಹೈದ್ರಾಬಾದ ಮತ್ತು ಮುಂಬಯಿ ಪ್ರದೇಶದ ರಿಲಿಜಿಯಸ್ ಆಂಡ ಛಾರಿಟಬಲ್ ಇನ್ಸ್ಟಿಟ್ಯೂಷನ್ಸ ಆಕ್ಟನಲ್ಲೂ ಇದನ್ನು ಅಳವಡಿಸುವಂತೆ ಒಂದು ತಿದ್ದುಪಡಿ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಹೈದ್ರಾಬಾದ ಮತ್ತು ಮುಂಬೈ ಪ್ರದೇಶದ ಇನಾಂ ರದ್ದಿಯಾತಿ ಆಕ್ಟಿನಲ್ಲಿ ಪೂಜಾರಿಗಳಿಗೆ ಮತ್ತು ಅರ್ಚಕರುಗಳಿಗೆ ಜಮೀನು ಪಡೆಯುವ ಹಕ್ಕು ತೀರ್ಮಾನವಾಗಿದೆ. ಆ ತೀರ್ಮಾನವನ್ನು ಅನುಸರಿಸಿ ಹಳೇ ಮೈಸೂರು ಪ್ರದೇಶದ ಇನಾಂ ರದ್ದಿಯಾತಿ ಆಕ್ಟನಲ್ಲೂ ಕೂಡ ಪೂಜಾರಿಗಳಿಗೂ ಮತ್ತು ಅರ್ಚಕರುಗಳಿಗೂ ಜಮೀನು ಪಡೆಯುವ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಹಳೇ ಮೈಸೂರು ಪ್ರದೇಶದಲ್ಲಿ ಅವರಿಗೆ ಹಕ್ಕು ಇಲ್ಲ. ಇದು ಕನೆಕ್ಟೆಡ ಆಗಿರುವುದರಿಂದ ಈಗ ಇರತಕ್ಕಂಥ ಒಂದೇ ಮಸೂದೆಯಲ್ಲಿ ಏಕಕಾಲದಲ್ಲೇ ಈ ಎರಡಕ್ಕೂ ತಿದ್ದುಪಡಿ

ತರುವುದಕ್ಕೆ ಈ ಮಸೂದೆಯನ್ನು ಮಂಡಿಸಿದ್ದೀರಿ. ಇದೇ ಸಂದರ್ಭದಲ್ಲಿ ನ್ಯಾಯ ಮಂಡಲಿಗಳ ಮೂಲಕ ಗೇಣಿದಾರರಿಗೆ ರಕ್ಷಣೆ ಕೊಡುವುದಕ್ಕೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಒದಗಿಸುವುದಕ್ಕೆ ಒಂದು ತಿದ್ದುಪಡಿ ತರಬೇಕೆಂದು ಹೇಳುತ್ತೇನೆ. ಮತ್ತು ಈಗಾಗಲೇ ಮಂಡಿಸಿರತಕ್ಕಂಥ ಅಪರ್ಸನಲ್ ಆಂಡ ಮಿಸಲೇನಿಯಸ್ ಇನಾಂ ಅಬಾಲಿಷನ್ ಆಕ್ಟ ಏನು ಇದೆ ಅದಕ್ಕೆ ಈ ಮೈಸೂರು ರಿಲಿಜಿಯಸ್ ಆಂಡ್ ಛಾರಿಟಬಲ್ ಇನ್‌ಸ್ಟಿಟ್ಯೂಷನ್ ಆಕ್ಟ ಅನ್ವಯಿಸುವುದಿಲ್ಲ ಮತ್ತು ಇದೇ ಸಂದರ್ಭದಲ್ಲಿ ರೈತರಿಗೂ ಕೂಡ ಅವರ ಹೆಸರಿಗೆ ಖಾತೆಯನ್ನು ಒದಗಿಸಿ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಈಹೊತ್ತಿನ ದಿವಸ ನಿಮ್ಮ ಕೃಪಾ ಕಟಾಕ್ಷದಿಂದಲೋ ಅಥವಾ ನಿಮ್ಮ ಒಂದು ಧೈರ್ಯದಿಂದಲೋ ಅಥವಾ ನಿಮ್ಮ ಒಂದು ನೈತಿಕ ಧರ್ಮದಿಂದಲೋ ಗೇಣಿ ರೈತರಿಗೆ ರಕ್ಷಣೆ ಕೊಡುವ ಯುಗ ಈಗ ಪ್ರಾರಂಭವಾಗಿದೆ. ಈ ಯುಗದಲ್ಲಿ ರೈತರಿಗೆ ಸಂಪೂರ್ಣವಾಗಿ ರಕ್ಷಣೆ ಕೊಡುವುದಲ್ಲದೆ ಅವರನ್ನು ಇದರಿಂದ ಮುಕ್ತರನ್ನಾಗಿ ಮಾಡಬೇಕು ಮತ್ತು ಅವರು ೧೯೭೪ನೇ ಇಸವಿಯಿಂದಲೇ ಮಾಲೀಕರಾಗತಂಕ್ಕಂಥ ದಿನಗಳನ್ನು ನೀವು ಯಾವೊತ್ತು ಮೈಸೂರು ರಾಜ್ಯದ ಭೂಪಟದಲ್ಲಿ ಅಥವಾ ನಕ್ಷೆಯಲ್ಲಿ ಹಾಕುತ್ತೀರಿ? ಎಷ್ಟು ಬೇಗ ಅವರನ್ನು ಗೇಣಿದಾರ ಪದ್ಧತಿಯಿಂದ ಮುಕ್ತರನ್ನಾಗಿ ಮಾಡುತ್ತೀರಿ? ಅವರನ್ನು ಆದಷ್ಟು ಬೇಗ ಮಾಲೀಕರಾಗಿ ಮಾಡಿ ಅವರಿಗೆ ಒಂದು ನೈತಿಕ ಹಕ್ಕನ್ನು ಮಾಡಿ ಕೊಡಬೇಕು ಮತ್ತು ಇದಕ್ಕೆ ಕೂಡ ಒಂದು ಸಾಮಾನ್ಯವಾದ ತಿದ್ದುಪಡಿಯನ್ನು ತರುವುದಕ್ಕೆ ತಾವು ತಯಾರಾಗಬೇಕು ಎಂದು ಹೇಳುತ್ತೇನೆ.

ಹಿಂದೆ ಆರು ವರ್ಷ ಕಾಲ ಅರ್ಜಿ ಹಾಕುವುದಕ್ಕೆ ಅವಕಾಶವಿತ್ತು. ಅದನ್ನು ತೆಗೆದು ಒಂದು ವರ್ಷದಲ್ಲಿ ಅರ್ಜಿ ಹಾಕಿಕೊಳ್ಳಬೇಕು, ಒಂದು ವೇಳೆ ಹಾಕದೆ ಹೋದರೆ ವಿಶೇಷ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಂಡರೆ ಇನ್ನೂ ಆರು ತಿಂಗಳ ಹೆಚ್ಚಿನತಕ್ಕ ವ್ಯವಸ್ಥೆ ಕೂಡ ಉತ್ತಮವಾದುದು. ಮೈಸೂರ ರಿಲಿಜಿಯಸ್ ಅಂಡ ಛಾರಿಟಬಲ್ ಇನಾಮ್ಸ ಅಬಾಲಿಷನ್ ಆಕ್ಟ ಪ್ರಕಾರ ೧೯೭೧ನೇ ಇಸವಿಯಲ್ಲಿ ಒಂದು ತಿದ್ದುಪಡಿಯನ್ನು ತಂದು ಮಾಲೀಕತ್ವವನ್ನು ಪಡೆಯುವುದಕ್ಕೆ ಗೇಣಿದಾರರು ಅರ್ಜಿ ಹಾಕಿಕೊಳ್ಳಬೇಕು ಎಂದು ಇದ್ದುದರ ಪ್ರಕಾರವಾಗಿ ಹಾಕಿದ ಅರ್ಜಿಗಳು ಈ ಹೊತ್ತಿನವರೆಗೂ ತೀರ್ಮಾನವಾಗಿಲ್ಲ. ವಾಯಿದೆ ಆರು ವರ್ಷವಿದ್ದುದರಿಂದ ಆ ಅವಧಿ ಮುಗಿಯುವವರೆಗೆ ಅವುಗಳನ್ನು ವಿಚಾರಣೆಗೆ ತೆಗೆದುಕೊಂಡು ಖಾತೆ ಹಾಕತಕ್ಕ ಕ್ರಮ ಮಾಡುವುದಕ್ಕಾಗಲಿಲ್ಲ. ತಾವಾದರೂ ಕೂಡ ಏನು ತಿದ್ದುಪಡಿಯನ್ನು ಸೂಚಿಸಿದ್ದೀರಿ ಅದರಂತೆ ತಕ್ಷಣ ವಿಚಾರಣೆಗೆ ಬರಲಿಕ್ಕೆ, ತನ್ಮೂಲಕ ಗೇಣಿದಾರರಿಗೆ ಖಾತೆ ಹಾಕತಕ್ಕ ಕೆಲಸವನ್ನು ಮಾಡುವುದಕ್ಕಾಗುತ್ತದೆ.

ಇನ್ನೊಂದು ಮೂಲಭೂತವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ಭೂಸುಧಾರಣೆ ತಿದ್ದುಪಡಿ ಮಸೂದೆಯಲ್ಲಿ ಗೇಣಿ ರೈತನಿಗೆ ಮಾಲೀಕತ್ವವನ್ನು ಒದಗಿಸಿಕೊಡತಕ್ಕ ಜವಾಬ್ದಾರಿಯನ್ನು ಒಂದು ಟ್ರಿಬ್ಯುನಲ ರಚನೆ

ಮಾಡಿ ಅದಕ್ಕೆ ವಹಿಸಿಕೊಡತಕ್ಕ ದೃಢವಾದ, ದಿಟ್ಟವಾದ, ಬಲವಾದ ತೀರ್ಮಾನವನ್ನು ಈಗಾಗಲೇ ಮಾಡಿದ್ದೀರಿ. ಅದನ್ನು ಪೂರ್ಣವಾಗಿ ಕಾರ್ಯಗತ ಮಾಡುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಈ ಮಸೂದೆಯಲ್ಲಿ ಕೂಡ ಟ್ರೆಬ್ಯುನಲಿಗೆ ಅಧಿಕಾರವನ್ನು ಕೊಡುವುದರಿಂದ ಕೆಲಸ ಸುಲಭವಾಗಿ ಆಗುತ್ತದೆ ಎನ್ನುವುದನ್ನು ಆಲೋಚನೆ ಮಾಡ ಬೇಕು. 'ಕೋರ್ಟ್' ಎನ್ನುವುದಕ್ಕೆ ಬದಲಾಗಿ 'ಟ್ರೆಬ್ಯುನಲ' ಎಂದು ಸೇರಿಸಿದರೆ, ಏನು ತತ್ವವನ್ನು ಭೂ ಸುಧಾರಣಾ ಕಾನೂನಿನಲ್ಲಿ ಅನುಸರಿಸುತ್ತೇವೆ ಅದೇ ತತ್ವವನ್ನು ಇಲ್ಲಿಯೂ ಅನುಸರಿಸುವುದರಿಂದ ಒಂದು ಮೂಲಭೂತವಾದ ತತ್ವವನ್ನು ಗೇಣಿದಾರ ರಿಗೆ ಸಂಬಂಧಪಟ್ಟಂತೆ ಎಲ್ಲ ಸಂದರ್ಭಗಳಲ್ಲಿಯೂ ಅನುಸರಿಸಿದಂತಾಗುತ್ತದೆ. ಅದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಮೂರು ಕಾಯದೆಗಳು ಇನಾಂ ರದ್ದಿಯಾತಿಗೆ ಸಂಬಂಧಪಟ್ಟ, ಹಾಗೆ ಇರುವುದರಲ್ಲಿ ಗೇಣಿದಾರನಿಗೆ ಮಾಲೀ ಕತ್ವವನ್ನು ಕೊಡತಕ್ಕ ವ್ಯವಸ್ಥೆಯನ್ನು ಟ್ರೆಬ್ಯುನಲ್ ಮುಖಾಂತರ ಕೂಡುವುದಕ್ಕೆ ಆಲೋಚನೆ ಮಾಡಿ ಅದಕ್ಕೂ ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ, ಮತ್ತೊಮ್ಮೆ ಮಾನ್ಯ ಕಂದಾಯ ಮಂತ್ರಿಗಳಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತ, ಅಧ್ಯಕ್ಷರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಉಪಾಧ್ಯಕ್ಷರೇ, ಈ ಭೂಮಿಗೆ ಸಂಬಂಧಪಟ್ಟಂತೆ ಮತ್ತು ದೇಶದ ಅತಿ ಪ್ರಾಮುಖ್ಯವಾದ ವಿಚಾರದ ಬಗ್ಗೆ ಈ ಮನೆ ಯಲ್ಲಿ ಸಾಕಾದಷ್ಟು ಆಸಕ್ತಿ ಜನ ವಹಿಸುತ್ತಿಲ್ಲವೆಂದರೆ ನನ್ನನ್ನು ತಿಳಿಯಬಾರದು. ಏಕೆಂದರೆ ಇಂಥ ಮುಖ್ಯವಾದ ಮಸೂದೆ ಚರ್ಚೆಯಾಗುತ್ತಿರುವಾಗ ತಾವು ಸಭೆಯಲ್ಲಿ ಕೋರಂ ಇಲ್ಲವೆಂದು ಕೋರಂ ತರಿಸಬೇಕಾಯಿತು. ಇದರಲ್ಲಿ ಏನಾಗಿದೆ ಎಂದರೆ, ಈ ಮಸೂದೆಯ ಬಗ್ಗೆ ಮತ್ತು ಭೂಮಿಯ ಸುಧಾರಣೆ ಬಗ್ಗೆ ಸಾಕಾದಷ್ಟು ಹೋರಾಟ ಮಾಡುತ್ತಿದ್ದ ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಕಾಗೋಡು ತಿಮ್ಮಪ್ಪ ಅವರ ಪಕ್ಷ ದವರು, ಶ್ರೀ ಕಕ್ಕಿಲಾಯ ಅಂಥವರು ಇದರಲ್ಲಿ ಸಾಕಾದಷ್ಟು ಅನುಕೂಲವನ್ನು ಈ ಸಂದರ್ಭದಲ್ಲಿ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಯಿತು. ಅವರು ಇದರ ಬಗ್ಗೆ ಸಾಕಾದಷ್ಟು ಪರಿಣತಿಯನ್ನು ಪಡೆದಿದ್ದಾರೆ. ಅವರು ಹೇಳಿದ್ದನ್ನೇ ಇಲ್ಲಿ ಸರ್ಕಾರ ಒಪ್ಪಿಕೊಳ್ಳತಕ್ಕ ಸಂದರ್ಭ ಬಂದಿದೆ. ವ್ಯವಸಾಯದ ಬಗ್ಗೆ ಸಾಕಾದಷ್ಟು ಪರಿಣತಿಯುಳ್ಳವರು ಇದರ ಆಗು ಹೋಗುಗಳ ಬಗ್ಗೆ ಇನ್ನಷ್ಟು ಆಸಕ್ತಿ ವಹಿಸಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ.

ನಮ್ಮ ಮುಂದೆ ಇರತಕ್ಕ ಮಸೂದೆಯಲ್ಲಿ ಮೊದಲನೆಯದು ಅದರ ಬಗ್ಗೆ ಯಾವುದಾದರೂ ತಕರಾರು ಹಾಕಬೇಕಾಗಿದ್ದಲ್ಲಿ ಆರು ವರ್ಷ ಕಾಲ ಅವಧಿ ಕೊಟ್ಟಿ ದ್ದರು. ಈಗ ಅದನ್ನು ತೆಗೆದು ಹಾಕಿ ಈ ಕಾನೂನು ಜಾರಿಗೆ ಬಂದ ಒಂದು ವರ್ಷ ದೊಳಗೆ ಅರ್ಜಿ ಹಾಕಬೇಕು ಎಂದು ಹೇಳಿದ್ದಾರೆ. ಯಾವುದಾದರೂ ಹೊಸ ಮಾರ್ಪಾಡು ಮಾಡಬೇಕಾದ ಪಕ್ಷದಲ್ಲಿ, ಅದರ ಬಗ್ಗೆ ತಕ್ಷಣ ತೀರ್ಮಾನ ತೆಗೆದು

ಕೊಂಡು ಕಾರ್ಯಗತ ಮಾಡಬೇಕು. ತಡವಾದಷ್ಟೂ ಎಲ್ಲರಿಗೂ ಅನಾನುಕೂಲವಾಗುತ್ತದೆ ಎನ್ನುವುದರ ಬಗ್ಗೆ ನಾನು ಸ್ಪಷ್ಟಪಡಿಸಿ ಹೇಳಬೇಕಾಗಿದೆ. ಸರ್ಕಾರ ತನ್ನ ನೀತಿಯನ್ನು ತಕ್ಷಣ ಕಾರ್ಯಗತ ಮಾಡದೆ ಹೋದರೆ ಅನೇಕ ಅನಾಹುತಗಳಾಗುತ್ತವೆ. ಆದುದರಿಂದ ಭೂ ಸುಧಾರಣಾ ಕಾಯದೆ ಏನಿದೆಯೋ ಇನಾಂ ರದ್ದಿಯಾತಿ ಕಾನೂನು ಏನಿದೆಯೋ ಅದನ್ನು ತೆಗೆದುಕೊಂಡು ಬಂದಾಗಲೇ ತೀರ್ಮಾನ ಮಾಡಿಬಿಟ್ಟಿದ್ದರೆ ಈ ಹೊತ್ತು ಹೆಚ್ಚು ಹಗರಣವಾಗುತ್ತಿರಲಿಲ್ಲ. ತಡಮಾಡಿದಷ್ಟೂ ಹಗರಣ ಜಾಸ್ತಿಯಾಗುತ್ತದೆ. ಅದರಿಂದ ಒಳ್ಳೆಯದಾಗುತ್ತದೆಯೋ ಕೆಟ್ಟದ್ದಾಗುತ್ತದೆಯೋ ಎನ್ನುವುದರ ಬಗ್ಗೆ ಕಾದು ನೋಡಬೇಕು. ಮತ್ತು ಅದರಲ್ಲಿ ಆಗತಕ್ಕ ಫಲಿತಾಂಶವನ್ನು ತಿಳಿಯಬೇಕೇ ಹೊರತು ಬರೀ ಥಿಯರಿಟಿಕಲ್ ಆಗಿ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆರು ವರ್ಷ ಇದ್ದ ಅವಧಿಯನ್ನು ಒಂದು ವರ್ಷ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಕಾನೂನು ಮತ್ತು ಅದರ ತಿದ್ದುಪಡಿಗಳ ಬಗ್ಗೆ ತಿಳುವಳಿಕೆ ಇರತಕ್ಕ ಜನ ಬಹಳ ಕಡಿಮೆ. ವ್ಯವಸಾಯ ಮಾಡುವವರಲ್ಲಿ ತಿಳುವಳಿಕೆ ಇಲ್ಲದವರೇ ಇದ್ದಾರೆ. ಆರು ವರ್ಷ ಕೊಟ್ಟಿದ್ದ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಿಬಿಟ್ಟರೆ ಕೆಲವು ಸಂದರ್ಭಗಳಲ್ಲಿ ಅನ್ಯಾಯವಾಗಬಹುದು. ಸಕಾರಣವಿರತಕ್ಕ ಸಂದರ್ಭಗಳಲ್ಲಿ ಸರ್ಕಾರದವರು ಅರ್ಜಿ ಹಾಕತಕ್ಕ ಅವಕಾಶವನ್ನು ಆರು ತಿಂಗಳ ಕಾಲ ಹೆಚ್ಚಿಸುವುದಕ್ಕೆ ಅನುಕೂಲವಾಗುವಂತೆ ನಾನು ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅರ್ಜಿ ಹಾಕದೆ ಇರುವವನು ಗೇಣಿದಾರನಾಗಿರಬಹುದು ಅಥವಾ ಭೂ ಮಾಲೀಕನಾಗಿರಬಹುದು. ಇಂಥ ಸಂದರ್ಭಗಳಲ್ಲಿ ಸರ್ಕಾರಕ್ಕೆ ಆರು ತಿಂಗಳ ಅವಧಿ ಕೊಡುವುದಕ್ಕೆ ಅಧಿಕಾರ ಕೊಡಬೇಕೆಂಬ ತಿದ್ದುಪಡಿಯನ್ನು ತಂದಿದ್ದೇನೆ.

ಛಾರಿಟಬಲ್ ಆಂಡ್ ರಿಲಿಜಿಯಸ್ ಇನಾಂ ಅಬಾಲಿಷನ ಆಕ್ಟ ಪ್ರಕಾರ ಅರ್ಚಕರಾದವರು ದೇವಸ್ಥಾನದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆ, ಬೇರೆ ಗೇಣಿದಾರರಿಗೆ ಕೊಡುವ ಹಾಗೆಯೇ ಇವರಿಗೂ ಆ ಜಮೀನನ್ನು ಕೊಡಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದೇನೆ. ಈ ತಿದ್ದುಪಡಿ ಕಾನೂನಿನಲ್ಲಿ ಮಾಡಿರುವ ಅನ್ಯಾಯವೇನೆಂದರೆ, ಬೇರೆ ಗೇಣಿದಾರ ಬರೀ ಜಮೀನನ್ನು ಮಾಡುತ್ತಿದ್ದಾನೆಯೇ ಹೊರತು ಬೇರೆ ವಿಧವಾದ ಯಾವ ಕಾರಣಕ್ಕೂ ಅವನಿಗೆ ಜಮೀನು ಕೊಟ್ಟಿರಲಿಲ್ಲ. ಅಂಥವನಿಗೆ ಒಂದು ರೀತಿಯ ಸೌಲಭ್ಯ ಮತ್ತು ದೇವಸ್ಥಾನದ ಅರ್ಚಕನಾಗಿ ದೇವಸ್ಥಾನದ ಸೇವೆ ಮಾಡುವವನಿಗೆ ಭೂ ಕಂದಾಯದ ೧೫೦ ಪಟ್ಟು ಕೊಡಬೇಕು ಎಂದರೆ.....

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಬೇರೆ ಗೇಣಿದಾರರಲ್ಲಿ ಮೂರು ನಾಲ್ಕು ತರಹವಿದೆ. ಪರ್ಮನೆಂಟ ಟೆನೆಂಟ ಆಗಿದ್ದರೆ ಅವನು ಕಂದಾಯದ ೨೦ ರಷ್ಟು ಮತ್ತು ಪೂಜಾರಿಯಾದರೆ ಕಂದಾಯದ ೧೦೦ ರಷ್ಟು ಕೊಡಬೇಕು ಎಂದು ಮಾಡಿದೆ. ಬೇರೆ ಆಕ್ಟನಲ್ಲಿ ಅದನ್ನೆಲ್ಲ ಅಳವಡಿಸಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.— ಪೂಜಾರಿ ದೇವಸ್ಥಾನಕ್ಕೆ ಸೇವೆ ಸಲ್ಲಿಸುತ್ತಿರುತ್ತಾನೆ. ಬೇರೆಯವರಿಗೆ ೨೦ ರಷ್ಟು ಕೊಡಬೇಕೆಂದು ಹೇಳುವಾಗ ಪೂಜಾರಿಗೆ ೧೦೦ ರಷ್ಟು ಕೊಡಬೇಕು ಎನ್ನುವುದು ಸರಿಯೇ ಎಂದು ಯೋಚನೆ ಮಾಡಬೇಕು. ಪೂಜೆ ಮಾಡುತ್ತ ಇರುವವರು ದೇವಸ್ಥಾನವನ್ನೇ ನಂಬಿಕೊಂಡಿರತಕ್ಕ ಜನ. ಅವರು ನೂರರಷ್ಟು ಕೊಡಬೇಕು ಎಂದರೆ ದುಬಾರಿ ಆಗುತ್ತದೆ. ಏಕೆಂದರೆ ಅವನು ಜಮೀನು ಮಾಡುವುದಲ್ಲದೆ ದೇವರ ಸೇವೆ ಮಾಡುತ್ತಿರುತ್ತಾನೆ. ದೇವರ ಸೇವೆ ಮಾಡುವುದಕ್ಕೆ ಬೇರೆ ಸೌಲಭ್ಯಗಳು ಮೊದಲಿನ ಹಾಗೆ ಸಿಕ್ಕುವುದಿಲ್ಲ, ಅದರಲ್ಲಿಯೂ ವರಮಾನ ದೇವಸ್ಥಾನಕ್ಕೆ ಹೆಚ್ಚಿನ ರೀತಿಯಲ್ಲಿ ಬರುವುದಿಲ್ಲ ಆದುದರಿಂದ ಇವರಿಗೆ ಪುಕ್ಕಟೆಯಾಗಿ ಜಮೀನು ಕೊಡಬೇಕು. ಹೀಗಿರುವಾಗ ಬೇರೆಯವರಿಗಿಂತ ಹೆಚ್ಚು ಕೊಡಬೇಕೆಂದು ಹೇಳುವುದು ಸರಿಯಾದುದಲ್ಲ, ಕಂದಾಯದ ನೂರರಷ್ಟು ಕೊಡಬೇಕು ಎನ್ನುವುದು ಸರಿಯಲ್ಲ. ಇದನ್ನು ಕೂಡಲೇ ಸರಿ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ದೇವರ ಪೂಜೆಯನ್ನು ಮಾಡುತ್ತಿರುವ ಪೂಜಾರಿಗೆ ಅವನು ದೇವರ ಸೇವೆಯನ್ನು ಮಾಡುವುದರ ಜೊತೆಗೆ ಅವನಿಗೆ ಸೇರಿದ ಜಮೀನನ್ನೂ ಅವನೇ ಮಾಡಿಕೊಂಡು ಬರುತ್ತಿದ್ದಾನೆ, ಇಂತವರಿಗೆ ಆದಷ್ಟು ಅನಾನುಕೂಲತೆಗಳಾಗದಂತೆ ಸಾಕಷ್ಟು. ಅನುಕೂಲತೆಗಳನ್ನು ಮಾಡಿಕೊಡಬೇಕು ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಕೊನೆಯದಾಗಿ,

27 A. Extent of land which a person may be registered as occupant:.....

"shall not together with any land held by him exceed such extent as may be prescribed."... ... ... ಎಂದು ಇದರಲ್ಲಿ ಹೇಳಿರುವುದು ಸ್ವಲ್ಪ ವೇಗ ಆಗಿದೆ. ಸರಕಾರ ಈ ರೀತಿ ಆಗಿಂದಾಗ್ಗೆ ಬರಲಾವಣೆ ಮಾಡುವುದಕ್ಕಿಂತ ಲ್ಯಾಂಡ್ ರಿಫಾರಂಸ್ ಆಕ್ಟ್‌ನಲ್ಲಿ ಯಾವ ರೀತಿ ಮಿತಿ ನಿಗದಿ ಮಾಡಿದ್ದಾರೋ ಅದರಂತೆ ಇಲ್ಲೂ ಒಂದು ರೀತಿಯಾಗಿ ಮಿತಿ ಹಾಕಬಹುದು. ಇದರ ಬಗ್ಗೆ ಸರಕಾರ ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಇಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಕಾನೂನುಗಳಿಗೆ ತಿದ್ದುಪಡಿ ಮಾಡಬೇಕಾದರೆ ಕಷ್ಟವಾಗುತ್ತದೆ. ಒಂದು ಕಾನೂನು ಮಾಡಲು ಇಂತಹ ಒಂದು ಬಿಲ್ಲನ್ನು ತಂದಿರುವಾಗ ಇದರ ಜೊತೆಯಲ್ಲಿಯೇ ಕೆಲವು ತಿದ್ದುಪಡಿಗಳನ್ನು ತಂದು ಆದರಿಂದ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ಆದಕ್ಕೆ ವಿರೋಧ ಮಾಡಲು ಹೋಗುವುದಿಲ್ಲ, ಮತ್ತು ತಿದ್ದುಪಡಿಗಳನ್ನು ತರುವಾಗ ನ್ಯಾಯವಾಗಿ ಎಲ್ಲರಿಗೂ ಅನುಕೂಲಗಳಾಗುವಂತೆ ಸರಕಾರ ತರಬೇಕು ಮತ್ತು ಸರಕಾರ ಯಾವುದೇ ನೀತಿಯನ್ನು ಜಾರಿಗೆ ತರಬೇಕೆಂದು ಇರುತ್ತಾರೋ ಅದನ್ನು ಕಾರ್ಯಗತ ಮಾಡಲು ತ್ವರಿತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದಕ್ಕಾಗಿ ನಾನು ಕೂಡ

ಕೆಲವು ತಿದ್ದುಪಡಿಗಳನ್ನು ಕಳುಹಿಸಿದ್ದೇನೆ. ಇದನ್ನೂ ಕೂಡ ಸರಕಾರ ಪರಿಶೀಲನೆ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಅಧ್ಯಕ್ಷರೇ, ರವೆನ್ಯೂ ಖಾತೆಯ ಮಂತ್ರಿಗಳು ತಂದಿರತಕ್ಕ ಇನಾಂಸ್ ಅಬಾಲಿಷನ್ ಬಿಲ್ಲನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಇಪ್ಪತ್ತೈದು ವರ್ಷಗಳಾದ ಮೇಲೆ ಈ ಒಂದು ಕಾಂಗ್ರೆಸ್ಸು ಸರಕಾರ, ಅದು ಯಾವುದೇ ಆಗಿರಲಿ ತನ್ನ ಧ್ಯೇಯ ಧೋರಣೆಗಳಿಗನುಸಾರವಾಗಿ ಜನತೆಯ ಆಶೋತ್ತರಗಳನ್ನು ಈಡೇರಿಸುವದಕ್ಕಾಗಿ ಉಳುವವನಿಗೆ ಭೂಮಿ ಎನ್ನುವ ಒಂದು ಮುಖ್ಯ ಉದ್ದೇಶ ಇಟ್ಟುಕೊಂಡು ಇಂತಹ ಒಂದು ಕಾನೂನನ್ನು ಇಲ್ಲಿ ತಂದಿರುವುದು ಸ್ವಾಗತಾರ್ಹವಾದದು ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಇಂದು ಕೆಲವು ಜನರು ಇನಾಂಸ್‌ಗಳಿಗೇ ಸೇರಿದಂತಹ ಜಮೀನುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಇಂಥವರಿಂದ ಇರುವ ಭೂಮಿ ಕಿತ್ತುಕೊಂಡು ಭೂಹೀನರಿಗೆ ಕೂಡಬೇಕೆಂದು ನಾಡುವುದು ಬೇಡ, ಆದರೆ ಇಂದು ಕೆಲವು ಶ್ರೀಮಂತ ವರ್ಗದ ಜನರು ಇನಾಂಸ್‌ಗಳಿಗೆ ಸೇರಿದ ಭೂಮಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಇಂತಹವರಿಂದ ಜಮೀನು ಬಿಡಿಸಿಕೊಂಡು ಬೇರೆಯವರಿಗೆ ಕೊಡಬಹುದು. ಇದನ್ನು ಬೇಡ ಎಂದು ನಾವು ಹೇಳುವದಿಲ್ಲ. ಈ ಉದ್ದೇಶದಿಂದಲೇ ಇಂದು ಲ್ಯಾಂಡ ರಿಫಾರಂಸ್ ಆಕ್ಟ್‌ನ್ನೂ ಇಲ್ಲಿ ತಂದಿದ್ದಾರೆ, ಇದರಲ್ಲಿ ಹತ್ತು ಎಕರೆಗಳಷ್ಟು ಒಬ್ಬರಿಗೆ ಇರಬಹುದು ಎಂದು ಮಿತಿ ಇದೆ, ಆ ರೀತಿ ಇನಾಂಸ್ ಅಬಾಲಿಷನ್ ಆಕ್ಟನ್ನು ಮಾಡುವಾಗ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕಾನೂನು ತರಬೇಕು. ಕೆಲವು ಹಳ್ಳಿಗಳಲ್ಲಿ ನಾವು ನೋಡಿರುವಂತೆ ಅನೇಕ ಶ್ರೀಮಂತ ವರ್ಗದ ಜನರೇ ಇನಾಂಸ್‌ಗಳಿಗೆ ಸೇರಿದ ಭೂಮಿ ಇಟ್ಟುಕೊಂಡು ಬಹುಕಾಲದಿಂದಲೂ ಅನುಭವಿಸಿಕೊಂಡು ಬರುತ್ತಿದ್ದಾರೆ. ಇದರ ಬಗ್ಗೆ ತಾವು ಗಮನದಲ್ಲಿಟ್ಟುಕೊಂಡು ಬೇರೆ ಯಾವ ಜಮೀನೂ ಇಲ್ಲದೆ ಇದ್ದರೆ ಇಂತಹವರಿಗೆ ಆ ಭೂಮಿಯನ್ನು ಇಟ್ಟುಕೊಳ್ಳಲು ಒಂದು ರೀತಿಯಾದ ಮಿತಿ ಮಾಡಿ ಇಟ್ಟುಕೊಳ್ಳಲು ಅವಕಾಶ ಕೊಡಬಹುದು. ಆದರೆ ಬೇರೆ ಕಡೆ ಭೂಮಿ ಇಟ್ಟುಕೊಂಡು ಇಲ್ಲೂ ಭೂಮಿ ಇಟ್ಟುಕೊಳ್ಳಲು ಅವಕಾಶವಿರಬಾರದು. ಇದನ್ನು ಪರಿಶೀಲನೆ ಮಾಡಿ ಮಾಡಬೇಕು.

ಇನ್ನು ಕೆಲವು ಕಡೆ ದೇವಸ್ಥಾನಗಳಿಗೆ ಧಾರ್ಮಿಕ ದತ್ತಿ ಮೂಲಕ ಅಲ್ಲಿನ ದೇವರ ಪೂಜೆ ಇತ್ಯಾದಿ ಕೆಲಸಗಳು ಸರಿಯಾಗಿ ನಡೆಯಲು ಜಮೀನುಗಳನ್ನು ಕೊಟ್ಟಿದ್ದಾರೆ. ಇಲ್ಲಿರುವ ಭೂಮಿಯ ಆದಾಯದಿಂದಲೇ ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯಬೇಕು. ಅದಲ್ಲದೇ ಇಂದು ದೇವಸ್ಥಾನಗಳಲ್ಲಿ ಬರುವ ವರಮಾನವೂ ಕಡಿಮೆಯಾಗುತ್ತಿದೆ, ಯಾವ ಆದಾಯವೂ ಇಲ್ಲದೆ ಹೋದರೆ ದೇವ ಸ್ಥಾನಗಳಲ್ಲಿ ಪೂಜಾರಿಗಳು ದೇವರ ಪೂಜೆ ಇತ್ಯಾದಿ ಕೆಲಸಗಳನ್ನು ಮಾಡಲು ಕಷ್ಟವಾಗುತ್ತದೆ. ನಾನು ಹಿಂದೆ ಒಂದು ಸಾರಿ ಹೇಳಿದಂತೆ ಮಾನ್ಯ ಕಂದಾಯ ಮಂತ್ರಿ

ಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ದೇವರ ಭಕ್ತರು. ಅವರ ಸರಕಾರದವರೂ ಅದಕ್ಕೆ ಹೊಂದಿಕೊಳ್ಳವಂತೆ ಕೆಲಸ ಮಾಡಬಹುದು. ಆದರೆ ಇಂದು ಇಂದು ಎಷ್ಟೋ ಕಡೆಗಳಲ್ಲಿ ದೇವಾಲಯಗಳು ಸಾಕಷ್ಟು ಆದಾಯವಿಲ್ಲದೆ ಕುಸಿದು ಬೀಳುವಂತಹ ಸ್ಥಿತಿಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಸರಿಯಾಗಿ ಪೂಜೆ ಪುನಸ್ಕಾರಗಳಿಲ್ಲದೆ ಇರುವ ದೇವಾಲಯಗಳಿಗೆ ಸಾಕಷ್ಟು ಆದಾಯ ಇಲ್ಲದಿರುವುದರಿಂದ ಸರಕಾರ ಇಂತಹ ದೇವಾಸ್ಥಾನಗಳಿಗೆ ಸಹಾಯ ಮಾಡಬೇಕು ಮತ್ತು ಇದರ ಕಡೆಗೆ ಹೆಚ್ಚು ಗಮನಕೊಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಹೇಳಿದ ಹಾಗೆ ಅನೇಕ ಪೂಜಾರಿಗಳು ಇನಾಂ ಲ್ಯಾಂಡುಗಳನ್ನು ಬಹಳ ವರ್ಷಗಳಿಂದಲೂ ಅನುಭವಿಸಿಕೊಂಡು ಬರುತ್ತಿದ್ದಾರೆ. ಗ್ರಾಮಾಂತರಗಳಲ್ಲಿರುವ ಕೆಲವರು ಅವರನ್ನು ಶೋಷಣೆ ಮಾಡುತ್ತಲೂ ಬರುತ್ತಿದ್ದಾರೆ. ಇದರಲ್ಲಿ ಸರಕಾರದ ಕೆಲವು ಸಣ್ಣ ಪುಟ್ಟ ಅಧಿಕಾರಿಗಳೂ ಶಾಮೀಲಾಗಿ ಅಲ್ಲಿ ಪಹಣಿ ಬರೆಯುವಾಗ ಅಲ್ಲಿ ಸುಮಾರು ಮುವತ್ತು ವರ್ಷಗಳಿಂದಲೂ ಅನುಭವಿಸಿಕೊಂಡು ಇದ್ದ ಪೂಜಾರಿಗಳನ್ನು ಅಲ್ಲಿರಲಿಲ್ಲ ಎಂದು ಬೇರೆಯವರ ಹೆಸರಿಗೆ ತಿದ್ದುಪಡಿ ಮಾಡಿರುವ ಪ್ರಕರಣಗಳೂ ಇವೆ, ಇದರಿಂದಾಗಿ ಕೆಲವು ಕಡೆ ಬಹಳ ಜನರು ಕಷ್ಟಪಡುವ ಸ್ಥಿತಿ ಬಂದಿದೆ. ಸರಕಾರದ ಅಧಿಕಾರಿಗಳು ನ್ಯಾಯವಾಗಿ ಯಾವ ರೀತಿ ಭೆಳೆ ಬರುತ್ತಿದೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡು ಬಡ ಜನರಿಗೆ ಅನ್ಯಾಯವಾಗದಂತೆ ನ್ಯಾಯವಾಗಿ ಎಲ್ಲರಿಗೂ ಸರಿಯಾದ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಸರಕಾರದಲ್ಲಿ ನಾನು ಕೇಳುತ್ತೇನೆ. ಯಾವುದೇ ಒಂದು ಸಮಾಜದಲ್ಲಿ ಬದಲಾವಣೆ ಮಾಡಬೇಕಾದರೆ ಅದರಿಂದ ಕೆಲವರಿಗೆ ತೊಂದರೆಯಾಗಬಹುದು. ಆದರೆ ಜನತೆಗೆ ಒಳ್ಳೆಯದನ್ನು ಮಾಡಲು ತರುವಾಗ ನಾವು ಅದನ್ನು ಶ್ಲಾಘನೆ ಮಾಡಬೇಕು, ಇಂತಹ ಕಾನೂನಿಗೆ ಎಲ್ಲರ ಬೆಂಬಲವೂ ಇರುತ್ತದೆ. ಉದಾಹರಣೆಯಾಗಿ ಸಣ್ಣ ಪುಟ್ಟ ಗೇಣಿದಾರರುಗಳಿಗೆ ಅವರು ಹತ್ತು ವರ್ಷಗಳಿಂದಲೂ ಅನುಭವಿಸಿಕೊಂಡು ಬರುತ್ತಿದ್ದರೆ ಅವರಿಗೆ ಹತ್ತು ವರ್ಷಗಳಷ್ಟು ಕಂತು ಎಂದು ಕೊಟ್ಟಿದ್ದಾರೆ ಮತ್ತು ೮-೧೦ ಎಕರೆ ಇರುವವರಿಗೆ ಗೇಣಿಯ ಒಂದು ಮಿತಿ ಎಂದು ಇನ್ನೂರು ರೂಪಾಯಿಗಳಷ್ಟು ಕೊಟ್ಟರೆ ಅವರು ಜೀವನ ಮಾಡಲು ಸಾಧ್ಯವೇ. ಇಂತಹ ಬಡಜನತೆಯ ಗತಿಯೇನು ಎನ್ನುವುದನ್ನು ಸರಿಯಾಗಿ ಯೋಚನೆ ಮಾಡಬೇಕು. ಹತ್ತು ಎಕರೆ ಇರುವವರಿಗೆ ಒಟ್ಟಿಗೆ ಸುಮಾರು ಎರಡೂವರೆ ಸಾವಿರ ಎಂದು ಕೊಟ್ಟರೆ ಅವರಿಗೆ ಸ್ವಲ್ಪ ಅನುಕೂಲವಾಗಬಹುದು. ಕೆಲವರಿಗೆ ೫೦೦-೧೦೦೦ ಎಕರೆಗಳಷ್ಟು ಭೂಮಿ ಇರಬಹುದು, ಇವರಿಗೇನೂ ತೊಂದರೆಯಾಗುವುದಿಲ್ಲ. ಆದರೆ ಬಡವರಾಗಿರುವ ರೈತರ ಬಗ್ಗೆ ಅವರಿಗೆ ಸಾಕಷ್ಟು ಹಣ ಬರುವಂತೆ ಸಹಾಯ ಮಾಡುವುದು ಅತ್ಯಗತ್ಯ.

ಕಡೆಯದಾಗಿ ನಾನು ಹೇಳುವುದು ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಹಾಗೆ ಅನೇಕ ದೇವಸ್ಥಾನಗಳಿಗೆ ಕೆಲವು ವ್ಯಕ್ತಿಗಳು ಉದಾರವಾಗಿ ಭೂಮಿಯನ್ನು ದೇವಸ್ಥಾನಕ್ಕೆ ಕೊಟ್ಟಿರುತ್ತಾರೆ. ಇದನ್ನು ಅಲ್ಲಿರುವ ಪೂಜಾರಿಗಳು ಬಹು

ಕಾಲದಿಂದಲೂ ಅನುಭವಿಸಿಕೊಂಡು ಬರುತ್ತಿದ್ದಾರೆ. ಇಂತಹವರಿಂದ ಭೂಮಿ ಪಡೆಯುವಾಗ ಇವರ ಪೂಜೆ ಇತ್ಯಾದಿಗಳಿಗೆ ಸಾಕಾಗುವಷ್ಟು ಆದಾಯ ಬರುವಂತೆ ಮತ್ತು ಅವರಿಂದ ತೆಗೆದುಕೊಳ್ಳುವ ಭೂಮಿಗೆ ಮಾರ್ಕೆಟ್ಟು ರೇಟಿನಲ್ಲಿ ಏನು ಬೆಲೆ ಇರುತ್ತದೆಯೋ ಅದರಂತೆ ಕೊಟ್ಟು ಇವರಿಗೆ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P. M.

† ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯಲ್ಲಿ ಏನು ಕೆಲವು ಸ್ವಾಗತಾರ್ಹವಾದ ವಿಷಯಗಳು ಇವೆ, ಅವುಗಳನ್ನು ಸ್ವಾಗತಿಸಬೇಕಾಗಿದೆ. ೧೯೫೪ರಲ್ಲಿ ಈ ಆಕ್ಟ ಬಂದರೂ ಕೂಡ ಇನ್ನೂ ಅದರ ಪ್ರತಿಫಲ ಅಥವಾ ಲಾಭ ರೈತರಿಗೆ ಸಿಕ್ಕಲಿಲ್ಲ. ಈಗ ಹೊಸದಾಗಿ ಏನು ವಿಧೇಯಕವನ್ನು ತಂದಿದ್ದಾರೆ ಮತ್ತು ಇದರಿಂದ ರೈತರಿಗೆ ಯಾವ ಲಾಭಗಳನ್ನು ದೊರಕಿಸಿಕೊಡಬೇಕೆಂದಿದ್ದಾರೆ, ಅದರಲ್ಲಿ ಹೈದರಾಬಾದ ಮತ್ತು ಮುಂಬೈ ಇನಾಂ ರದ್ದಿಯಾತಿ ಶಾಸನದಲ್ಲಿರುವ ಕೆಲವು ಅನುಕೂಲಗಳನ್ನು ಸೇರಿಸಿಲ್ಲ ಎಂದು ಹೇಳಬಹುದು. ಇದಕ್ಕೂ ಹೆಚ್ಚಿನ ಸುಧಾರಣೆಯನ್ನು ತರುವುದರ ಬಗ್ಗೆ ಮಾನ್ಯ ರೆವಿನ್ಯೂ ಸಚಿವರು ಮನಸ್ಸು ಮಾಡಿದ್ದರೆ ಅದು ಅಸಾಧ್ಯವೇನೂ ಆಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಎರಡು ವ್ಯತ್ಯಾಸಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಹಳೆಯ ಮೈಸೂರು ಭಾಗದಲ್ಲಿ ೧೯೫೪ರಲ್ಲಿ ಯಾವ ಆಕ್ಟ್ ಇತ್ತು, ಅದರಲ್ಲಿ ಜಾಲು ಗೇಣಿದಾರರು, ಮೂಲ ಗೇಣಿದಾರರು ಎಂದು ಎರಡು ತರಹ ಗೇಣಿದಾರರು ಇದ್ದರು. ಆದರೆ ಹೈದರಾಬಾದ ಭಾಗದಲ್ಲಿ ಕಾಬೀಜೆ-ಕದೀಮ ಎಂದು ಇದ್ದರು. ಹೈದರಾಬಾದ ಇನಾಂ ರದ್ದಿಯಾತಿ ಶಾಸನದ ಪ್ರಕಾರ ಇವರು ರಿಜಿಸ್ಟರ್ ಮಾಡಿಸಬೇಕಾದರೆ ಅವರಿಂದ ಯಾವ ಕಾಂಪೆನಸೇಷನ ಸಹ ತೆಗೆದುಕೊಳ್ಳುತ್ತಿರಲಿಲ್ಲ. ಕಾಬೀಜೆ-ಕದೀಮ್ ಎಂಬತಕ್ಕುಂಥ ಗೇಣಿದಾರರು ಹಳೆಯ ಮೈಸೂರು ಭಾಗದಲ್ಲಿ ಸಹ ಇದ್ದಾರೆ. ಆದ್ದರಿಂದ ಇವರಿಗೂ ಸಹ ಆ ಭಾಗದಲ್ಲಿ ಕೊಟ್ಟಿರುವ ಬೆನಿಫಿಟ್‌ನ್ನು ಕೊಟ್ಟರೆ ಜನ್ಮಜನ್ಮಕ್ಕೂ ತಮ್ಮನ್ನು ಜ್ಞಾಪಿಸಿಕೊಳ್ಳುತ್ತಾರೆ. ಮತ್ತು ಇಂತಹ ವರ್ಷದಲ್ಲಿ ಈ ಮನೆಯಲ್ಲಿ ಇಂತಹ ಒಂದು ಕಾಯಿದೆ ಆಯಿತು ಎಂದು ಅವರು ಜ್ಞಾಪಿಸಿಕೊಳುತ್ತಾರೆ. ಈ ವಿಚಾರದಲ್ಲಿ ಈಗಿನ ಆಕ್ಟ್‌ನಲ್ಲಿ ಏನು ಹೇಳಲಾಗಿದೆ ಮತ್ತು ಹೈದರಾಬಾದ ಇನಾಂ ರದ್ದಿಯಾತೆ ಶಾಸನದಲ್ಲಿ ಏನು ಹೇಳಲಾಗಿದೆ ಎಂಬ ಬಗ್ಗೆ ಹೇಳುವುದಾದರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕುಂಥ ರಿಲಿಜಿಯಸ್ ಅಂಡ ಛಾರಿಟ'ಬಲ್' ಅಬಾಲಿಷನ ಆಕ್ಟನ ಸೆಕ್ಷನ ೪ರಲ್ಲಿ ಖದೀಮು ಟಿನೆಂಟ್ಸು ಅಂದರೆ ಯಾರು ಎಂಬುದನ್ನು ನಿರ್ಧಾರವಾಗಿ ಕೊಟ್ಟಿದೆ. ಮಾನ್ಯ ಸದಸ್ಯರು ಈಗ ಏನು ಓದ ಬೇಕೆಂದಿದ್ದಾರೋ ಆ ಒಂದು ಡೆಫನಿಷನ್ ಇದರಲ್ಲಿ ಸಹ ಸೇರಿಸಲಾಗಿದೆ. ಖಾಬೀಜೆ-ಕದೀಮು ಟಿನೆಂಟ್ಸು—ಎಂದು ತಾವು ಏನು ಹೇಳುತ್ತಿದ್ದೀರೋ ಅದೇ ವರ್ಗಕ್ಕೆ ಖದೀಮು ಟಿನೆಂಟ್ಸು ಸಹ ಬರುತ್ತಾರೆ.

ಶ್ರೀ ವಿ. ಎನ್ ಪಾಟೀಲ್.—೧೯೫೪ರ ಆಕ್ಟನಲ್ಲಿ ಏನು ಇದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಈಗ ತಾವು ಕಾಂಪೆನಸೇಷನ ಹಣವನ್ನು ಇಷ್ಟು ಕೊಡ ಬೇಕೆಂದು ಏನು ಹೇಳುತ್ತಿದ್ದಿರೋ, ಆ ವಿಚಾರದಲ್ಲಿ ಹೈದರಾಬಾದ ಆಕ್ಟನಲ್ಲಿ ಏನು ಹೇಳಲಾಗಿದೆ, ಆ ಒಂದು ಸ್ಪಿರಿಟ ಇದರಲ್ಲಿ ಬರಲಿಲ್ಲ. ಆ- ಆಕ್ಟನಲ್ಲಿ ಏನು ಹೇಳಲಾಗಿದೆ ಎಂದರೆ, ಖಾಬೀಜೆ-ಕದೀಮ ಟಿನೆಂಟ್ಸ ರಿಜಿಸ್ಟರ ಮಾಡಬೇಕಾದರೆ ಒಂದು ನಯಾಪೈಸೆ ಸಹ ಕೊಡಬೇಕಾಗಿಲ್ಲ. ಆ ಒಂದು ಅನುಕೂಲ ಈ ಹೊಸ ಆಕ್ಟನಲ್ಲಿ ಇಲ್ಲ. ಇಲ್ಲಿ ಹೇಳರುವ ಪ್ರಕಾರ ಪ್ರೊಟಿಕಟಿಡ ಟಿನೆಂಟ್ಸ ಆಗಲಿ, ನಾನ್-ಪ್ರೊಟೆಕ್ಟೆಡ ಟಿನೆಂಟ್ಸ ಆಗಲ್ಲಿ, ಪರ್ಮನೆಂಟ ಟಿನೆಂಟ್ಸ ಆಗಲಿ ಪ್ರಿಮಿಯಮ ತುಂಬಬೇಕಾಗುತ್ತದೆ ಆದರೆ ಹೈದರಾಬಾದ ಆಕ್ಟನಲ್ಲಿ ಯಾವ ರೀತಿ ಇತ್ತು ಎಂದರೆ, ಖಾಬೀಜೆ-ಕದೀಮ ಟಿನೆಂಟ್ಸಿಗೆ ಇನಾಂದಾರರಿಗೆ ಇದ್ದಷ್ಟೇ ಈಕ್ವಲರೈಟ್ಸ ಇತ್ತು. ಮತ್ತು ಅವರು ರಿಜಿಸ್ಟರ ಮಾಡಬೇಕಾದರೆ. ಎಷ್ಟು ಹಣ ಕೊಡತಕ್ಕದ್ದು ಎಂದರೆ ಕೇವಲ ಯುಸುರಿಯನ ಇಂಟರೆಸ್ಟ ಚಾರ್ಜ ಮಾಡುತ್ತಿದ್ದಾರೆ. ಆದರೆ ಇಲ್ಲಿ ಒಂದು ಎಕರೆಗೆ ೩೩೦ ರೂಪಾಯಿ ಎಂದು ಹೇಳಿದ್ದೀರಿ. ಆದರೆ ಅಲ್ಲಿಯ ಆಕ್ಟನಲ್ಲಿ ಮ್ಯಾಕ್ಸಿಮಮ್ ಎಂದರೆ ೨೫ ಟೈಮ್ಸು ಆಫ ದಿ ಲ್ಯಾಂಡ ರೆವಿನ್ಯೂ ಎಂದು ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇರಿಗೇಟೆಡ ಲ್ಯಾಂಡ ಆಗಿದ್ದರೆ ಇಷ್ಟು, ಖುಷ್ಕಿ ಜಮೀನಾಗಿದ್ದರೆ ಇಷ್ಟು ಎಂದು ಇದರಲ್ಲಿ ಸಹ ಹೇಳಲಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಆದರೆ ಹೈದರಾಬಾದ ಆಕ್ಟನಲ್ಲಿ ಇರಿಗೇಟೆಡ ಲ್ಯಾಂಡ ಆದರೆ ಇಷ್ಟು ಖುಷ್ಕಿ ಜಮೀನಾದರೆ ಇಷ್ಟು, ಬಾಗಾಯ್ತು ಜಮೀನಾದರೆ ಇಷ್ಟು ಎಂದು ಹೇಳಲಾಗಿದ್ದರೂ ಸಹ ಇರಿಗೇಟೆಡ ಲ್ಯಾಂಡ್ಸಗೆ ಹೆಚ್ಚು ಇರುತ್ತಿತ್ತು. ಬಾಗಾಯ್ತು ಜಮೀನಿಗೆ ೮ ರೂಪಾಯಿ ಇದ್ದರೆ ಖುಷ್ಕಿ ಜಮೀನಿಗೆ ಎರಡು ಅಥವಾ ಒಂದೂವರೆ ರೂಪಾಯಿ ಇರುತ್ತಿತ್ತು. ಒಟ್ಟಿನಲ್ಲಿ ಮ್ಯಾಕ್ಸಿಮಮ ೨೫ ಟೈಮ್ಸು ಆಫ ದಿ ಲ್ಯಾಂಡರೆವಿನ್ಯೂ ಎಂದು ಇದೆ. ಈ ರೀತಿ ಇದ್ದರೂ ಸಹ ಪ್ರಿಮಿಯಮ ಕೊಡಬೇಕಾಗಿಲ್ಲ. ಇಷ್ಟೊಂದು ಸವಲತ್ತುಗಳು ೧೯೫೪ರ ಆಕ್ಟನಲ್ಲಿಯೇ ಇತ್ತು. ರೈತರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದಲೇ ಆ ಕಾಲದಲ್ಲಿ ಇಷ್ಟೊಂದು ಪ್ರಗತಿಪರವಾಗಿ ಶಾಸನ ಮಾಡಲಾಗಿತ್ತು. ಆದರೆ ಈಗ ಅಂದರೆ ೧೯ ವರ್ಷಗಳ ನಂತರ ತರುತ್ತಿರುವ ಈ ಒಂದು ವಿಧೇಯಕದಲ್ಲಿ ಅದಕ್ಕಿಂತ ಹೆಚ್ಚು ಅನುಕೂಲವಿರುವ ರೀತಿಯಲ್ಲಿ ತರಬೇಕಾಗಿತ್ತು. , ಆದರೆ ಇಲ್ಲಿ ಒಂದು ಎಕರೆಗೆ ೩೩೦ ರೂಪಾಯಿ ಕೊಡಬೇಕೆಂದು ಹೇಳಿರುವುದನ್ನು ನೋಡಿದರೆ, ಅದು ಬಹಳ ಜಾಸ್ತಿ ಎಂದು ಕಾಣುತ್ತದೆ. ಅದನ್ನು ೫೦ ಪರ್ಸೆಂಟಗಾದರೂ ಇಳಿಸಿದರೆ ರೈತರಿಗೆ ನಿಜವಾಗಿ ಸವಲತ್ತು ಕೊಟ್ಟಂತಾಗುತ್ತದೆ. ಇದುವರೆಗೆ ರೈತಾಪಿ ಜನರಿಗೆ ಆಗಿರುವ ಅನ್ಯಾಯಗಳನ್ನು ನೋಡಿದರೆ ಸರ್ಕಾರದವರು ಫ್ರೀ ಆಫ ಕಾಸ್ಟೇ ಕೊಡಬೇಕಾಗಿತ್ತು. ಆದರೆ ಫ್ರೀಯಾಗಿ ಕೊಟ್ಟರೆ ಅವರ ಹಕ್ಕಿಗೆ-ಲೀಗಲಿ ಅಂಡ್ ಟೆಕ್ನಿಕಲಿ ಡಿಫಿಕಲ್ಟಿ ಬರುತ್ತದೆಂದು ತಾವು ಚಾರ್ಜ ಮಾಡುತ್ತಿರಬಹುದೆಂದು ಕಾಣುತ್ತದೆ. ಶ್ರೀಮಾನ್ ಶಾಮಣ್ಣನವರು ಮತ್ತು ಶ್ರೀಮಾನ್

ಮಂಜುನಾಥ ಅವರು ಮಾತನಾಡುವಾಗ ತಮ್ಮ ವ್ಯಾಖ್ಯಾನದಲ್ಲಿ ಎರಡು ವಿಷಯ ಹೇಳಿದರು. ಏನೆಂದರೆ ಅರ್ಚಕ ವರ್ಗಕ್ಕೆ ೧೦೦ ಟೈಮ್ಸ್ ಎಂದು ಏನು ಇಟ್ಟಿದ್ದಾರೆ. ಅದು ಬಹಳ ಅನ್ಯಾಯ ಎಂದು ಹೇಳಿದರು. ಬೆಳಗ್ಗೆ ಎದ್ದು ದಿನವೂ ಪೂಜಾರಿಗಳು ದೇವರಿಗೆ ಏನು ಪೂಜೆ ಮಾಡುತ್ತಾರೆ, ಅದನ್ನು ನಂಬಿಕೆಯಿಂದ ಮಾಡುತ್ತಾರೆಯೇ ವಿನಃ ಬಲವಂತಕ್ಕಾಗಿಯೇ ಆಗಲಿ, ಪ್ರತಿಫಲ ಸಿಗಲಿ ಎಂಬ ದೃಷ್ಟಿಯಿಂದಲಾಗಲೀ ಮಾಡುವುದಿಲ್ಲ ಈ ಒಂದು ಫಂಡಮೆಂಟಲ ಪ್ರಿನ್ಸಿಪಲ್‌ನ್ನು—ಎಲ್ಲರೂ ತಿಳಿದುಕೊಳ್ಳಬೇಕು. ದೇವರಲ್ಲಿ ಭಕ್ತಿಯಿರುವುದರಿಂದ ಪೂಜೆ ಮಾಡುತ್ತಾರೆಯೇ ಹೊರತು ದುಡ್ಡಿಗಾಗಿ ಪೂಜೆ ಮಾಡುವುದಿಲ್ಲ. ಆದ್ದರಿಂದ ಅವರಿಗೇನಾದರೂ ಭಕ್ಷೀಸ ಕೊಡುತ್ತಿದ್ದರೆ ಅದು ಅನ್ಯಾಯ ಎಂದು ಭಾವಿಸಬಾರದು.

ಶ್ರೀ ಕೆ. ಬಿ. ಶಿವಯ್ಯ.—ಪೂಜಾರಿಗಳಿಗೆ ಕಾಣಿಕೆ ಬರುತ್ತದೆ. ಅವರು ೧೦೦ ಟೈಮ್ಸ್ ಕೊಡಬಹುದು.

ಶ್ರೀ ವಿ. ಎನ್. ಪಾಟೀಲ.—ಅರ್ಚಕರಿಗೆ ೨೪ ಗಂಟೆ ದೇವರ ದರ್ಶನವಾಗುತ್ತದೆ. ಆದ್ದರಿಂದ ಅವರಿಗೆ ದೇವರ ಆಶೀರ್ವಾದ ಇರುತ್ತದೆ. ಹೀಗಿರುವಾಗ ಅವರಿಗೆ ಮಾನವನ ಕಡೆಯಿಂದ ಸಹಾಯ ಏತಕ್ಕೆ ಬೇಕಾಗುತ್ತದೆ? ಈ ದೃಷ್ಟಿಯಿಂದ ಪೂಜಾರಿಗಳು ಓನರ್‌ಷಿಪ ಪ್ರೀಮಿಯಂಗೆ ಸಂಬಂಧಪಟ್ಟಹಾಗೆ ೧೦೦ ಟೈಮ್ಸ್ ಲ್ಯಾಂಡ ರೆವಿನ್ಯೂ ಅಮೌಂಟ ಕೊಡಬೇಕೆಂದು ಏನು ಇಟ್ಟಿದ್ದಾರೆ ಅದು ಕರೆಕ್ಟಾಗಿದೆ, ಅಷ್ಟನ್ನೇ ಇಟ್ಟುಕೊಳ್ಳಬೇಕು. ಅದನ್ನು ಬದಲಾವಣೆ ಮಾಡಬಾರದು ಎಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ಮಾನ್ಯ ಸಚಿವರು ೧೯೭೨ನೇ ಇಸವಿ ಮೈಸೂರು, ಬೊಂಬಾಯಿ ಮತ್ತು ಹೈದರಾಬಾದ ಏರಿಯಾ ಥಾರಿಟಬಲ ಇನಸ್ಟಿಟ್ಯೂಷನ ಆಕ್ಟಿನಲ್ಲಿ ಪ್ರೊಟೆಕ್ಟೆಡ ಟಿನೆಂಟ, ಪರ್ಮನೆಂಟ ಟಿನೆಂಟ ಕ್ವಾಸಿ ಪರ್ಮನೆಂಟ ಟಿನೆಂಟ ಮತ್ತು ಖದೀಮ ಟಿನೆಂಟ ಇತ್ಯಾದಿ ಟಿನೆಂಟಗಳಿಗೆ ಏನು ಪ್ರೀಮಿಯ ರೇಟು ಇಟ್ಟಿದ್ದೀರೋ ಅದೇ ರೇಟನ್ನೇ ಇದಕ್ಕೂ ಇಟ್ಟರೆ ಒಳ್ಳೆಯದು. ಇದರಲ್ಲಿ ಹಳೆಯ ಮೈಸೂರಿನ ಟಿನೆಂಟಗಳಿಗೆ ಸ್ವಲ್ಪ ಅನ್ಯಾಯವಾಗಿದೆ. ಹೈದರಾಬಾದ, ಬೊಂಬಾಯಿ ಕರ್ನಾಟಕದ ಟಿನೆಂಟಗಳಿಗೆ ಅನ್ಯಾಯವಾಗಿಲ್ಲ. ಬೊಂಬಾಯಿ ಟಿನೆನ್ಸಿ ಆಕ್ಟ ಬಂದ ಮೇಲೆ ಎಷ್ಟೋ ಜನ ಪ್ರಿವಿಲೇಜ್ ಲೈಫ್ ಎಂಜಾಯ ಮಾಡುತ್ತಿದ್ದ ಭೂಮಾಲೀಕರಿಗೆ ಒಂದು ಪರಿಣಾಮ ಉಂಟಾಯಿತು. ಈಗ ಕಳೆದ ೨೫ ವರ್ಷಗಳಿಂದ ಕೆಲವು ವೆಸ್ಟೆಡ ಇಂಟರೆಸ್ಟ ಇರತಕ್ಕ ಜನಗಳು ಅಧಿಕಾರದಲ್ಲಿ ಇದ್ದದ್ದರಿಂದ ಕೆಲವು ಮೂಲಭೂತ ಬದಲಾವಣೆಗಳನ್ನು ಮಾಡುವುದಕ್ಕೆ ಅವಕಾಶವಾಗಲಿಲ್ಲ. ಈಗ ತಮ್ಮ ಕೈಯಲ್ಲಿ ಅಧಿಕಾರ ಬಂದಿದೆ ಈಗ ತಮ್ಮ ಕಾಲದಲ್ಲಿ ರೈತರಿಗೆ ಹೆಚ್ಚು ಅನುಕೂಲವನ್ನು ಮಾಡಬೇಕು. ಹಿಂದೆ ಏನು ರೈತರಿಗೆ ಅನ್ಯಾಯವಾಗುತ್ತಿತ್ತು. ಅದಕ್ಕೆ ಈಗ ಪ್ರತಿಫಲ ಸಿಕ್ಕುತ್ತಿದೆ. ಅವರಿಗೆ ಫುಲ್ ಫ್ರೀಡಂ ಈಗ ಸಿಕ್ಕಿದೆ. ಹೊಸ ಗಾಳಿ ಬೀಸಿ ಒಂದು

ಹೊಸ ವಾತಾವರಣ ಉಂಟಾಗಿದೆ. ಇಂಥಾ ಒಂದು ತಮ್ಮ ಅಧಿಕಾರಾವಧಿಯಲ್ಲಿ ರೈತರಿಗೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಬೇಕು. ಅದನ್ನು ತಾವು ಮಾಡುತ್ತೀರಿ ಎಂದು ನನಗೆ ನಂಬಿಕೆ ಇದೆ.ತಾವು ಯಾವ ಪ್ರೆಜರಿಗೂ ಒಳಗಾಗುವುದಿಲ್ಲ. ಕೆಲವರು ತಮಗೆ ದೇವರ ಹೆದರಿಕೆಯನ್ನು ತೋರಿಸುತ್ತಾರೆ. ಆದ್ದರಿಂದ ತಾವು ಒಂದು ಹೆಜ್ಜೆಯನ್ನು ಎಲ್ಲಿ ಹಿಂದಿಡುತ್ತೀರೋ ಎನ್ನುವ ಅನುಮಾನ ನಮಗೆ ಉಂಟಾಗಿದೆ. ಆದಕಾರಣ ತಾವು ಯಾವುದಕ್ಕೂ ಹೆದರದೆ ಒಂದು ಹೆಜ್ಜೆಯನ್ನು ಮುಂದಿಟ್ಟು ಈ ಒಂದು ಕಾನೂನನ್ನು ರೈತರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಸ್ವಲ್ಪ ಹೆಚ್ಚು ಚರ್ಚೆ ಆಗಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಈ ದಿವಸ ನಾವು ಒದಗಿಸಿ ಕೊಟ್ಟಿರತಕ್ಕ ತಿದ್ದುಪಡಿಗಳನ್ನು ನೋಡಿ ಟೀಕೆ ಕಡಿಮೆ ಆಯಿತು ಎಂದು ನನ್ನ ಭಾವನೆ. ಶ್ರೀಮಾನ ಕಾಗೋಡು ತಿಮ್ಮಪ್ಪನವರು ಏನು ಟೀಕೆಗಳನ್ನು ಮಾಡಿದರೋ ಆ ಟೀಕೆಗಳಿಗೆ ನಾವು ತಂದಿರತಕ್ಕ ತಿದ್ದುಪಡಿಗಳೇ ಉತ್ತರ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ ಕಾಗೋಡು ತಿಮ್ಮಪ್ಪನವರು ಮೈಸೂರು ರಾಜ್ಯದಲ್ಲಿ ಎಲ್ಲಿ ಗೇಣಿದಾರರ ಒಂದು ದೊಡ್ಡ ಆಂಧೋಳನ ನಡೆಯಿತೋ ಆ ಪ್ರದೇಶದಿಂದ ಬಂದು ಗೇಣಿದಾರರ ಹಿತ ರಕ್ಷಣೆಯನ್ನು ಮಾಡುವುದರಲ್ಲಿ ಸಾಕಷ್ಟು ಆಸ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನಾನು ಎರಡು ಮೂರು ಸಂದರ್ಭಗಳಲ್ಲಿ ನೋಡಿ ತಿಳಿದು ಕೊಂಡಿದ್ದೇನೆ. ಆದ್ದರಿಂದ ಅಲ್ಲಿರತಕ್ಕ ನ್ಯೂನತೆಗಳು ಏನಿವೆ ಅವುಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇನ್ನು ಮುಂದೆ ಗೇಣಿದಾರರಿಗೂ ಭೂಮಾಲೀಕರಿಗೂ ಮತ್ತು ಭೂಮಾಲೀಕರಿಗೂ ಗೇಣಿದಾರರಿಗೂ ಏನಾದರೂ ವ್ಯಾಜ್ಯಗಳು ಬಂದಾಗ ಅವುಗಳನ್ನು ತೀರ್ಮಾನ ಮಾಡತಕ್ಕ ಜವಾಬ್ದಾರಿಯನ್ನು ಟ್ರೈಬ್ಯುನಲಗೆ ವಹಿಸಬೇಕು ಎಂದು ಅವರು ಸಲಹೆ ಕೊಟ್ಟಿದ್ದಾರೆ. ಭೂಸಾಸನಕ್ಕೆ ತಿದ್ದುಪಡಿಯನ್ನು ಮಂಡಿಸಲ್ಪಟ್ಟು ಅದನ್ನು ಮಸೂದಾ ಕಾನೂನಿಗೆ ಆಳವಡಿಸಿ ಆದರ ರೂಪರೇಷೆಗಳು ಯಾವ ರೀತಿಯಾಗುತ್ತದೆ,ಎನ್ನುವುದನ್ನು ಖಚಿತವಾಗಿ ಈ ಸಭೆ ನಿರ್ಧರಿಸಿದ ಮೇಲೆ ಈ ವಿಧವಾದ ವಿವಾದಗಳನ್ನೂ ಕೂಡ ಅದಕ್ಕೆ ವಹಿಸಿ ಕೊಡುವುದು ಸೂಕ್ತ. ಮೊದಲೇ ಇದನ್ನು ಇಲ್ಲಿ ಸೇರಿಸುವುದಕ್ಕಿಂತ ಅಂತಿಮವಾಗಿ ಅದರ ರೂಪರೇಷೆಗಳು ಯಾವ ರೀತಿ ಆಗುತ್ತವೆ ಎಂಬುದನ್ನು ನೋಡಿಕೊಂಡು ಅದನ್ನು ಇದರಲ್ಲಿ ಸೇರಿಸುವುದು ಒಳ್ಳೆಯದು ಎಂದು ಈಗ ಅದನ್ನು ಇಲ್ಲಿ ಸೇರಿಸುವುದಕ್ಕೆ ನಾನು ಹಿಂದೆಗೆದಿದ್ದೇನೆ.

ಶ್ರೀಮಾನ್ ಶಾಮಣ್ಣನವರು ಅನೇ ವಿಧಿಯಲ್ಲಿ ಕ್ಲಾಸ ತಂದಿರತಕ್ಕದ್ದು ಪ್ರೆಸ್‌ಕ್ರೈಬ್ ಮಾಡುವುದು ಎನ್ನುವುದು ಅನಿರ್ದಿಷ್ಟವಾಗಿದೆ. ಅದನ್ನು ನಿರ್ದಿಷ್ಟವಾಗಿ ಹೇಳಿ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅನೇಕ ಜನ ಅನುಕೂಲಸ್ಥರು ದೇವಸ್ಥಾನದ ಜಮೀನನ್ನು ಹರಾಜಿನಲ್ಲಿ ಮತ್ತು ನಾನಾವಿಧವಾದ ಕೆಲವು ಕ್ರಮಗಳನ್ನು ಅನುಸರಿಸಿ

ಅವರ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಅನುಕೂಲಸ್ಥರು ತಮಗೆ ಸ್ವಂತ ಜಮೀನು ಇದ್ದು ಅದರ ಜೊತೆಗೆ ದೇವಸ್ಥಾನದ ಜಮೀನನ್ನು ತೆಗೆದುಕೊಂಡ್ದಿದ್ದರೆ ಅವರಿಗೆ ಮಿತಿ ಹಾಕಬೇಕು ಎಂದು ೨೭ (ಎ) ಗೆ ತಿದ್ದುಪಡಿ ತಂದಿರತಕ್ಕ ಉದ್ದೇಶ. ಅದಕ್ಕೋಸ್ಕರ ಸಂದರ್ಭ ನೋಡಿ ಭೂಶಾಸನದಲ್ಲಿ ತರತಕ್ಕಂಥಾ ಗರಿಷ್ಠ ಮಿತಿ ಏನಿದೆ ಅದಕ್ಕಿಂತ ಹೆಚ್ಚು ಮಾಡುವುದು ಸರಿಯಲ್ಲ ಎಂದು ನಿರ್ದಿಷ್ಟವಾಗಿ ಪ್ರಿಸ್‌ಕ್ರೈಬ್ ಮಾಡಬೇಕು ಎಂದು "any land held by him exceed such extent as may be prescribed" ಎಂದು ಅನಿರ್ದಿಷ್ಟವಾಗಿ ಹಾಕಿದೆ. ಅದನ್ನು ನಿರ್ದಿಷ್ಟವಾಗಿ ರೂಲ್ಸ್‌ನಲ್ಲಿ ಪ್ರಿಸ್‌ಕ್ರೈಬ್ ಮಾಡಬೇಕು ಎಂದು ಆ ರೀತಿ ಹಾಕಿದೆ. ಆ ರೀತಿ ಆದು ಅನಿರ್ದಿಷ್ಟವಾಗಿ ಇದ್ದರೂ ಕೂಡ ರೂಲ್ಸ್ ತರುವ ಸಂದರ್ಭದಲ್ಲಿ ಅದನ್ನು ನೋಡಿ ಯಾವ ರೀತಿ ಎಷ್ಟು ಕಡೆ ದುರುಪಯೋಗ ಮಾಡಿ ಅನುಕೂಲಸ್ಥರು ದೇವಸ್ಥಾನದ ಜಮೀನನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ನೋಡಿ ಸ್ವಂತ ಜಮೀನು ಮತ್ತು ದೇವಸ್ಥಾನದ ಜಮೀನು ಎರಡು ಸೇರಿಸಿದರೆ ಎಷ್ಟು ಇರಬೇಕು ಎಂಬುದನ್ನು ನಿರ್ಧರಿಸುವುದ್ಕೋಸ್ಕರವಾಗಿ ಅದನ್ನು ಆ ರೀತಿ ಅನಿರ್ದಿಷ್ಟವಾಗಿ ಹಾಕಿದ್ದೇವೆ. ಆ ಬಗ್ಗೆ ನಾನು ಈ ಸಭೆಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಎರಡೂ ಸೇರಿಸಿ ಗರಿಷ್ಠ ಮಿತಿ ಭೂಶಾಸನದಲ್ಲಿ ಯಾವುದು ತರುತ್ತೇವೆ ಅದಕ್ಕಿಂತ ಹೆಚ್ಚು ಇಲ್ಲದ ಹಾಗೆ ನೋಡಿಕೊಳ್ಳುತ್ತೇವೆ. ಸಾಧ್ಯವಾದರೆ ಅದನ್ನು ಕಡಿಮೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡಬೇಕೆಂದಿದ್ದೇನೆ. ಆದರೆ ಗರಿಷ್ಠ ಮಿತಿಯನ್ನು ಮೀರುವುದಿಲ್ಲ ಎಂದು ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀಮಾನ್ ಶಾಮಣ್ಣನವರು ಇನ್ನೊಂದು ಏಚ್ಚರಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ ಶಾಸನವನ್ನು ಸಭೆಯಮುಂದಿಟ್ಟು ಅದನ್ನು ಪಾಸು ಮಾಡಿಸಿಕೊಂಡು ಶಾಸನವನ್ನು ಮಾಡುವುದು ಮುಖ್ಯವಲ್ಲ, ಅದನ್ನು ಜಾರಿಗೆ ತರಬೇಕು ಎಂದು ಹೇಳಿದ್ದಾರೆ. ಅದು ರಾಜ್ಯದ ಹಿಂದಿನ ಅನುಭವ ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕು. ಅವರು ಆ ಅನುಮಾನವನ್ನು ಇಟ್ಟುಕೊಳ್ಳಬೇಕಾಗಿಲ್ಲ, ಭೂಶಾಸನದ ವಿಷಯದಲ್ಲಾಗಲೀ, ಗೇಣಿದಾರರನ್ನು ರಕ್ಷಣೆ ಮಾಡತಕ್ಕ ವಿಷಯದಲ್ಲಾಗಲೀ ಗೇಣಿದಾರರು ಭೂಮಾಲೀಕರಾಗಿ ಅವರಿಗೆ ಸ್ವಂತ ಗಾಳಿ ಬೀಸುವ ಹಾಗೆ ಮಾಡಬೇಕು ಎಂಬುದು ನಮ್ಮ ಸರ್ಕಾರದ ನಿರ್ದಿಷ್ಟವಾದ ನೀತಿಯಾಗಿರುವುದರಿಂದ, ಇದು ಬರೀ ಕಾನೂನು ರೂಪದಲ್ಲಿ ಉಳಿಯುವುದಿಲ್ಲ. ಅದು ಬೇಗ ಕಾರ್ಯಗತವಾಗುತ್ತದೆ ಎಂದು ನಾನು ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಮಂಜುನಾಥರವರು ಕೂಡ ದೇವಸ್ಥಾನದ ಜಮೀನುಗಳನ್ನು ಗೇಣಿಗೆ ತೆಗೆದುಕೊಂಡಿದ್ದವರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇನ್ನು ದೇವಸ್ಥಾನದ ಜಮೀನಿಗೆ ಪರಿಹಾರ ಕೊಡುವಾಗ ಮಾರ್ಕೆಟ್ ರೇಟು ಕೊಡಿ ಎಂದು ಹೇಳಿದ್ದಾರೆ. ಆ ವಿಷಯ ಈ ತಿದ್ದು

ಪಡಿಯಲ್ಲಿ ತಂದಿಲ್ಲ. ಇಲ್ಲಿ ತಂದಿರತಕ್ಕಂತಹ ವಿಷಯ ಪೂಜಾರಿಗಳಿಂದ ಅಥವಾ ಗೇಣಿದಾರರಿಂದ ತೆಗೆದುಕೊಳ್ಳತಕ್ಕಂತಹ ವಿಷಯ ಇದೆ. ಇದರಲ್ಲಿ ಭೂಮಾಲೀಕರ ವಿಷಯ ಬರುವದಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಯಾರು ಆರ್ಚಕರು ಬಡವರು ಇದ್ದಾರೆ ಅವರಿಗೆ ಕೊಡಿ. ಆದರೆ ಶ್ರೀಮಂತ ವರ್ಗದ ಜನ ಏನಿದ್ದಾರೆ ಅವರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಉದಾಹರಣೆಗೆ ಒಂದು ಕಡೆ ತೋಟ ತಳವಾರಿಗೆ ಸಂಬಂಧ ಪಟ್ಟ ಖುಷ್ಕಿ ಜಮೀನನ್ನು ೧೫—೨೫ ಸಾವಿರ ರೂಪಾಯಿ ಕೊಟ್ಟು ಕೊಂಡುಕೊಂಡಿದ್ದಾರೆ. ಎಷ್ಟೋ ಕಡೆಗಳಲ್ಲಿ ಪರಭಾರೆ ಮಾಡಿದ್ದಾರೆ. ಆದ್ದರಿಂದ ದೇವಸ್ಥಾನದ ಜಮೀನುಗಳು ಸಹ ಶ್ರೀಮಂತರ ವಶದಲ್ಲಿ ಬಹಳ ಇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರು ಹೇಳುವಂತಹ ಜಮೀನಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಅದು ಅವರ ಸರ್ವಿಸಿಗೆ ಸಂಬಂಧಪಟ್ಟ ವಿಷಯ. ಅದನ್ನು ಮಾರಬಾರದು ಎಂದು ಇದೆ. ಒಂದು ವೇಳೆ ಮಾರಿದರೂ ಅದು ಅಕ್ರಮವೆಂದು ಗೊತ್ತು ಮಾಡುವುದಕ್ಕೆ ಅವಕಾಶ ಇದೆ. ಅನೇಕ ಶ್ರೀಮಂತರು ಕೆಲವಾರು ಕ್ರಮಗಳನ್ನು ಅನುಸರಿಸಿ ದೇವಸ್ಥಾನದ ಜಮೀನುಗಳನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಬೇರೆ ಬೇರೆ ರೀತಿಯ ಟೆನೆಂಟ್ಸಿಗೆ ಯಾವ ರೀತಿ ವಿಧೇಯಕ ಮಾಡಬೇಕೆಂದು ಇದೆ. ಆದರೆ ಇಲ್ಲಿ ಮುಖ್ಯವಾಗಿರುವುದು ಪೂಜಾರಿಗಳಿಂದ ಎಷ್ಟು ಹಣವನ್ನು ತೆಗೆದುಕೊಳ್ಳಬೇಕೆಂಬುದು. ಆದರಲ್ಲಿ ಖುಷ್ಕಿ ಜಮೀನಾಗಿದ್ದರೆ ಭೂಕಂದಾಯದ ೧೦೦ರಷ್ಟು ಮತ್ತು ಎರಡುಬೆಳೆ ಬೆಳೆಯುವ ಜಮೀನಾಗಿದ್ದರೆ ೬೦೦ ರೂಪಾಯಿ ಎಂದು ಇದೆ. ಈಗ ಕಂದಾಯದ ೧೦೦ರಷ್ಟು ಹಾಕಿರುವುದು ಹೆಚ್ಚು ಎಂದು ಮಾನ್ಯ ಶಾಮಣ್ಣನವರು ಹೇಳಿದರು. ಮೊನ್ನೆ ಈ ಸಭೆಯಲ್ಲಿ ಮಂಜೂರಾಗಿರುವ ಕಾನೂನಿನಲ್ಲಿ ಸಹ ಇದೇ ತರಹ ಗೊತ್ತು ಮಾಡಲಾಗಿದೆ. ಇದಕ್ಕೆ ಬೇರೆ ರೀತಿಯಲ್ಲಿ ಮಾಡಿದರೆ ಅದು ಸಮನ್ವಯವಾಗುವದಿಲ್ಲ. ಇನ್ನು ೧೦ ವರ್ಷಗಳ ಕಂತು ಕೊಟ್ಟಿರುವುದು ಅವರಿಗೆ ಹೊರೆ ಆಗಬಾರದು ಎಂದು. ಇನ್ನು ಮಾನ್ಯ ವಿ. ಎನ್. ಪಾಟೀಲರು ಕದೀಮು ರೈತರ ಬಗ್ಗೆ ಏನೊಂದು ತೆಗೆದುಕೊಳ್ಳದೆ ಮಾಲೀಕತ್ವ ಕೊಡಬೇಕೆಂದು ಸಲಹೆ ಮಾಡಿದ್ದಾರೆ. ಇಲ್ಲಿ ತಂದಿರತಕ್ಕಂತಹ ಬಿಲ್ಲಿನಲ್ಲಿ ಕದೀಮು ರೈತರ ವಿಷಯವಿಲ್ಲ. ಹಿಂದೆ ಕದೀಮು ರೈತರಿಗೆ ಮಾಲೀಕತ್ವ ಕೊಡುವಾಗ ಕಂದಾಯದ ಇಂತಿಷ್ಟು ಎಂದು ಮಾಡಿದೆ. ಅಲ್ಲಿ ತರಿ ಮತ್ತು ಖುಷ್ಕಿ ಕಂದಾಯದ ವ್ಯತ್ಯಾಸವಿಲ್ಲ. ಇನ್ನು ತರಿಯಾದರೆ ದೇವಸ್ಥಾನಕ್ಕೆ ಆದಷ್ಟು ಹೆಚ್ಚು ಹಣ ಸಂಗ್ರಹಿಸುವ ದೃಷ್ಟಿಯಿಂದ ಈ ರೀತಿ ಗೊತ್ತು ಮಾಡಲಾಗಿದೆ.

ಇನ್ನು ಶ್ರೀಮಾನ ಪಾಟೀಲರವರು ಒಂದು ಮಾತು ಹೇಳಿದರು. ಪ್ರತಿಯೊಂದು ಸೆಕ್ಷನ್ ಸಹ ಸೆಲ್ಫ್ ಕಂಟೈನ್ಡ್ ಆಗಿರಬೇಕು. ಅಧಿಕಾರಿಗಳ ಡಿಸ್ಕ್ರಿಶನ್ಸಿಗೆ ಯಾವುದೂ ಒಳಪಡುವ ಹಾಗೆ ಇರಬಾರದು ಮತ್ತು ಕಾನೂನನ್ನು ಆ ರೀತಿ ಅಚ್ಚುಕಟ್ಟು ಮಾಡಬೇಕೆಂದು ಹೇಳಿದರು. ಅದನ್ನು ಜಾರಿಗೊಳಿಸುವ ಕ್ರಮವನ್ನು ಸಹ

ಸಮರ್ಪಕವಾಗಿ ಮಾಡಬೇಕೆಂದು ತಿಳಿಸಿದ್ದಾರೆ. ಈ ಸಭೆ ಈ ವಿಷಯದಲ್ಲಿ ಆಸಕ್ತರಾಗಿರುವದರಿಂದ ಮತ್ತು ಬುದ್ಧಿವಂತರಿಂದ ಕೂಡಿರುವದರಿಂದ ಸರ್ಕಾರ ಸ್ವಲ್ಪವೂ ಎಚ್ಚರ ತಪ್ಪದೆ, ಇಂಥ ಕಾನೂನು ಸಮರ್ಪಕವಾಗಿ ಜಾರಿಗೆ ಬರುವಂತೆ ಪ್ರಯತ್ನ ಮಾಡುತ್ತದೆ ಮತ್ತು ಸದಸ್ಯರೆಲ್ಲರೂ ಅದಕ್ಕೆ ಸಹಾಯ ಮಾಡುತ್ತಾರೆಂದು ಭಾವನೆ ಮಾಡಿಕೊಂಡು, ಮಾನ್ಯ ಸದಸ್ಯರು ಕೊಟ್ಟಂತಹ ಅನೇಕ ಒಳ್ಳೆಯ ಸಲಹೆಗಳಿಗೆ ವಂದನೆಯನ್ನು ಸಲ್ಲಿಸಿ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.— The question is– "That the Mysore Inams Abolition Laws (Amendment) Bill, 1973, be taken into consideration."

The motion was adopted.

It is these reasons that necessitated them to agitate for more stipend. But I am not one of those that will agree that they should launch an agitation for this purpose and stage demonstration, deserting their sacred work. Let them represent their grievances to the Minister. There are about 1,200 House Surgeons and you cannot ask them to maintain themselves with the present stipend and work peacefully. What the House Surgeon gets, monthy Rs. 150 is very low because even a peon in the Secretariat gets more than Rs. 150. It is argued that the House Surgeons are still students. Let them be students but they take some responsibility for treating the patients.

What I would suggest to the Hon'ble Minister is that from the point of view of smooth administration, he should find out whether they have a genuine grievance and case and whether they are correct in what they are asking for. For this purpose, I suggest that their grievances may be referred to the Secretary to Government, Health Department, or some senior Officer of the Secretariat. Let the House Surgeons make representaitons to the Secretary,

Health Department in writing and verbally. Let the Secretary go through their case in entirety and report to the Government. If the Government is satisfied with the report of the Secretary that they have a real grievance, let Government implement it. Till such time the recommendations of the Secretary to Government are received, I am one of those who will agree with the Ministers that they must join duty at once. Simultaneously there must be an announcement from the Minister that their grievances would be referred to the Secretary to Government, with the direction that the Secretary should submit his report within a week. On that report the Government should take their decision as expeditiously as possible.

† Sri H. SIDDAVEERAPPA.—This is a procedural matter. I repeat my assurance that with utmost consideration, I will look into their charter of demands. I have made it very clear that a decision will have to be taken on these issues in the Cabinet because any financial implications will have to be examined there. It will be considered on its merits; it will be considered as sympathetically as is possible under the circumstances. As I stated the other day, to Sri. Kagod Thimmappa this is a question of scholarship; this is not a question of salary. As a matter of fact, in these hard days, nobody is satisfied; nobody can every be satisfied in view of the spiralling, soaring prices. If some of the House Surgeons are married and cannot maintain themselves, I sympathise with them. But there are also so many students who are married and have one or two children: they are not bothered because they have got potential fathers-in-law who can look after them. With that kind of grievance we need not bother. I would again assure the House and the House Surgeons that I will not be carried away by anger or by emotion. I will hear them sympathetically. But I cannot go after them. If they have grievances, they must come to me; they have come. I will hear them. There are friends on this side who are as sympathetic as those on the other side. On my part, I would assure that I would never do anything in a spirit of vengeance.

WITHDRAWAL OF GRANTS ALLOTED AS RELIEF MEASURES TO HASSAN DISTRICT

† ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದಕ್ಕೆ ಇನ್ನೂ ಸರ್ಕಾರದಿಂದ ಉತ್ತರವೇ ಬಂದಿಲ್ಲ. ಕಳೆದ ವರ್ಷ ಹಾಸನ ಜಿಲ್ಲೆಯಲ್ಲಿ ಮಳೆಯಾಗಲಿಲ್ಲ. ಅದೇ ರೀತಿಯಾಗಿ ಹಳೆಯ ಮೈಸೂರಿನ ಅನೇಕ ಭಾಗಗಳಲ್ಲಿ ಮಳೆಯಾಗಿಲ್ಲ. ರಿಲೀಫ್ ಗ್ರಾಂಟನ್ನು ಏನೋ ಸರ್ಕಾರದವರು ಕೊಟ್ಟರು ಆದರೆ ಹಾಸನ ಜಿಲ್ಲೆಗೆ ಕೊಟ್ಟಂಥ ೧೦ಲಕ್ಷ ರೂಪಾಯಿಗಳಲ್ಲಿ ಹೆಚ್ಚು ಮೊಬಲಗನ್ನು ಸರ್ಕಾರದವರು ವಿತ್‌ಡ್ರಾ ಮಾಡಿ ಕೊಂಡಿದ್ದಾರೆ. ನಮ್ಮಲ್ಲಿ ಪ್ರತಿವರ್ಷವೂ ಮೇ ತಿಂಗಳಲ್ಲಿಯೇ ಮಳೆಯಾಗುತ್ತಿತ್ತು. ೩-೪ ಹದಗಳಷ್ಟು ಮಳೆ ಬಿದ್ದು ಪೈರು ಚನ್ನಾಗಿ ಬೆಳೆದು ಹೆಚ್ಚು ಬೆಳೆ ಯಾಗುತ್ತಿತ್ತು. ಆದರೆ ಈ ಸಾರಿ ಮಳೆ ಬೀಳಲಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಜನ ಅಲ್ಲಿ ೨-೩ ಮೈಲಿಗಳಷ್ಟು ದೂರದಿಂದ ನೀರು ಹೊತ್ತುಕೊಂಡು ಬರುತ್ತಿದ್ದರು. ಅಲ್ಲಿನ ಪರಿಸ್ಥಿತಿ ಇಷ್ಟೊಂದು ಭೀಕರವಾಗಿದೆ. ಇಂಥಾದ್ದರಲ್ಲಿ ಸರ್ಕಾರ ಕೊಟ್ಟಂಥ ಹಣವನ್ನು ವಾಪಸ್ಸು ತೆಗೆದುಕೊಂಡಿದೆ. ಇನ್ನು ಫಾಮಿನ್ ರಿಲೀಫ್ ವರ್ಕ್ಸ್ ಏಟಂನಲ್ಲಿ ಹೇಳಿರುವ ಪ್ರಕಾರ ಕುಡಿಯುವ ನೀರಿನ ಬಾವಿಗಳನ್ನು ತೆಗೆದಿದ್ದಾರೆ. ನೀರು ಬಂದಿದೆ. ಆದರೆ ಬಾವಿಗಳನ್ನು ಇನ್ನೂ ಕಂಪ್ಲೀಟ್ ಮಾಡಲಿಲ್ಲ. ಇದಕ್ಕೆ ಹೆಚ್ಚಿಗೆ ದುಡ್ಡು ಬೇಕಾಗುತ್ತದೆ. ಸಾಮಾನ್ಯವಾಗಿ ಒಂದೊಂದು ಬಾವಿಗೆ ೨-೩-ಸಾವಿರ ರೂಪಾಯಿಗಳಷ್ಟು ಖರ್ಚಾಗು ತ್ತದೆ. ಅದಕ್ಕೆ ಬೇಕಾಂಥ ಮೊಬಲಗನ್ನು ಖರ್ಚುಮಾಡದೆ, ಅದನ್ನೂ ಕೂಡ ಸರ್ಕಾರದವರು ವಾಪಸ್ಸು ತೆಗೆದುಕೊಂಡಿದ್ದಾರೆ. ಇನ್ನು ಮಳೆ ಬಾರದೇ ಇರುವ ಕಡೆಗಳಲ್ಲಿ ಕೂಲಿಯಿಂದ ಜೀವನ ಮಾಡುವ ಜನರು ಉದ್ಯೋಗ ವಿಲ್ಲದೆ ಬಹಳವಾಗಿ ತೊಂದರೆ ಪಡುತ್ತಿದ್ದಾರೆ. ಈ ವರ್ಷ ಮಳೆ ಸಕಾಲಕ್ಕೆ ಬರದೆ ವ್ಯವಸಾಯಕ್ಕೆ ಉತ್ತಮ ಪರಿಸ್ಥಿತಿ ಇಲ್ಲವಾಗಿದೆ. ಕೂಲಿ ಕೆಲಸ ಇಲ್ಲವೇ ಇಲ್ಲ. ಮಳೆ ಬರಲೇ ಇಲ್ಲ. ಇದರಿಂದ ರೈತರು ವ್ಯವಸಾಯಕ್ಕೆ ಕೈಹಾಕಲಿಲ್ಲ. ಕೂಲಿಗಾರ ಕೆಲಸ ಸಿಗುತ್ತಾ ಇಲ್ಲ. ಅವರು ಉಪವಾಸ ಬಿದ್ದು ಸಾಯುತ್ತಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಅನೇಕ ಕಡೆಗಳಲ್ಲಿ ಏನೂ ಬೆಳೆಯಾಗದೆ ಜನರು ಸೊಪ್ಪು ತಿಂದು ಜೀವನಮಾಡುತ್ತಿದ್ದಾರೆ. ಜನ ಕಂಗೆಟ್ಟಿದ್ದಾರೆ. ಭೂಮಿ ಬೆಂಗಾಡಾಗಿದೆ. ಇಂತಹ ಒಂದು ಪರಿಸ್ಥಿತಿ ಹಾಸನ ಜಿಲ್ಲೆಯಲ್ಲಿ ಇದೆ. ಸರ್ಕಾರದ ವರು ಕೊಟ್ಟಂಥ ಹಣವನ್ನು ಏಕೆ ವಾಪಸ್ಸು ತೆಗೆದುಕೊಂಡಿದ್ದಾರೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹಳೆಯ ಮೈಸೂರಿನ ಕೆಲವು ಭಾಗಗಳಿಗೆ ಸಂಬಂಧ ಪಟ್ಟ ಹಾಗೆ ಲೋಕೋಪಯೋಗಿ ಶಾಖೆಗೆ ಸಂಬಂಧಪಟ್ಟ ಕೆಲವು ಕೆಲಸಗಳು ಅಂದರೆ ಸುಮಾರು ಒಂದು ಲಕ್ಷಕ್ಕೆ ಮೇಲ್ಪಟ್ಟಂತಹುಗಳು ಈಗಾಗಲೇ ಮಾನ್ಯ ಸಚಿವರ ಮುಂದೆ ಮಂಜೂರಾತಿಗೆ ಇವೆ. ಆದರೆ ಅವನ್ನು ಹಣಕಾಸಿನ ಇಲಾಖೆಯವರು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಆ ವರ್ಕ್ಸನ್ನು ಅವರ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳು ವುದಕ್ಕಾಗಿ ಕಳುಹಿಸಿದ್ದಾರೆ. ಹಳೆಯ ಮೈಸೂರಿನ ಕೆಲವು ಭಾಗದ ಕೆಲಸಗಳನ್ನು ತೆಗೆದುಕೊಳ್ಳಲು ಮಾನ್ಯ ಮುಂತ್ರಿಗಳಿಗೆ ಅಧಿಕಾರವಿದ್ದರೂ ಅದು ಈಗ ಅವರ

ಕೈಕಟ್ಟಿದೆ. ಅವಂಗೆ ಅದು ಅವಕಾಶವಾಗಲಿಲ್ಲ. ಆ ಒಂದು ರಿಲೀಫ್‌ಗೆ ದುಡ್ಡು ಇಲ್ಲವೆಂದು ಈಗ ಹೇಳುತ್ತಾರೆ.

2-30 P.M.

ಹೀಗಾದರೆ ಜನರೇನು ಬದುಕಬೇಕೋ, ಸಾಯಬೇಕೋ, ನೀವೇ ಹೇಳಿ. ಅವರನ್ನು ನೋಡಿದರೆ ಯಾರಿಗಾದರೂ ಸಂಕಟವಾಗದಿರದು ಕಣ್ಣೀರು ಬರುತ್ತೆ.....

ಉಪಾಧ್ಯಕ್ಷರು.—ಸಾಕು, ತಾವು ಹೇಳುತ್ತಿರುವದು ಸರ್ಕಾರಕ್ಕೆ ಗೊತ್ತಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಸದಸ್ಯರು ಬಹಳ ಸಂಕಟದಿಂದ ಹೇಳುತ್ತಿದ್ದಾರೆ.

Mr. DEPUTY SPEAKER.— The hon. members cannot as a matter of fact raise everything in the Zero hour. The House knows what limitations there are. Things which are very urgent and matters which are brought to the notice of the Government alone can be raised. Now the hon. member has raised this matter about finances being turned down etc. He could have referred the matter to the Government, and discussed these things with the Minister. That will be more effective. If he is simply provoked, I do not think he will get matters solved.

Sri H.M.CHANNABASAPPA.—Sir, I appreciate the anxiety of the Hon'ble Member on account of the difficulties that have been caused by lack of rain in Hassan District. Government will be too glad to appreciate the difficulties that are experienced by the people there and will do what is necessary to solve the problems provided Government gets prior notice of what he feels about it. Straightaway if the Hon. Member springs a surprise and says that people in Hassan district are facing difficulties, it would be very difficult for the Government straightaway to give a satisfactory answer or to take satisfactory action,—action which will satisfy the people and also set matters right. Therefore, I shall be grateful if the Hon. Member passes on all that he has said here to Government. I will have it examined and take action, such action as is necessary as expeditiously as is possible.

ALLEGED POLICE EXCESSES OVER THE WORKERS OF THE VOLTAS LTD., ON STRIKE.

†ಶ್ರೀ ಕೆ.ಎಂ.ನಾಗಣ್ಣ (ಚಿಕ್ಕಪೇಟೆ).— ಸ್ವಾಮಿ, ನಮ್ಮ ಬೆಂಗಳೂರಲ್ಲಿರತಕ್ಕ ವೋಲ್ಟಾಸ್ ಕಂಪನಿಯ ಕಾರ್ಮಿಕರು ಇದೇ ತಿಂಗಳು ೧೫ನೇ ತಾರೀಖಿನಿಂದ ಮುಷ್ಕರ ಹೂಡಿದ್ದಾರೆ. ಅಲ್ಲಿ ಮುಷ್ಕರದಲ್ಲಿ ಭಾಗವಹಿಸಿರತಕ್ಕ ಕಾರ್ಮಿಕರ ಸಂಖ್ಯೆ ಅಂದಾಜು ೩೦ ಜನರಿದ್ದರೆ ಅಲ್ಲಿಗೆ ಒಂದು ನೂರಕ್ಕೂ ಮೇಲ್ಪಟ್ಟು ಪೋಲೀಸರನ್ನು ಕಳುಹಿಸಿ ಆ ಮುಷ್ಕರದಲ್ಲಿ ಭಾಗವಹಿಸಿದ್ದ ಕಾರ್ಮಿಕರನ್ನೆಲ್ಲ ಎಳೆತರಿಸಿ ಕಬ್ಬನ್‌ಪಾರ್ಕ ಪೋಲೀಸ್ ಸ್ಟೇಷನ್ನಿನಲ್ಲಿರತಕ್ಕ ಲಾಕಪ್ಪಿನಲ್ಲಿ ಹಾಕಿ ಆ ಕಾರ್ಮಿಕರನ್ನು ವಿನಾಕಾರಣ ವಿಶೇಷವಾಗಿ ಹೊಡೆದಿದ್ದಾರೆ. ನಾನು ಈಗ ಅವರೇಕೆ ಮುಷ್ಕರ ಹೂಡಿದ್ದರೆಂಬ ವಿಷಯಕ್ಕೆ ಹೋಗುವದಿಲ್ಲ. ಆದರೆ, ಅವರನ್ನು ವಿನಾಕಾರಣ ಹೊಡೆಯುವದಕ್ಕೆ ಪೋಲೀಸಿನವರಿಗೆ ಏನು ಹಕ್ಕಿದೆ? ಬೆನ್ನು, ಮೇಲೆ ಬರೆ ಎಳೆದಂತೆ ಹೇಟುಗಳು ಬಿದ್ದಿವೆ. ಇದನ್ನೆಲ್ಲಾ ನೋಡಿದರೆ ಇತ್ತೀಚೆಗೆ ಜನರು ಬೆಂಗಳೂರಲ್ಲಿ ಪೋಲೀಸರ ದಬ್ಬಾಳಿಕೆ ಜಾಸ್ತಿಯಾಗಿದೆ ಎಂದು ಹೇಳುತ್ತಿರುವುದರಲ್ಲಿ ನಿಜಾಂಶವಿದ್ದಂತೆ ಕಂಡುಬರುತ್ತದೆ. ಆದರೆ ಪೋಲೀಸಿನವರು ಹೀಗೆ ಅಕ್ರಮವಾಗಿ ಜನರನ್ನು ಹೊಡೆಯುವದಕ್ಕೆ ಕಾರಣ ಏನೆಂಬುದನ್ನು ನಾನು ಸರ್ಕಾರದವರಿಂದ ತಿಳಿಯ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಲ್ಲಿ ಯಾವ ಒಂದು ಪ್ರಚೋದನೆಗೂ ಅವಕಾಶ ಇಲ್ಲದಂತೆ ಆ ವೋಲ್ಟಾಸ್ ನೌಕರರು ಮುಷ್ಕರವನ್ನು ನಡೆಸುತ್ತಿದ್ದರೆ, ಪೋಲೀಸಿನವರು ಆ ಕಾರ್ಮಿಕರ ಕುತ್ತಿಗೆ ಪಟ್ಟಿಯನ್ನು ಹಿಡಿದು ಎಳೆತಂದು ಲಾಠಿ ಛಾರ್ಜ ಮಾಡುವುದಕ್ಕೆ ಏನು ಕಾರಣ? ಬೆಂಗಳೂರಲ್ಲಿ ಪೋಲೀಸಿನವರು ನಡೆಸುತ್ತಿರುವ ಈ ದೌರ್ಜನ್ಯ ಇದೇ ಮೊದಲಲ್ಲ. ಅವರಿಗೆ ಹೊಡೆದಿರುವದನ್ನು ನೋಡಿದರೆ ಯಾರಿಗಾದರೂ ಕಣ್ಣೀರು ಬಾರದಿರದು. ಹೀಗೆ ಹೊಡೆಯುವದಕ್ಕೆ ಅವರೇನು ಜನರೋ, ಜಾನುವಾರುಗಳೋ? ಅವರನ್ನು ಸಾಲದ್ದಕ್ಕೆ ಲಾಕಪ್ಪಿನಲ್ಲಿಟ್ಟಿದ್ದಾರೆ. ಅವರನ್ನು ನೋಡುವುದಕ್ಕೆ ಯಾರು ಹೋದರೂ ಬಿಡುತ್ತಿಲ್ಲ, ಅಂತೂ ಬೆಂಗಳೂರಲ್ಲಿ ಪೋಲೀಸ ಹದಗೆಟ್ಟಿರುವಂತೆ ರಾಜ್ಯದಲ್ಲಿ ಇನ್ನೆಲ್ಲೂ ಹದಗೆಟ್ಟಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಪೋಲೀಸರು ರಕ್ಷಣೆ ಕೊಡುತ್ತಾರೆಂದರೆ ಇದೇನೇನು ಅವರಿಂದ ಜನರಿಗೆ ದೊರಯತಕ್ಕ ರಕ್ಷಣೆ. ಲಾಠಿಹೇಟುಗಳು? ಈ ದಿವಸ ಅಧಿಕಾರದಲ್ಲಿರತಕ್ಕವರಿಗೂ ಲಾಠಿಹೇಟುಗಳನ್ನು ತಿನ್ನತಕ್ಕ ಕಾಲ ಬರಬಹುದು. ಅದಕ್ಕೆ ಅವಕಾಶ ಕೊಡದಂತೆ ಅವರನ್ನು ಒಂದು ಸರಿಯಾದ ಹತೋಟಿಯಲ್ಲಿಟ್ಟುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಮುಷ್ಕರ ನಡೆಸತಕ್ಕವರ ಸಂಖ್ಯೆ ಬಹಳ ವಿರಳವಾಗಿದ್ದರೂ, ಆ ಕಾರ್ಮಿಕರ ಸಂಖ್ಯೆಗೆ ಮೂರರಷ್ಟು ಪೋಲೀಸಿನವರು ಅಲ್ಲಿದ್ದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಓಲ್ಟಾಸ ಕಂಪೆನಿಯ ಮೇನೇಜರರು ಮದ್ರಾಸಿನಿಂದ ಅಲ್ಲಿ ನಿವೃತ್ತ ಐ. ಜಿ. ಪಿ. ಅವರ ಸಹಾಯದಿಂದ ಒಂದು ಮೂರು ಜನ ಗೂಂಡಾಗಳನ್ನು ಮದ್ರಾಸಿನಿಂದ ಇಲ್ಲಿಗೆ ಕರೆಸಿಕೊಂಡಿದ್ದಾರೆ. ಇದು ಆಗಬಹುದೆ? ಪೋಲೀಸರು ಲಾ ಅಂಡ್ ಆರ್ಡರನ್ನು ಮೈಂಟೈನ್ ಮಾಡುವುದು ಎಂದರೆ ಜನರನ್ನು ದನಗಳಂತೆ

ಬಡಿಯಬೇಕೆಂದು ಯಾವ ರೂಲ್ಸಿನಲ್ಲಿ ಹೇಳದೆ? ಆ ಕಾರ್ಮಿಕರನ್ನು ಮಾನಾಹೀನವಾಗಿ ಬೈಯ್ಯಬೇಕು ಎಂದು ಎಲ್ಲಿ ಹೇಳಿದೆ? ಹೀಗೆ ನಿರಪರಾಧಿಗಳನ್ನು ಪೋಲೀಸರು ಹೊಡೆದು ಸಾಯಿಸುವದನ್ನು ಯಾರೂ ಸ್ಪೈಸುವದಕ್ಕಾಗುವದಿಲ್ಲ. ಅವರು ಡಾಕ್ಟರ ಹತ್ತಿರ ಹೋಗಿ ತಮಗೆ ಆಗಿರತಕ್ಕ ಗಾಯಗಳ ಬಗ್ಗೆ ಹೊಡೆತದ ಬಗ್ಗೆ ಸರ್ಟಿಫಿಕೇಟನ್ನು ಪಡೆದು ಸರ್ಕಾರಕ್ಕೆ ಅವರು ಒಂದು ಅರ್ಜಿಯನ್ನು ಕೊಡುತ್ತಿದ್ದಾರೆ. ಅದನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—May I know whether something has been put in black and white and whether any attempt has been made to avail of the Rules of Procedure by any of you or all of you? I want to know whether any Hon. Member has made any attempt to avail the Rules of Procedure to raise this matter? All of a sudden to get up and raise a subject and expect to get a reply from the Government, it will not be possible. Even if a reply is there, it will not be to their satisfaction.

†Sri C. M. ARUMUGHAM.— Sir, about 7,000 workers belonging to Voltas are on strike all over the country. In Bangalore the strength is only about 70. Out of 70, about 40 or 50 are on strike and are demonstrating. Strike, as you know, Sir, is the last resort of the workers. To know whether the strike is legal or illegal, the matter must be referred to adjudication. But the point is, when law and order problem is not involved, where is the need for the Government to send more than the double the required number of police men? Where is the need to send 100 police men to deal with only 50 workers? Where is the need to have a jeep and a van and to take the entire body of workers to the police station and to lock them up there? This amounts to misuse of power by the police in order to help the management. Are the Government interested in one manager and to send the police on his phone call or are they interested in the workers? The police are there not to help the workers to win their demands from their employers. The police is trying to support the management and to curb the legitimate demands of the workers and is creating a scare among them. I met some of the workers

on my way and I found that they were severely beaten. Have they created a situation which warranted the police to resort to lathi charge or to take them and put them in the police station? I therefore request the Government to call for a report immediately from the Police Commissioner and take action against the police officers, more particularly against the Sub-Inspector and the Inspector who are responsible for it.

ಶ್ರೀ ಸಿ. ಬೈರೇಗೌಡ.— ವೋಲ್ಟಾಸ್ ಸಂಸ್ಥೆ, ಟಾಟಾ ಸಂಸ್ಥೆ, ಟಾಟಾ ಬಿಸಿನೆಸ್ ಹೌಸ್‌ಗೂ ಸರಕಾರಕ್ಕೂ ನೇರವಾದ ಸಂಬಂಧವಿದೆಯೇ? ಟಾಟಾ ಕುಟುಂಬ ದೇಶವನ್ನೆಲ್ಲಾ ಆವರಿಸಿಕೊಂಡಿದೆ. ಇಂದು ಬಂಡವಾಳಶಾಹಿಗಳು ದೇಶದಲ್ಲಿ ಹೆಚ್ಚಿನ ರೀತಿಯಲ್ಲಿದ್ದಾರೆ. ಅವರಿಗೆ ಬೆಂಬಲ ಕೊಡುವುದು ಸರಿಯಲ್ಲ. ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿಯಾಗಿಡಲು ಪೋಲೀಸರು ಒಂದಕ್ಕೆ ಎರಡರಷ್ಟು ತೀವ್ರ ಕ್ರಮ ತೆಗೆದುಕೊಳ್ಳಲು ಕಾರಣವೇನು ಎಂಬುದನ್ನು ತಿಳಿಸಬೇಕು.

Sri V. N. PATIL.— I want one assurance from the Government *viz.* that whenever there is a dispute the police should not interfere and poke their nose into it. Let them not bring a bad name to the Government by doing so.

ಪೋಲೀಸ್ ಸ್ಟೇಷನ್ನಿಗೆ ಮಂತ್ರಿಗಳು ಹೋಗಿ ನೋಡಿದರೆ ಅಲ್ಲಿ ಯಾವ ರೀತಿ ನೋಡಿಕೊಳ್ಳುವರೆಂಬುದು ಗೊತ್ತಾಗುವುದು. ಅತಿಕ್ರಮಿಸಿ ಕೆಲಸಮಾಡಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಎಕ್ಸೆಂಪ್ಲರಿ ಪನಿಷಮೆಂಟ್ ಕೊಡುವ ಬಗ್ಗೆ ಅಷ್ಯೂರೆನ್ಸ್ ಕೊಡಬೇಕು

ಶ್ರೀ ಕೆ. ಶ್ರೀರಾಮುಲು.— ಈಗ ವೋಲ್ಟಾಸ್ ವಿಷಯ ಹೇಳಿದ್ದಾರೆ: ಗಣಿಯ ಕಾರ್ಮಿಕ ಪೋಲೀಸು ಅಧಿಕಾರಿಗಳು ಕಾರ್ಖಾನೆಯೊಳಗೆ ನುಗ್ಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಹೊಡೆದು ಕರೆದುಕೊಂಡು ಹೋಗಿರುವುದುಂಟು. ಮಾನ್ಯ ಡೆಪ್ಯೂಟಿ ಲೀಡರರವರು ಗಮನಿಸಬೇಕು. ಪೋಲೀಸರು ಯಾವುದೇ ಕಾನೂನು ಪ್ರಕಾರ ಕಾರ್ಖಾನೆಯೊಳಗೆ ಹೋಗಬಾರದು. ಕೆಲಸ ಮಾಡುವ ಸ್ಥಳಕ್ಕೆ ಪೋಲೀಸು ವ್ಯಾನು ತೆಗೆದುಕೊಂಡು ನುಗ್ಗಿ ಒಬ್ಬ ಕೆಲಸಗಾರನನ್ನು ಹೊಡೆದು ಅವನೇನೂ ಅನ್ಯಾಯ ಮಾಡದಿದ್ದರೂ ಅವನನ್ನು ಸ್ಟೇಷನ್ನಿಗೆ ಕರೆದುಕೊಂಡುಹೋಗಿ ಸಾಯಂಕಾಲದ ವರೆಗೂ ಅಲ್ಲಿಟ್ಟುಕೊಂಡಿದ್ದರು, ನಾನು ಹೋಗಿ ಸಂಜೆ ಅವನನ್ನು ಬಿಡಿಸಿಕೊಂಡು ಬರಬೇಕಾಯಿತು. ಇದು ಹದ್ದು ಮೀರಿದ ಕ್ರಮ. ಹೀಗೆ ಹೇಳುವುದರಿಂದ ನಾನು ಯಾರನ್ನಾದರೂ ಸಪೋರ್ಟ್ ಮಾಡುತ್ತಿಲ್ಲ. ಪೋಲೀಸರು ಎಷ್ಟರ ಮಟ್ಟಿಗೆ ನಡೆದು ಕೊಳ್ಳುವರು ಎಂದು ಹೇಳುತ್ತಿದ್ದೇನೆ.

ಸ್ಟೈಕ್ ಮಾಡುವುದು ಇಲ್ಲೀಗಲ್ಲಾಗಿದ್ದರೆ ಅದಕ್ಕೆ ಬೇರೆ ಕ್ರಮವಿದೆ. ಕಾನೂನಿನ ಪ್ರಕಾರ ಕಾರ್ಮಿಕರಿಗೆ ಶಿಕ್ಷೆಯಾಗಬೇಕು. ಆದರೆ ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಒಳಗೆಹೋಗಿ ವಾರಂಟಿಲ್ಲದೆ ಕಾರಣವಿಲ್ಲದೆ ಹೀಗೆ ಪೋಲೀಸರು ವರ್ತಿಸಿದರೆ ಜನರ ಅಭಿಪ್ರಾಯ ಅವರ ಬಗ್ಗೆ ಕೆಡುಶ್ತದೆ ಎಂಬುದನ್ನು ಗಮನಕ್ಕೆ ತರುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾನ್ಯ ಅಧ್ಯಕ್ಷರೇ, ಹಲವು ಸದಸ್ಯರು ಈ ಕಡೆ ಮತ್ತು ಆ ಕಡೆ ಮಾತನಾಡಿದರು, ಯಾವುದೇ ನಿರ್ದಿಷ್ಟವಾದ ವಿಷಯ ನಮ್ಮ ಮುಂದಿಲ್ಲ. ಈ ಬೆಂಗಳೂರು ಪಟ್ಟಣದಲ್ಲಿ ಎಲ್ಲಿ ಏನು ನಡೆಯುತ್ತಿದೆ ಎಂಬ ವರ್ತಮಾನ ತಿಳಿದು, ಕಿವಿಯಲ್ಲಿ ಕೇಳಿದ್ದು, ತಮಗೆ ತಿಳಿದಿದ್ದು ಇಲ್ಲಿ ಅವರ ಅಭಿಪ್ರಾಯಗಳೊಂದಿಗೆ ಹೇಳಿದ್ದಾರೆ. ಪೋಲೀಸರು ಅಲ್ಲಿಗೆ ಹೋಗಲೇಬಾರದು ಎಂದು ಶ್ರೀ ವಿ. ಎಸ್. ಪಾಟೀಲರು ಹೇಳಿದರು. ಅವರು ಹೋಗಬೇಕಾದ್ದಿಲ್ಲವೆಂದು ಹೇಳಿದರು. ಎಲ್ಲಿ ಸ್ಟೈಕ್ ಇದ್ದರೂ ಪೋಲೀಸರು ಹೋಗಬೇಕಾದ ಅವಶ್ಯಕತೆಯಿಲ್ಲವೆಂದು ಹೇಳಿದರು. ಎರಡನೆಯದು ಹೆಚ್ಚಿನ ಪೋಲೀಸರು ಇರಬೇಕಾದ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಮೂರನೆಯದು ಅನಾವಶ್ಯಕವಾಗಿ ನಿರಪರಾಧಿಗಳನ್ನು ಹಿಡಿದು ಪ್ರಬಲವಾಗಿ ಥಳಿಸಿದ್ದಾರೆ ಎಂಬುದು ಮತ್ತು ಕಾರ್ಮಿಕರು ಮತ್ತು ಮ್ಯಾನೇಜಮೆಂಟ್ ನವರಿಗೆ ವಿವಾದ ಬಂದಾಗ ಪೋಲೀಸರು ಕಾರ್ಮಿಕರನ್ನು ಅನಾವಶ್ಯಕವಾಗಿ ಹಿಂಸೆ ಮಾಡುವರು; ಹೀಗೆ ನಾನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಯಾವುದೇ ಸರಕಾರ ಕೆಲಸ ಮಾಡುತ್ತಿರಲಿ, ಪ್ರತಿಯೊಬ್ಬ ಮನುಷ್ಯನಿಗೂ, ಕಾರ್ಮಿಕರಾಗಲಿ ಅಥವಾ ಮ್ಯಾನೇಜಮೆಂಟಿನವರಾಗಲಿ ಅಥವಾ ಬೇರೆಯವರಾಗಲಿ ಸತ್ಪ್ರಜೆಗಳಿಗೆ ರಕ್ಷಣೆ ಕೊಡಬೇಕಾದದ್ದು ಸರಕಾರದ ಜವಾಬ್ದಾರಿಯಾಗಿದೆ. ಯಾವುದೇ ವಿಧ್ವಾದ ಘರ್ಷಣೆಯುಂಟಾಗುವ ಸಮಯದಲ್ಲಿ ಅಲ್ಲಿ ಎಷ್ಟು ಪೋಲೀಸರಿರಬೇಕು, ವ್ಯವಸ್ಥೆಯೇನು ಮಾಡಬೇಕು ಎಂಬುದನ್ನು ಸ್ಥಳದ ಸನ್ನಿವೇಶ ಅರಿತು ಕೆಲಸ ಮಾಡಬೇಕಾಗುತ್ತದೆ. ಎಷ್ಟೇ ಜನರಿರಲಿ ವಿಧಿನಿಯಮಗಳಿಗೆ ವಿರೋಧವಾಗಿ ಹಿಂಸೆ ಮಾಡಿದ್ದಾರೆಯೇ ಎಂಬುದು ಈಗಿರುವ ಪ್ರಶ್ನೆ. ಅನಾವಶ್ಯಕವಾಗಿ ನಿರಪರಾಧಿಗಳನ್ನು ಥಳಿಸಿದ್ದಾರೆಯೇ ಎಂಬುದು ಈಗಿರುವ ಪ್ರಶ್ನೆ. ಎಲ್ಲಿ ಅವಶ್ಯಕತೆಯಿದೆ, ಎಲ್ಲಿ ವಿಶೇಷ ವ್ಯವಸ್ಥೆ ಮಾಡಬೇಕಾದ ಅವಶ್ಯಕತೆಯಿದೆ, ಎಲ್ಲಿ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ, ಎಲ್ಲಿ ಸಮಾಜದ ಹಿತ ರಕ್ಷಿಸಬೇಕಾಗಿದೆ ಅಲ್ಲಿ ಅದಕ್ಕೆ ತಕ್ಕ ವ್ಯವಸ್ಥೆಮಾಡಬೇಕು ಎಂಬುದನ್ನು ತಾವೆಲ್ಲರೂ ಒಪ್ಪಲೇಬೇಕು. ಆದರೆ ನಿರಪರಾಧಿಗಳನ್ನು ಹೊಡೆದು ಹಿಂಸೆ ಮಾಡಬೇಕು ಎಂಬುದು ಯಾವ ಶಾಸನದಲ್ಲೂ ಇಲ್ಲ. ಪ್ರತಿಯೊಂದು ವಿಷಯಕ್ಕೂ ಎರಡು ಮುಖಗಳುಂಟು. ಅನೇಕ ವೇಳೆ ಕೆಲವರನ್ನು ನಾವು ನಿರಪರಾಧಿಗಳೆಂದು ತಿಳಿದಿರುತ್ತೇವೆ, ಕಣ್ಣಿಗೆ ಹಾಗೇ ಕಾಣುವುದು. ಆದರೆ ಅವರು ಪರಿಶೀಲಿಸಿದರೆ ನಿಜವಾದ ಅಪರಾಧಿಗಳಾಗಿರುವರು. ನಮ್ಮ ಅನುಭವದ ವಿಷಯಗಳಿವು ೧೯೪೭ ರಿಂದ ಇವು ನಮ್ಮ ಅನುಭವಕ್ಕೆ ಬಂದಿವೆ.

ತಪ್ಪು ಮಾಡಿದರೆ ಹೊಡೆಸಿಕೊಳ್ಳಬೇಕಾಗುತ್ತದೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ, ತಮಗೆ ಎಷ್ಟು ಕಳಕಳಿ ಈ ವಿಷಯದ ಬಗ್ಗೆ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೆ ಇದೆ. ನಿರಪರಾಧಿಗಳಿಗೆ ಯಾವ ತೊಂದರೆಯನ್ನು ಮಾಡಬಾರದು ಎಂದು ಇದೆ.

ಶ್ರೀ ವಾಟಾಳ್ ನಾಗರಾಜ್.— ಈ ಪದವನ್ನು ನಾವು ಕೇಳಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮತ್ತೆ ಜೆನ್ನಾಗಿ ಕೇಳಬೇಕು. ತಮಗೆ ಎಷ್ಟು ವ್ಯೆಥೆಯಾಗುತ್ತದೆಯೋ ಅಷ್ಟೇ ವ್ಯಥೆ ನನಗೂ ಆಗುತ್ತದೆ. ನಿರಪರಾಧಿಗಳನ್ನು ಠೆಗೆದುಕೊಂಡು ಹೋಗಿ ಥಳಿಸುವುದು ಆದರೆ ಪೋಲೀಸರು ಹುಚ್ಚರು ಇರಬೇಕಾಗುತ್ತದೆ. ಬ್ರೇನ್ ಕೆಟ್ಟು ಹೊದಂಥವರು ಈ ರೀತಿ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಪೋಲೀಸನವರಿಗೂ ಬ್ರೇನ್ ಕೆಟ್ಟುಹೋಗಿದೆ.

ಶ್ರೀ ಕೆ. ಎಂ. ನಾಗಣ್ಣ.— ಬ್ರೇನ್ ಇರುವವರು ಪೋಲೀಸ ಡಿಪಾರ್ಟಮೆಂಟ ನಲ್ಲಿ ಇರುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಯಾವ ಪೋಲೀಸರೇ ಆಗಲೀ ಅನಾವಶ್ಯಕವಾಗಿ ವಿಧಿನಿಯಮಗಳಿಗೆ ವಿರೋಧವಾಗಿ ನಿರಪರಾಧಿಗಳನ್ನು ಥಳಿಸಿದ್ದೇ ಆದರೆ, ತೊಂದರೆ ಕೊಟ್ಟಿದ್ದೇ ಆದರೆ, ಇದು ಸರ್ಕಾರದ ಗಮನಕ್ಕೆ ಬಂದರೆ, ಖಂಡಿತವಾಗಿಯೂ ಅದನ್ನು ಸರ್ಕಾರ ಸಹಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.— ತಮ್ಮ ಗಮನಕ್ಕೆ ತಂದಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನಿಮಗೆ ಕಿವಿಯಿಂದ ಬಂದಿರತಕ್ಕದ್ದನ್ನು ಹೇಳಿದ್ದೀರಿ. ಅದನ್ನು ವಿಚಾರಣೆಮಾಡಬೇಕು, ವಿಚಾರಣೆ ಇಲ್ಲದೆ ನಮ್ಮ ರಾಜ್ಯದಲ್ಲಾಗಲೀ, ರಾಷ್ಟ್ರದಲ್ಲಾಗಲೀ ಯಾರನ್ನೂ ಕೂಡ ಶಿಕ್ಷಿಸುವಂತಿಲ್ಲ.

ಶ್ರೀ ವಾಟಾಳ್ ನಾಗರಾಜ್.— ವಿಚಾರಣೆಮಾಡಿ ನಾಳೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾವು ವಿಧಿನಿಯಮಗಳಿಗನುಸಾರವಾಗಿ ನಿರ್ದಿಷ್ಟವಾದ ಸೂಚನೆಯನ್ನು ತೆಗೆದುಕೊಂಡು ಬರೋಣ. ಈ ಡಿಸ್‌ಪ್ಯೂಟ್ಸ್ ಕಾರ್ಮಿಕರು ಮತ್ತು ಮ್ಯಾನೇಜಮೆಂಟಿನವರಿಗಾಗಲೀ, ವೈಯುಕ್ತಿಕವಾಗಿ ಒಂದು ಗುಂಪಿನಿಂದ ಇನ್ನೊಂದು ಗುಂಪಿಗಾಗಲೀ, ಆದಾಗ ಅದರ ಸ್ಥಿತಿಗತಿಗಳು ಅತಿರೇಕಕ್ಕೆ ಹೋಗತಕ್ಕ ಸಂದರ್ಭ ಉಂಟು. ಈ ರೀತಿ ಅತಿರೇಕಕ್ಕೆ ಹೋಗುವುದಕ್ಕೆ ಮುಂಚೆ ಕ್ರಮ ತೆಗೆದುಕೊಳ್ಳತಕ್ಕದ್ದು ನ್ಯಾಯವಾದದು ಇದೆ. ಈಗ ಮಾನ್ಯ ಸದಸ್ಯರು ಒಬ್ಬೊಬ್ಬರು ಒಂದೊಂದು ವಿಷಯ ಹೇಳಿದರು; ಕೆಲವರು ಪೋಲ್ಟಾಸ್ ವಿಷಯ ಹೇಳಿದರು, ಮತ್ತೊಬ್ಬರು ಇನ್ನೊಂದು ಘರ್ಷಣೆಯ ವಿಷಯವನ್ನು ಹೇಳಿದರು. ತಾವು ಯಾವುದು ಅತ್ಯಾಚಾರವಾಗಿದೆ ಎನ್ನತಕ್ಕದ್ದು ಖಚಿತವಾಗಿ

ನೋಡಿ ಅದಕ್ಕೆ ಸಾಕಷ್ಟು ವುರಾವೆ ಇದ್ದು, ತಪ್ಪಾಗಿದೆ ಎಂದು ಕಂಡು ಬಂದರೆ ಆ ವಿಷಯಗಳನ್ನು ಒಂದು ಸೂಚನೆಯ ರೂಪದಲ್ಲಿಯಾಗಲೀ, ಅಥವಾ ನೇರವಾಗಿ ಸರ್ಕಾರಕ್ಕೆ ಇಂಥಿಂಥ ಕಡೆ ಇಂಥಿಂಥ ಅತ್ಯಾಚಾರವಾಗಿದೆ, ಇದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಸರಿ, ತಾವು ತಿಳಿಸಿದಂಥ ವಿಷಯಗಳನ್ನು ವಿಚಾರಣೆ ಮಾಡಿಸಿ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಸರ್ಕಾರ ನಿರ್ಧರಿಸುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

SCARCITY OF PETROL IN MERCARA

†ಶ್ರೀ ವಾಟಾಳ ನಾಗರಾಜ್ (ಚಾಮರಾಜ ಪೇಟೆ).— ಇನ್ನೊಂದು ವಿಷಯ, ಮಡಕೇರಿಯಲ್ಲಿ ಪೆಟ್ರೋಲ ಇಲ್ಲ ಎಂದು ಪೆಟ್ರೋಲ ಬಂಕ್ ಮುಂದೆ ನಿಮ್ಮ ಪಿ. ಡಬ್ಲ್ಯೂ. ಡಿ. ವ್ಯಾನುಗಳು, ಮತ್ತು ಸಾರ್ವಜನಿಕ ವ್ಯಾನುಗಳು ನೂರಾರು ಅಲ್ಲಿ ಪೆಟ್ರೋಲಗೋಸ್ಕರ ನಿಂತಿದ್ದವು. ಅದನ್ನು ಲೆಕ್ಕಿಸದೆ ಅಲ್ಲಿರತಕ್ಕ ಸೂಪರಂಟಿಂಡೆಂಟ್ ಆಫ್ ಪೋಲೀಸ ಅವರು ತಮ್ಮ ಇಲಾಖೆಯ ಎಲ್ಲಾ ಜೀಪುಗಳನ್ನು, ವ್ಯಾನುಗಳನ್ನು ತಂದು ಕ್ಯೂನಲ್ಲಿರತಕ್ಕವರನ್ನು ತಳ್ಳಿ ಹಾಕಿ ಪೆಟ್ರೋಲನ್ನು ತುಂಬಿಸಿಕೊಂಡು ಹೋದರು. ಆಲ್ಲಿರತಕ್ಕ ಜೂನಿಯರ್ ಇಂಜನಿಯರ ಒಬ್ಬರು ತಾವು ಈ ತರಹ ಮಾಡುವುದು ಸರಿಯೇ, ನಮ್ಮದೂ ಪಿ. ಡಬ್ಲ್ಯೂ. ಡಿ. ವ್ಯಾನುಗಳು ಸರ್ಕಾರದ್ದೇ ನಮಗೂ ಪೆಟ್ರೋಲ ಎಸೆನ್ಷಿಯಲ್ ಇದೆ ಎಂದು ಕೇಳಿದಕ್ಕೆ, ಯಾರು ನೀನು ಕೇಳುವುದಕ್ಕೆ ಎಂದು ಅವರನ್ನು ದಸ್ತಗಿರಿ ಮಾಡಿದ್ದಾರೆ. ಆ ಜ್ಯೂನಿಯರ ಇಂಜಿನಿಯರ ಚಂದ್ರಶೇಖರ ಎಂದು ಈ ರೀತಿ ಅವರನ್ನು ದಸ್ತಗಿರಿ ಮಾಡಿದ. ಮೇಲೆ, ವಿದ್ಯುಚ್ಛಕ್ತಿ ಮಂಡಲಿಯವರು ಇದನ್ನು ಪ್ರತಿಭಟನೆ ಮಾಡಿ ೨೦ ನಿಮಿಷಗಳ ಕಾಲ ಮಡಕೇರಿಯಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿದರು. ಆಗ ಅವರನ್ನು ಹೊರಗಡೆ ಬಿಟ್ಟರು. ಪೋಲೀಸ ನವರು ಎಲ್ಲಿಯವರೆಗೆ ಹದ್ದುಮೀರಿ ಹೋಗಿದ್ದಾರೆ ಎಂದು ನೋಡಿ. ಇದು ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ವಿಮರ್ಶೆಮಾಡಿ ಸರಿಯಾದ ಅಂಕಿ ಅಂಶಗಳನ್ನು ತರಿಸಿ ಈ ಸದನಕ್ಕೆ ಕೊಡಬೇಕು. ಪೆಟ್ರೋಲ್ ಕೇಳುವುದಕ್ಕೆ ಹೋದರೆ ನಿಮ್ಮ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಅಧಿಕಾರಿಗಳನ್ನೆ ಹೊಡೆಯುವುದೆ? ಸರ್ಕಾರದವರು ಸರ್ಕಾರದವರನ್ನೆ ಹೊಡೆಯುವುದಕ್ಕೆ ಹೋದಾಗ ಜನಗಳನ್ನು ಎಲ್ಲಿ ಬಿಡುತ್ತಾರೆ? ಆ ಮಟ್ಟಕ್ಕೆ ಹೋಗಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಆಗಲೇ ಇದು ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಏನೇನು ನಡೆಯಿತು, ವಿವರಗಳು ಏನು ಏನು, ಏನೇನು ನಡೆಯಿತು, ಯಾರು ಯಾರು ಬೈದರು, ಯಾರು ಯಾರನ್ನು ದಸ್ತಗಿರಿ ಮಾಡಿದರು—ಅಪರಾಧ ಮಾಡದೆ ದಸ್ತಗಿರಿ ಮಾಡಿದ್ದಾರೆ ಎಂದು ರಿಪೋರ್ಟ್ ಆಗಿಲ್ಲ— ಏನು ಕಾರಣ ಸನ್ನಿವೇಶ ಏನು ಇದೆ, ಏನಾದರೂ ವಿಕೋಪಕ್ಕೆ ಪರಿಸ್ಥಿತಿ ಬಂದು ಕ್ರಮ ತೆಗೆದುಕೊಳ್ಳಬೇಕಾಯಿತೇ, ಎನ್ನುವ ವಿವರಗಳನ್ನು ಸಂಗ್ರಹಿಸಿಮಾಡಿ ಸೂಕ್ತ ಕ್ರಮ ತೆಗೆದು

ಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಶಾವು ಇದನ್ನು ಇಲ್ಲಿ ಎತ್ತುವುದಕ್ಕೆ ಮುನ್ನ ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ವಿ. ಎಂ. ಘಾಡಿ.— ಮಾನ್ಯ ಅಧ್ಯಕ್ಷರೇ, ದಾಂಡೇಲಿಯಲ್ಲಿ, ಏಪ್ರಿಲ್ ತಿಂಗಳಿಂದ ಅಲ್ಲಿನ ಕೆಲಸಗಾರರಿಗೆ ಮ್ಯಾನೇಜಮೆಂಟನವರು ಪಗಾರವನ್ನು ಕೊಟ್ಟಿಲ್ಲ. ಲೇಬರ ಕಮಿಷನರ ಅವರು ಹುಕುಂ ಮಾಡಿದರೂ ಸಹಿತ ಮ್ಯಾನೇಜಮೆಂಟನವರು ಪಗಾರ ಕೊಟ್ಟಿಲ್ಲ. ಆ ರೀತಿ ಇವತ್ತು ನನಗೆ ಟ್ರಂಕ್ ಕಾಲ್ ಬಂದಿದೆ. ಮ್ಯಾನೇಜಮೆಂಟನವರು ಕಾರ್ಮಿಕರ ಯಾವ ಡಿಮ್ಯಾಂಡನ್ನೂ ಕೇಳುವುದಕ್ಕೆ ತಯಾರಿಲ್ಲ. ಅಲ್ಲಿ ಧರಣಿ ಸತ್ಯಾಗ್ರಹ ನಡೆದಿದೆ. ಆದ್ದರಿಂದ ಸರ್ಕಾರದವರು ಆ ಮ್ಯಾನೇಜಮೆಂಟನ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು ಮತ್ತು ಅದನ್ನು ಕೂಡಲೇ ರಾಷ್ಟ್ರೀಕರಣ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

Sri H. M. CHANNABASAPPA.— It is purely a dispute between the management and the workers. It is a labour dispute and the Labour Commissioner will have to consider it.

Mr. DEPUTY SPEAKER.— The Labour Commissioner and the Minister for Labour are seized of it.

ALLEGED POLICE EXCESSES ON LABOURERS IN HALEBID

†ಶ್ರೀ ವಿ. ಎನ್. ಪಾಟೀಲ.— ಕ್ರಮಬದ್ಧವಾಗಿ ನಿಯಮದ ಪ್ರಕಾರ ನೋಟೀಸ ಕಳುಹಿಸಿ ಎಂದು ಮಾನ್ಯ ಅಧ್ಯಕ್ಷರು ಹೇಳಿದರು.

Mr. DEPUTY SPEAKER.— It has been sent to the Government. As soon as we get reply it will be taken up.

Sri V. N. PATIL.— If the Minister makes up his mind he can get reply by this evening.

ಹಳೇಬೀಡು ಗ್ರಾಮದಲ್ಲಿ ಪೋಲೀಸ್ ಹೆಡ್ ಕಾನ್ಸ್‌ಟೇಬಲ್....

ಶ್ರೀ ಕೆ. ಪುಟ್ಟಸ್ವಾಮಿ.— ನಮಗೆ ರಕ್ಷಣೆ ಇಲ್ಲವೇ, ಒಂದು ಗಂಟೆ, ಎರಡು ಗಂಟೆಯಿಂದ ಇಂಟರಪಷನ್ಸ್ ಆಗುತ್ತದೆ, ಬೇರೆ ಕಾರ್ಯಕ್ರಮಗಳು ಎಷ್ಟೋ ಇವೆ, ಆದರಲ್ಲಿ ಭಾಗವಹಿಸಲು ನಾನು ಅಪೇಕ್ಷೆವುಳ್ಳವನಾಗಿದ್ದೇನೆ, ನಮಗೆ ರಕ್ಷಣೆ ಇಲ್ಲವೇ ?

Mr. DEPUTY SPEAKER.— You will have it.

ಶ್ರೀ ವಿ. ಎನ್. ಪಾಟೀಲ.— ಪೋಲೀಸ್ ಕಾನ್ಸ್‌ಟೇಬಲ್ ನೈಟ ಟೈಂ, ಬರಗಾಲಪೀಡಿತ ಪ್ರದೇಶದಿಂದ ಬಂದಂಥ ಕಾರ್ಮಿಕರ ಮನೆಯಲ್ಲಿ ನುಗ್ಗಿ, ಮುದುಕರನ್ನು, ಮಕ್ಕಳನ್ನು ಬೇರ್ಪಡಿಸಿ ೨–೩ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ಅವರ ಮೇಲೆ ಫಿಸಿಕಲ್ ಅಸಾಲ್ಟ್ ಮಾಡಿದ್ದಾನೆ, ನೀಚ ಕೆಲಸಮಾಡಿದ್ದಾನೆ,

ಇದಕ್ಕಿಂತ ಹೆಚ್ಚಿನ ಕೆಲಸವನ್ನು ನಾವು ಈ ಮನೆಯಲ್ಲಿ ಕೂತು ಮಾಡುವುದು ಏನು ಇದೆ? ನನ್ನ ಮಿತ್ರರಿಗೂ ಈ ಪ್ರೊಸಿಡಿಂಗ್ಸ್‌ನಲ್ಲಿ ಭಾಗವಹಿಸಬೇಕು ಎನ್ನುವ ಕುತೂಹಲ ಇದೆ. ಆ ಅಬಲೆಯರ ಮೇಲೆ, ಗಂಡಸರನ್ನು, ಹುಡುಗರನ್ನು ಬಡೆದು, ಹೆಡ್‌ಕಾನ್ಸ್‌ಟೇಬಲ ಮಾನಹರಣ ಮಾಡಿದ್ದಾನೆ. ಇದರ ಬಗ್ಗೆ ನೋಟೀಸ ಕೊಟ್ಟಿದ್ದೇನೆ, ಒಂದು ವಾರವಾದರೂ ಉತ್ತರ ಬರದಿದ್ದರೆ ಹೇಗೆ ಟಾಲರೇಟ ಮಾಡೋಣ?

Mr. DEPUTY SPEAKER.— We are pursuing the matter.

MYSORE STATE AGRICULTURAL UNIVERSITIES BILL 1973—POINTS OF ORDERS ABOUT CONSIDERING THE BILL

3-00 P.M.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈಗ ಮಾನ್ಯ ವ್ಯವಸಾಯ ಸಚಿವರು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಈ'ಮಸೂದೆಯನ್ನು ತಂದಿದ್ದಾರೆ. ಹಿಂದೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾದರೆ ಯೂನಿವರ್ಸಿಟಿ ಗ್ರಾಂಟ್ ಕಮೀಷನ್ ಒಪ್ಪಿಗೆ ಪಡೆಯದೇ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಿಲ್ಲ ಎನ್ನುವ ಮಾತನ್ನು ಸದನದಲ್ಲಿ ಹೇಳಿದ್ದಾರೆ. ಅದರ ಜೊತೆಗೆ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ಈಗ ತಂದಿರತಕ್ಕ ಮಸೂದೆ ಯು. ಜಿ. ಸಿ.ಗೆ ಕಳುಹಿಸಿಲ್ಲ ಮತ್ತು ಅವರ ಅನುಮತಿ ಪಡೆದಿಲ್ಲ. ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ರಾಷ್ಟ್ರದಲ್ಲಿ ಒಂದು ಪದ್ಧತಿಯಿದೆ, ನಿಯಮವಿದೆ, ಯು. ಜಿ. ಸಿ. ಕಾನೂನು ಇದೆ. ಇದು ಯಾವುದನ್ನೂ ಪಾಲನೆ ಮಾಡದೇ ಮಸೂದೆಯನ್ನು ಸದನಕ್ಕೆ ತರುವುದಕ್ಕೆ ಹೊರಟಿರತಕ್ಕದ್ದನ್ನು ನಾವು ಯಾರೂ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದು ಏನಂದರೆ ದಯವಿಟ್ಟು ಮಾನ್ಯ ಕೃಷಿ ಸಚಿವರು ಉತ್ಸಾಹದ ಬಾಹದಲ್ಲಿ ಮುಂದೆ ಹೋಗಿ ಮಂಡಿಸುವುದು ಬೇಡ. ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಕೇಂದ್ರ ಸರ್ಕಾರ ಅಥವಾ ಯು. ಜಿ. ಸಿ. ಅವರ ಅಭಿಪ್ರಾಯ ಪಡೆದು ಅವರು ಸೂಚಿಸಬಹುದಾದಂಥ ಸಲಹೆಗಳನ್ನು ಅಳವಡಿಸಿ ಇಲ್ಲಿ ತರಬೇಕು. ಅಲ್ಲಿಯ ವರೆಗೆ ಈ ಮಸೂದೆಯ ಚರ್ಚೆಗೆ ಒತ್ತಾಯ ಮಾಡಬಾರದು. ಇದನ್ನು ವಾಪಸ್ಸು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ.—ಈ ಬಿಲ್ ಬಿಸಿನೆಸ್ ಅಡವೈಜರಿ ಕಮೀಟಿಯಲ್ಲಿ ಅಪ್ರೂವ್ ಆಗಿಲ್ಲ. ೭ ದಿವಸ ಕಾಲಾವಕಾಶದ ನೋಟೀಸು ಇಲ್ಲದೇ ಇದನ್ನು ತಂದಿದ್ದಾರೆ. ಅದು ಒಂದು ವಿಚಾರ. ಇನ್ನು ಎರಡನೆಯ ವಿಚಾರ ರಾಜ್ಯದಲ್ಲಿ ಎರಡನೆಯ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯ ಬಗ್ಗೆ ಮುಖ್ಯ ಮಂತ್ರಿಗಳು ಸದನದಲ್ಲಿ ಹೇಳಿಕೆ ಕೊಟ್ಟಿರುವುದನ್ನು ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಅದರ ಪರಿಣಾಮ ಏನು ಆಗುತ್ತದೆ? ಯು. ಜಿ. ಸಿ. ಒಪ್ಪದೇ ಐ. ಸಿ. ಎ. ಆರ್. ಗ್ರಾಂಟು ಕೊಡದೇ

ಹೋದರೆ, ಎರಡನೆಯ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದರೂ ಕೂಡ, ಪಡೆಯತಕ್ಕ ಡಿಗ್ರಿಯನ್ನು ಯು. ಜಿ. ಸಿ. ಯವರು ರೆಕಗ್ನೈಜ್ ಮಾಡುವುದಿಲ್ಲ. ಐ. ಸಿ. ಎ ಆರ್. ಒಪ್ಪಿಗೆ ಕೊಡದೇ ಹೋದರೆ ಐ. ಸಿ. ಎ. ಆರ್. ಅವರಿಂದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಗ್ರಾಂಟ್ ಬರುವುದಿಲ್ಲ. ಯು. ಜಿ. ಸಿ. ಅನುಮತಿ ಕೊಡದೇ ಐ. ಸಿ. ಎ. ಆರ್. ಹಣ ಬರದೇ ಹೋದರೆ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದರಿಂದ ರಾಜ್ಯ ಸರ್ಕಾರ ಹೇರಳವಾಗಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲದೇ ಇರುವಾಗ ಆತುರಾತುರವಾಗಿ ಈ ಮಸೂದೆಯನ್ನು ತಂದು ಪಾಸ್ ಮಾಡುವುದರಲ್ಲಿ ಅರ್ಥವಿಲ್ಲ. ಇದರಿಂದ ರಾಜ್ಯಕ್ಕೆ ದೊಡ್ಡ ಹೊಡೆತ ಬೀಳುತ್ತದೆ. ಇದನ್ನು ಮಾಡಲೇ ಬೇಕು ಎಂದು ಇದ್ದರೆ ಯು. ಜಿ. ಸಿ. ಅವರ ಪರ್ಮಿಷನ್ ತೆಗೆದುಕೊಂಡು, ಎ. ಸಿ. ಆರ್. ಗ್ರ್ಯಾಂಟ್ ತೆಗೆದುಕೊಂಡು ಈ ಸಭೆಯ ಮುಂದೆ ತರಲಿ. ಕೊಠಾರಿ ಕಮೀಷನ್ ಅವರು ಈ ವಿಚಾರ ಅಧ್ಯಯನ ನಡೆಸಿ ಭಾರತದ ದೇಶದಲ್ಲಿ ೨೦ ಕೃಷಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಬಗ್ಗೆ ಮಾಡೆಲ್ ಆಕ್ಟನ್ನು ತಯಾರಿಸಿದ್ದಾರೆ. ಕೊಠಾರಿ ಕಮೀಷನ್‌ನವರು ಹಿಂದೆ ಅನೇಕ ಜನ ಎಕ್ಸ್‌ಪರ್ಟ್ಸ್ ಸೇರಿದ ಒಂದು ಕಮೀಟಿ ಮಾಡಿ ಮಾಡೆಲ್ ಆಕ್ಟ್ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಮಾಡಿದ್ದಾರೆ. ಅಂಥ ಮಾಡೆಲ್ ಆಕ್ಟ ಈಗ ಫೋರ್ಸಿನಲ್ಲಿ ಇದೆ. ರಾಷ್ಟ್ರದಲ್ಲಿ ೨೦ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಹಾಗೆ ಮಾಡೆಲ್ ಆಕ್ಟ ಇದೆ. ಆತುರಾತುರವಾಗಿ ಕೃಷಿ ಸಚಿವರು ತಂದಿರುವ ಮಸೂದಾ ಕಾನೂನು ನೋಡಿದರೆ, ಅದರಲ್ಲಿ ಒಂದೇ ಉದ್ದೇಶ ಇರುವಂತೆ ಕಾಣುತ್ತದೆ. ಕೃಷಿ ವಿಶ್ವವಿದ್ಯಾನಿಲಯಕ್ಕೆ ಇರತಕ್ಕ ಅಟಾನಮಿಯನ್ನು ತೆಗೆದು ಬಿಟ್ಟು ಎಲ್ಲಾ ಅಧಿಕಾರವನ್ನು ಮಾನ್ಯ ಸಚಿವರು ಇಟ್ಟುಕೊಂಡು ಅಧಿಕಾರ ನಡೆಸಬೇಕು ಎನ್ನುವ ದೃಷ್ಟಿಯಿಂದ ಈ ಮಸೂದಾ ಕಾನೂನು ತಂದಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಈಗ ಇರತಕ್ಕ ಮಾಡೆಲ್ ಆಕ್ಟಗೆ ತಿದ್ದುಪಡಿ ತರಬೇಕಾಗಿತ್ತು. ಆ ರೀತಿ ತಿದ್ದುಪಡಿ ತಾರದೇ ಬೇರೆ ಒಂದು ಮಸೂದಾ ಕಾನೂನು ತಂದಿದ್ದಾರೆ. ಇದರಲ್ಲಿ ಕ್ರಾಂತಿಕಾರದ ಬದಲಾವಣೆ ಏನೂ ಇಲ್ಲ.

Mr. DEPUTY SPEAKER.—I cannot allow such a marathon speech on a point of order.

†Sri C. M. ARUMUGHAM (G.K.F.).—Sir, I rise to a Point of Order. The Bill that has been introduced is not in conformity with certain norms and rules laid down by the University Grants Commission. The University Grants Commission will have to be consulted before starting any University. I do not know whether the Hon'ble Minister Sri K. H. Patil has gone through the report of the University Grants Commission; it says :

> "The establishment of a new University has to be considered in relation to the availability of competent staff and adequate financial resources, and the contribution it is likely to make in raising the quality and standard of education. The location of the new University, the supporting educational complex and the administrative and other requirements have also to be considered carefully. The proposal for setting up a new University should be examined in the light of the relevant facts by a Standing Committee"...

This Bill was not sent to the Standing Committee for its consideration. This Bill is shabily drafted by the Draftsman, because the democratic rights have been completely taken away. The Government should be by the people, of the people and for the people. If this Bill is enacted, it will be just like, Government *off* the people, *far* the people and *buy* the people. If this Bill is enacted, it will be an Act of Sri K. H. Patil, Minister, for Sri K. H. Patil, Minister, and by Sri K. H. Patil, Minister. The University Grants Commission or the Indian Council of Agricultural Research have not been consulted..... Therefore, we will not be happy if discussion is allowed on this Bill. It would be better if the Government withdraws it and the same is redrafted.

†Sri B. B. SAYANAK (Belgaum).—Sir, I rise to a Point of Order. The Business Advisory Committee had recommended 8 Bills apart from the Land Reforms Amendment Bill for discussion from 10th to 25th. We have passed 5 Bills and 3 are yet to be passed. This new Bill has come up abruptly for discussion. If the Chair were to allow the Government to bring in any Bill at any time, it is not possible for the House to discuss it. I want to know whether the Business Advisory Committee has decided for the discussion of this new Bill ?

Mr. DEPUTY SPEAKER.—I can assure the hon. member that we will have a general discussion on this Bill and we will not pass it today.

Sri T. R. SHAMANNA.—Sir, I have a very small Point of' Order. The title of the Bill is wrongly worded. Instead of the Mysore State Agricultural University Bill, 1973,' it should have been 'Sri K. H. Patil University Bill.' The title of the Bill itself is wrong. That is my Point of Order.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಬಿಲ್ ಇಂಟರ್‌ಡ್ಯೂಸ್ ಮಾಡುವು ದಾದರೆ ಪ್ರತಿಭಟನೆ ಮಾಡಬೇಕಾಗುತ್ತದೆ. ಉದ್ದೇಶಪೂರ್ವಕವಾಗಿ ತಂದೇತರು ತ್ತೇವೆಂದು ಹಟಮಾರಿತನ ಮಾಡಿದರೆ ಮಿತಿಮೀರಿ ಸರ್ವಾಧಿಕಾರ ನಾಡಿದಂತಾಗು ತ್ತದೆ. ನಾವು ಅದನ್ನು ಟಾಲರೇಟ್ ಮಾಡುವುದಕ್ಕಾಗುವುದಿಲ್ಲ. ಬಿಲ್ಲನ್ನು ತಂದೇ ತರುತ್ತೇವೆಂದು ಹೇಳಿದರೆ ನಾವು ಬೇರೆ ಮಾರ್ಗ ಅನುಸರಿಸಬೇಕಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಇದು ಒಂದು ಡಿಕ್ಟೇಟರ್‌ಶಿಪ್ ಬಿಲ್ಲಾಗುತ್ತದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಸಿ. ಬೈರೇಗೌಡ.—ಮುಖ್ಯ ಮಂತ್ರಿಗಳು ೨-೩ ತಿಂಗಳ ಹಿಂದೆ, ನಮ್ಮ ರಾಜ್ಯದಲ್ಲಿ ಹೊಸದಾಗಿ ಯಾವ ವಿದ್ಯಾ ಸಂಸ್ಥೆಗಳನ್ನೂ ತೆಗೆಯುವುದಿಲ್ಲ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ವಿದ್ಯಾ ಮಂತ್ರಿಗಳನ್ನು ಇಂಥ ಕಡೆ ಕಾಲೇಜು ಆಗ ಬೇಕು, ಇಂಥ ಕಡೆ ಹೈಸ್ಕೂಲ ಆಗಬೇಕು ಎಂದು ಕೇಳಿದರೆ ಮುಖ್ಯ ಮಂತ್ರಿಗಳು ಆ ರೀತಿ ಸ್ಟೇಟ್‌ಮೆಂಟ್ ಮಾಡಿದ್ದಾರೆ, ಈ ಪಾಲಸಿಯನ್ನು ಮುಖ್ಯ ಮಂತ್ರಿಗಳು ಅಥವಾ ಸರ್ಕಾರ ವಾಪಸ್ ತೆಗೆದುಕೊಳ್ಳುವವರೆಗೆ ಯಾವ ಕಾಲೇಜ ಅಥವಾ ಸ್ಕೂಲನ್ನು ತೆಗೆಯುವುದಕ್ಕೂ ಸಾಧ್ಯವಿಲ್ಲ ಎಂದು ವಿದ್ಯಾ ಮಂತ್ರಿಗಳು ಹೇಳಿದ್ದುಂಟು.

†ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಮಾಡಿಲ್ ಆಕ್ಟ್ ಫೋರ್ಸಿನಲ್ಲಿದೆ. ಏನಾದರೂ ಅಕಸ್ಮಾತ್ ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕು ಎಂದರೆ ಅದಕ್ಕೆ ಅಮೆಂಡ್‌ಮೆಂಟ್ ತರಬಹುದಾಗಿತ್ತು. ಯು. ಜಿ. ಸಿ. ಒಪ್ಪಿ, ಎಲ್ಲ ತಜ್ಞರು ಒಪ್ಪಿ ಮಾಡಿದಂಥ ಬಿಲ್ಲನ್ನು ರೀಪಿಲ್ ಮಾಡಿ ಹೊಸ ಬಿಲ್ ತರುವ ಅವಶ್ಯ ಕತೆ ಸರ್ಕಾರಕ್ಕೆ ಏನಿತ್ತು ?

ಎರಡನೆಯದು, ಅಗ್ರಿಕಲ್ಚರಲ್ ಯೂನಿವರ್ಸಿಟಿ ಸ್ಥಾಪನೆಮಾಡಿ ಇಲಾಖೆ ಯಿಂದ ಅಧೀಸರನ್ನು ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿ ಅಲ್ಲಿ ನಿಗದಿಯಾದ ಕೆಲಸಕ್ಕೆ ಸೈಂಟಿಸ್ಟ್ ಟ್ರೈನಿಂಗ್ ಆಗಿರುವವರನ್ನು ಇಲ್ಲಿಗೆ ಟ್ರಾನ್ಸ್‌ಫರ್ ಮಾಡುವುದು, ಹಾಗೆ ವರ್ಗಾಂತರ ಮಾಡುವುದರಿಂದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಏನೇನು ಸ್ಯಾಂಕಟಟ ಇದೆಯೋ ಅಪನ್ನು ಹಾಳು ಮಾಡಿ ಅಗ್ರಿಕಲ್ಚರಲ್ ಮಿನಿಸ್ಟರು ತಮ್ಮ ಸ್ವಾರ್ಥವನ್ನು ಬೆಳೆಸಿಕೊಳ್ಳುವುದಕ್ಕೆ ಹೊರಟಿದ್ದಾರೆ. ಇದರಿಂದ ಪ್ರಜಾಪ್ರಭುತ್ವದ ಕೊಲೆಯಾಗು ತ್ತದೆ. ಇದಕ್ಕೆ ಅವಕಾಶ ಕೊಡಕೂಡದು. ಈ ಬಿಲ್ಲನ್ನು ಪಾಸ್ ಮಾಡುವುದರಿಂದ ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತದೆ. ಇದನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಮ್ಮ ಮುಖಾಂತರ ಘನ ಹೊಂದಿದಂಥ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಪ್ರಜಾಪ್ರಭುತ್ವ ನೀತಿಯನ್ನು ದಮನ ಮಾಡತಕ್ಕ ಶಕ್ತಿಗೆ ಪೂರಕವಾಗಿ ಈ ಬಿಲ್ಲನ್ನು ತಂದಿದ್ದೀರಿ. ಈಗಲಾದರೂ ಕೂಡ ಇದನ್ನು ಯಾರು ಯಾರು ಪರಿಶೀಲನೆ ಮಾಡಬೇಕೋ ಅವರು ಮಾಡಿಸುತ್ತ ಬದಲಾವಣೆಗಳನ್ನು ಮಾಡಿ ಸೂಕ್ತ ಕಾಲದಲ್ಲಿ ತರುವುದು ವಿಹಿತ ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇಲ್ಲವೇ ಇದ್ದರೆ ಉಗ್ರವಾದ ಪ್ರತಿಭಟನೆ ಮಾಡಬೇಕಾಗುತ್ತದೆ.

†ಶ್ರೀ ಕೆ. ಹೆಚ್. ಪಾಟೀಲ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ಈ ಸದನದ ಎದುರು ಎರಡು ಮಾತುಗಳ ಮೇಲೆ ಆಕ್ಷೇಪಣೆ ಮಾಡಿದರು. ಈ ಎರಡರಲ್ಲಿ ಒಂದಕ್ಕೆ ಈಗಾಗಲೇ ರೂಲಿಂಗ್ ಕೊಟ್ಟಿರುವುದರಿಂದ, ಇಂದು ಈ ಬಗ್ಗೆ ಚರ್ಚೆ ಆಗಬೇಕು ಎಂದು ಹೇಳಿರುವುದರಿಂದ ಇದು ಚರ್ಚೆ ಆಗಬೇಕಾದ್ದು ಈ ಸದನದ ಕರ್ತವ್ಯ ಹಾಗೂ ನನ್ನ ಕರ್ತವ್ಯವೂ ಆಗಿದೆ. ಇದನ್ನು ವಿರೋಧ ಪಕ್ಷದವರು ಉಗ್ರವಾಗಿ ವ್ಯಕ್ತಿಶಃ ಟೀಕೆ ಮಾಡಿದರೂ ಕೂಡ ಅಕ್ಷರಶಃ ತಾಳ್ಮೆಯಿಂದ ಎಲ್ಲವನ್ನು ಕೇಳಿದೆ. ಅದೇ ರೀತಿ ವಿರೋಧ ಪಕ್ಷದವರೂ ಕೂಡ ಅದೇ ತಾಳ್ಮೆಯಿಂದ ಕೇಳಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅವರು ಹೇಳಿದಂತಹ ವ್ಯಂಗ್ಯವಾದ ಮಾತುಗಳಾಗಲಿ, ಉಗ್ರವಾದ ಟೀಕೆಗಳಾಗಲಿ ಏನು ಮಾಡಿದ್ದಾರೋ ಅದರ ಬಗ್ಗೆ ನಿಜವಾದ ವಸ್ತುಸ್ಥಿತಿ ನಾನು ಹೇಳಿದಾಗ, ಅದರ ಮೂಲ ಗೊತ್ತಾದಾಗ ಅವರಿಗೇ ಅರ್ಥವಾಗುತ್ತದೆ. ಆದುದರಿಂದ. ಅವರು ಸಿಟ್ಟು ಮಾಡಿಕೊಂಡು ಏಳಬಾರದು ಎಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ ಬಗ್ಗೆ ಹೇಳಬೇಕಾದರೆ ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡುವುದಕ್ಕೋಸ್ಕರ ಈ ಬಿಲ್ಲು ಬಂದಿದೆ ಎಂದು ಸದಸ್ಯರು ಯಾರಾದರೂ ಭಾವನೆ ಮಾಡುವುದಾದರೆ ಅವರಲ್ಲಿ ನಾನು ಕಳಕಳಿಯಿಂದ ನಿವೇದನೆ ಮಾಡಿಕೊಳ್ಳುತ್ತೇನೆ, ಮೈಸೂರು ರಾಜ್ಯದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಆಫ್ ಸೈನ್ಸ್ ಬಿಲ್ ಯಾವ ರೀತಿ ಆಗಿರಬೇಕು ಎಂಬುದನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆದುದರಿಂದ ನಾವು ಇದನ್ನು ಮಾಡೆಲ್ ಬಿಲ್ ಆಗಿ ತಂದಿದ್ದೇವೆ. ಮಹಾರಾಷ್ಟ್ರದಲ್ಲಿ ಇದ್ದಂಥ ಬಿಲ್ಲನ್ನೂ ಕೂಡ ಕನ್ಸಿಡರ್ ಮಾಡಿದ್ದೇವೆ, ಭಾರತ ದೇಶದಲ್ಲಿ ಇರತಕ್ಕಂಥ ಎಲ್ಲಾ ಬಿಲ್ಲುಗಳನ್ನೂ ಸಹ ತರಿಸಿ ತಜ್ಞರ ಸಮಿತಿಯನ್ನು ನೇಮಿಸಿ, ಆ ಸಮಿತಿಯೊಂದಿಗೆ ವಿಚಾರಣೆ ಮಾಡಿ, ಐ. ಸಿ. ಎ. ಆರ್. ಹತ್ತಿರವೂ ಚರ್ಚಿಸಿ ಅವರ ಸಲಹೆ ಪಡೆದು ಈ ಬಿಲ್ಲನ್ನು ಡ್ರಾಫ್ಟ್ ಮಾಡಲಾಗಿದೆ. ಈ ಡ್ರಾಫ್ಟ್ ಬಿಲ್ ಮಂತ್ರಿಗಳಾಗಲಿ ಅಥವಾ ಮಂತ್ರಿಗಳ ಕೈಯಲ್ಲಿ ಇರತಕ್ಕಂಥಾ ಜನಗಳಾಗಲಿ ಮಾಡಲಿಲ್ಲ. ಯೂನಿವರ್ಸಿಟಿಯಲ್ಲಿರತಕ್ಕಂಥ ಹೊರಗಿನವರು ಮತ್ತು ಒಳಗಿನ ಜನರನ್ನು ಸೇರಿಸಿ ಈ ಬಿಲ್ಲನ್ನು ರಚನೆ ಮಾಡಿದ್ದೇವೆ.

ಆದರೆ ಈವೊತ್ತಿನ ದಿವಸ ಈ ಬಿಲ್ಲಿನಲ್ಲಿ ಅನೇಕ ದೋಷಗಳು ಇವೆ ಎಂದು ಅವರಿಗೆ ಕಂಡು ಬಂದಿರಬಹುದು. ಆ ಬಗ್ಗೆ ಬೇಕಾದರೆ ಅವರಿಗೆ ಸೂಕ್ತ ಸಮಯದಲ್ಲಿ ಇದಕ್ಕೆ ಅಮೆಂಡ್‌ಮೆಂಟ್ ಮಾಡುವ ಅವಕಾಶ ಇದೆ. ಈ ದೃಷ್ಟಿಯಿಂದ ಇದರ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಲಿಕ್ಕೆ ಬರುವುದಿಲ್ಲ.

ಇನ್ನು ಎರಡನೆಯದಾಗಿ ಇದಕ್ಕೆ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಪರವಾನೆಗೆ ಇಲ್ಲ, ಆದುದರಿಂದ ಇದು ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಪರವಾನೆಗೆ ಇಲ್ಲದೆ ಹೇಗೆ ಬರುತ್ತದೆ ಎಂದು ಶ್ರೀಮಾನ್ ಆರ್ಮುಗಂರವರು ಹೇಳಿದರು. ಯೂನಿವರ್ಸಿಟಿ ಆದನಂತರ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಪರವಾನಿಗೆ ಪ್ರಶ್ನೆ ಬರುತ್ತದೆ ಮತ್ತು ಗ್ರಾಂಟ್ಸ್ ಕೊಡುವ ವಿಚಾರ ಆವಾಗ ಬರುತ್ತದೆ. ಸೆಕ್ಷನ್ ೧೭ರಲ್ಲಿ ಈ ಬಗ್ಗೆ ಹೇಳಿದೆ. ಆದುದರಿಂದ ಅವರು ಹೇಳಿದ ಪ್ರಶ್ನೆ ಉದ್ಭವಿಸುವುದಿಲ್ಲ. ಇದು ಕ್ರಮಬದ್ಧವಾಗಿ ಮಂಡಿಸಿದಂಥ ಬಿಲ್ ಆದುದರಿಂದ ಇದನ್ನು ಚರ್ಚೆಗೆ ತೆಗೆದು ಕೊಳ್ಳುವುದು ಸೂಕ್ತವಾಗಿದೆ, ನ್ಯಾಯವಾಗಿದೆ ಎಂದು ಹೇಳುತ್ತೇನೆ.

Mr. DEPUTY SPEAKER.—Now I will deal with the point of order raised. The hon. members have raised an objection that the Bill cannot be gone into because the University Grants Commission have said certain things and the Chief Minister has said certain other things. I might say here that this Bill has not come on behalf of Sri K. H. Patil. It is not fair to say so. This Bill has come for and on behalf of Government and nothing further than that. The hon. members cannot impute any motive to this Bill. If they want to oppose this Bill, they have got a number of opportunities to point out the defects during the course of the discussion of the Bill.

Sri C. M. ARUMUGHAM.—We will never agree for the discussion of this Bill.

Mr. DEPUTY SPEAKER.—The hon. member cannot argue when I am on my legs. As regards the objection *viz.*, the University Grants Commission has said certain things, I might say that this Commission will not come into picture for our purposes. For our purposes, what we require is the recommendation of the Governor for introduction of this Bill. I have received the recommendation of the Governor which I would read out just now.

"In pursuance of clause 3 of Article 207 of the Constitution of India, I, Mohanlal Sukhadia, Governor of Mysore....."

(The entire Opposition members reached near the dais of the Chair and went on shouting No No.)

Mr. DEPUTY SPEAKER.—I request the hon. members to resume their seats.

(There was uproarious scenes in the House)

Mr. DEPUTY SPEAKER.—The Hon. Minister for Agriculture has not yet introduced the Bill. Sri Shamanna has also given notice of an amendment to this Bill.

(The members of the Opposition sat on the aisle of the House and went on shouting)

Mr.. DEPUTY SPEAKER.—I shall read out the recommendation of the Governor.

(uproar)

Mr. DEPUTY SPEAKER.—I request the hon. members to occupy their seats. Unfortunately Sri Devegowda is not here.

(The Opposition did not heed to the advice of the Deputy Speaker and went on shouting)

(Mr. DEPUTY SPEAKER.—Tried to read out the message of the Governor in the midst of noise)

(Sri K. H. Patil rose)

(The Opposition members at this stage encircled the Chair and went on shouting)

3-30 P. M.

Mr. DEPUTY SPEAKER.—You please first vacate and go down. If you are under an impression that by surrounding me you would suceed to coerce me I can assure you that you are totally mistaken. I can assure you clearly and candidly that you can never brow-beat me or cource me by such things. Such things will have absolutely no effect upon me. But I shall certainly be amenable to reasons and nothing else but reason.

(Sri Byre Gowda started saying something which was not heard)

Mr. Byre Gowda is trying to be heroic. I know he is a young man, but he must have restraint. When I am on my legs he must have patience. Cannot Sri Aumugham take care of him? There is a lot of trouble.

Let me be heard. This is not the way of maintaining dignity and decorum of the House. This is not the way of working a parliamentary system of Government. If we have differences, we can settle them amongst ourselves. If the Hon. Members have diffesences, they can see the leaders on both sides and resolve them. If they are not satisfied they have a right to disagree and even to have a walk out. Our performance is watched not only by those in the gallery but also through the papers by the public in our country. But whatever the unwanted and undesired scenes within our legislatures, whatever unhappy developments in our country they may be for disturbance of public peace–are made much of by our hostile neighbours. I believe the Hon. Members can understand what I mean by hostile neighbours. Before they appear in our newspapers, they are broadcast by the radios by our hostile neighbours. Therefore we must have a sense of proportion and should not do anything which will give an inspiration to our hostile neighbours.

I had already made up my mind as to what I should do. But some hon. members have unnecessarily surrounded me. I now adjourn the House to meet tomorrow at 9 A.M.

(The House adjourned at Forty Minutes past Three of the Clock to meet at Nine A. M. on Saturday, the 19th May 1973.)

MYSORE LEGISLATIVE ASSEMBLY

Saturday, 19th May 1973/ Vaishakha 29,1895 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (Smt. K. S. NAGARATHNAMMA) in the Chair.

STARRED QUESTIONS

(to which oral answers were given)

LIFT IRRIGATION SCHEME FROM MADAGADA TANK OF SHIKARIPUR TALUK

500. Sri K. YENKATAPPA (Shikaripur).—

Will the Minister for Public Works and Electricity be pleased to state:—

(a) whether lift irrigation scheme for Madagada tank and water supply scheme to the Udugani and Talgund Hoblies of Shikaripur Taluk will be taken up;

(b) Whether it has come the notice of Government that the said Udugani and Talgund hoblies are drought affected area;

(c) whether it has also come to the notice of Government that no irrigational schemes can be implemented in this area;

(d) if so, whether the said lift irrigation scheme will be taken up immediately ?

Sri H. N. NANJE GOWDA (Minister of State for Major Irrigation) [on behalf of Sri H. M. CHANNABASAPPA (Minister for Public Works and Electricity)].—

(a) No.
(b) No.
(c) Yes.
(d) No.

ಶ್ರೀ ಕೆ. ಯಂಕಟಪ್ಪ.— ಸ್ವಾಮಿ, ಇದರಲ್ಲಿ (ಅ), (ಆ) ಮತ್ತು (ಈ) ಪ್ರಶ್ನೆಗಳಿಗೆ ವಿಷಯ ಏನೂ ಹೇಳಲಿಲ್ಲ. ಒಂದಕ್ಕೆ ಮಾತ್ರ ಬಂದಿದೆ ಎಂದು ಹೇಳಿದ್ದೀರಿ. ಬಂದಿದೆ ಎನ್ನತಕ್ಕ ವಿಷಯಕ್ಕೆ, ಉಡುಗಣಿ ಮತ್ತು ತಾಳಗುಂದ ಈ ೨ ಹೋಬಳಿಗಳು ಬರಗಾಲ ಪೀಡಿತ ಪ್ರದೇಶಗಳು ಎಂದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದಿರಿ. 'ಸಿ' ಪ್ರಶ್ನೆಗೆ ಉತ್ತರವಾಗಿ ಈ ಪ್ರದೇಶಗಳಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯಗತಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಈ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಹೊಸದಾಗಿ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವೇ, ಹಾಗೆ ಮಾಡಲಿಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

†ಶ್ರೀ ಎಚ್. ಎನ್. ನಂಜೇಗೌಡ.— ಯಾವುದೇ ನೀರಾವರಿ ಕೆಲಸ ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದೇವೆ ಮುಂದೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೇವೆ.

ಶ್ರೀ ಕೆ. ಯಂಕಟಪ್ಪ.— ಆದರೆ ತಾವು ಈ ವಿಷಯದಲ್ಲಿ ರೆಪ್ರೆಸೆಂಟೇಷನ್ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ನನಗೂ ಸಹ ಪತ್ರ ಬರೆದಿದ್ದಾರೆ. ಮದಗದ ಕೆರೆ ಯಾತ ನೀರಾವರಿಯಿಂದ ಉಡುಗಣಿ ಮತ್ತು ತಾಳಗುಂದ ಹೋಬಳಿಗಳಿಗೆ ನೀರುಕೊಡಲು ಸರ್ವೆ ಎಸ್ಟಿಮೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎನ್ ನಂಜೇಗೌಡ.— ಯಾತ ನೀರಾವರಿಯಿಂದ ನೀರು ಕೊಡಬೇಕಾದರೆ ೧೩ ಮೈಲಿ ಹೋಗಬೇಕಾಗುತ್ತದೆ ಮತ್ತು ೩೦೦ ಅಡಿ ಎತ್ತರದ ಗುಡ್ಡಗಳನ್ನು ಕ್ರಾಸ್‌ಮಾಡಿ ಹೋದರೆ ಅನುಕೂಲವಾಗುವ ಪರಿಸ್ಥಿತಿ ಇದೆ. ಜಮೀನಿನ ಮಟ್ಟಕ್ಕೂ ನೀರಿನ ಮಟ್ಟಕ್ಕೂ ೨೦೦ ಅಡಿ ವ್ಯತ್ಯಾಸವಿದೆ. ಇದು ತಾಂತ್ರಿಕವಾಗಿ ಸೂಕ್ತವಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಆದುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ. ಈ ಎರಡು ಹೋಬಳಿಗಳಲ್ಲಿ ೨೬ ಬರಗಾಲ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ೮ ಕೆಲಸ ಮುಗಿಸಿದ್ದೇವೆ.

ಶ್ರೀ ಕೆ. ಯಂಕಟಪ್ಪ.— ತಾವು ಹೇಳಿದ ಹಾಗೆ ೨೬ ಕೆಲಸಗಳಲ್ಲಿ ೮ ಕೆಲಸ ಮುಗಿಸಿದ್ದೀರಿ, ಬಾಕಿದ್ದು ಇನ್ನೂ ಉಳಿದಿದೆ. ಇಷ್ಟು ಕೆಲಸ ಮಾಡಿದರೆ ಅಲ್ಲಿ ಮಳೆ ಕಡಿಮೆ ಇರುವುದರಿಂದ, ಆ ಪರಿಸ್ಥಿತಿಯೊಳಗೆ ಮಾಡಿದಂಥ ಕಾರ್ಯದಲ್ಲಿ ಜಯಶೀಲರಾಗುವುದಕ್ಕೆ ಸಾಧ್ಯವಾಗದೇ ಇರುವುದರಿಂದ, ೨೦೦ ಅಡಿ ತಗ್ಗಿನಿಂದ ನೀರು ಎತ್ತಿದರೆ ಎಷ್ಟು ಎಕರೆಗೆ ನೀರಾವರಿ ಆಗಬಹುದು ? ಎಸ್ಟಿಮೇಟ್ ಮಾಡಿದರೆ ಒಳ್ಳೆಯದಲ್ಲವೆ ? ಕೆಲವು ಪ್ರದೇಶಗಳಲ್ಲಿ ಬೋರ್‌ವೆಲ್ಸ್ ಸ್ಕೀಮುಗಳನ್ನು ಸರಕಾರ ತೆಗೆದುಕೊಂಡು ಬೋರವೆಲ್ಸ್ ಹಾಕಿ ಇಂತಹ ಕೆಲವು ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† Indicates that the remarks or speeches have not been revised by the member concerned.

ಶ್ರೀ ಎಚ್. ಎನ್. ನಂಜೇಗೌಡ.— ಯಾತ ನೀರಾವರಿ ಭಾರಿ ದುಬಾರಿ ಆಗುವುದಲ್ಲದೆ ತಾಂತ್ರಿಕವಾಗಿ ಆದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಬಂದಿರುವುದರಿಂದ ಹಾಗೆ ಉತ್ತರ ಕೊಟ್ಟಬದೆ. ಅದನ್ನು ಪರಿಶೀಲನೆ ಮಾಡಿದ ಮೇಲೆಯೇ ಉತ್ತರ ಕೊಟ್ಟಿರುವುದು. ತಾಂತ್ರಿಕವಾಗಿ ಏನು ಮಾಡವುದಕ್ಕೂ ಸಾಧ್ಯವಿಲ್ಲ ಎನ್ನುತಕ್ಕದ್ದು ವರದಿಯಾಗಿದೆ. ಅದನ್ನು ಮಾತ್ರ ಹೇಳಿದ್ದೇನೆ.

REHABLITATION OF WET-SWEEPERS IN SHIKARIPUR TOWN

501. Sri K. YENKATAPPA (Shikaripur).—

Will the Minister for Municipal Administration be pleased to state :—

(a) whether it is under the contemplation of the Government to demolish the present huts where wet-sweepers of Shikaripur Town are residing and to send them some where else by constructing the houses;

(b) if so, whether it is a fact that the survey No. 6 where they are residing at present was granted to some one else at upset price during the Administator's regime;

(c) the length and breadth of each site and their cost;

(d) whether it has come to the notice of the Government that this site is a prominent site in Shikaripur Town; if so, the reason for granting it at upset price;

(e) whether the revenue of the Municipality is reduced on account of this;

(f) whether the sites granted at survey Nos. 6 and 7 would be cancelled as irregularities took place during Administrator's regime;

(g) the reason for granting the sites at survey No. 6 to some one else by overlooking the wet-sweepers even through they were residing there since many years ?

Sri B. BASAVALINGAPPA (Minister for Municipal Administration).—

(a) Yes.

(b) Yes.

(c) The length, breadth and cost of each site is as follows :—

(1) Site Nos. 5, 6, 7, 8, 9 and 10=20′×110′

(2) Site Nos. 1, 2, 3, and 4=20′×80′

Cost :— Rs. 2 per square yard.

(d) Yes. The reasons for granting the sites at upset prices during 1966–67 cannot be said at this juncture and the records do not show the reasons therefor.

(e) Since they were disposed off in that manner the question of Revenue does not arise.

(f) This will be considered.

(g) As the land acquired at survey numbers 11–1 and 19–2 at Kanur village has been granted to them, this land has been granted to some one else.

ಶ್ರೀ ಕೆ. ಯಂಕಟಪ್ಪ.— ಸ್ವಾಮಿ 'ಇ'ನಲ್ಲಿ ಒಂದೊಂದು ಸೈಟಿನ ಉದ್ದ ಅಗಲ ಎಷ್ಟು ಮತ್ತು ಬೆಲೆ ಎಷ್ಟು ಎಂದು ಕೇಳಿದ್ದಕ್ಕೆ ಹೇಳಿದ್ದೀರಿ. ಬೆಲೆ ಹೇಳಿದ ಮೇಲೆ ಪುರಸಭೆ ಆದಾಯ ಕಡಿಮೆಯಾಗಲಿಲ್ಲ, ಇಲ್ಲವೇ ಜಾಸ್ತಿ ಎನ್ನುವ ಬಗ್ಗೆ ಪೂರ್ಣವಾಗಿ ಏನೂ ಹೇಳಲಿಲ್ಲ. ಆದುದರಿಂದ ಆ ಸೈಟುಗಳನ್ನು ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಏನು ಕೊಟ್ಟಿದ್ದೀರಿ, ಅವುಗಳ ಬಗ್ಗೆ ತಾವು ಅತಿ ಶೀಘ್ರವಾಗಿ ಪರಿಶೀಲಿಸಿ ಅದನ್ನು ರದ್ದುಪಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಅದು ಮುಖ್ಯವಾದ ಸ್ಥಳವಾದುದರಿಂದ ಆ ಸೈಟುಗಳು ಕೊಟ್ಟಿರುವುದನ್ನು ರದ್ದುಪಡಿಸದೇ ಇದ್ದರೆ ಪುರಸಭೆಗೆ ಆದಾಯ ಕಡಿಮೆ ಬರುತ್ತದೆ. ಆದರ ಬಗ್ಗೆ ತಮ್ಮ ಅಭಿಪ್ರಾಯವೇನು ?

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ಏನು ಪ್ರದೇಶವಿದೆ, ಅದು ನಿಜವಾಗಿ ಬೆಲೆ ಬಾಳತಕ್ಕ ಪ್ರದೇಶ. ಷೆಡ್ಯೂಲ್ ಕಾಸ್ಟ, ಷೆಡೂಲ್ ಟ್ರೈಬ್ ಜನಗಳಿಗೆ ಸೈಟ್ಸ್‌ಮಾಡಿ ಕೊಡಬೇಕು ಎಂದು ಮೊದಲು ತೀರ್ಮಾನವಾಗಿತ್ತು. ಮತ್ತು ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಬೇರೆಯವರಿಗೆ ವಿಲೇವಾರಿ ಮಾಡಿದ್ದಾರೆ ಅದು ಸರಿಯಲ್ಲ ಎಂದು ಡೆಪುಟಿ ಕಮೀಷನರ್ ರೆಸಲ್ಯೂಷನ್ ಸಸ್ಪೆಂಡ ಮಾಡಿದ್ದಾರೆ. ಆದುದರಿಂದ ಯಾರಿಗೋಸ್ಕರ ಅದು ಅಕ್ವೈರ ಆಗಿತ್ತೋ ಅವರಿಗೆ ಸಿಗಬೇಕು ಎಂದು ಸರಕಾರದ ನಿರ್ದೇಶ ಇರುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ.— ಹಿಂದಿನ ನಿರ್ದೇಶನದ ಪ್ರಕಾರ ಸರ್ವೆ ನಂ. ೧೧ ಮತ್ತು ೧೯ರಲ್ಲಿ ಈಗಿರತಕ್ಕ ಸ್ವೀಪರ್ಸ, ಹರಿಜನರಿಗೆ ಕೊಟ್ಟಿದ್ದರು. ೬ನೇ ಸರ್ವೆ ನಂಬರ ಜಾಗದಲ್ಲಿ ಇರುವವರನ್ನು ಶಿಫ್ಟ್ ಮಾಡಿ, ಆ ಪ್ರದೇಶದಲ್ಲಿ ಕೊಟ್ಟಿದ್ದರು. ಆದರೆ ಅದೇ ೬ನೇ ಸರ್ವೆ ನಂಬರಿನಲ್ಲಿ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಸೈಟುಗಳನ್ನು ಮಾಡಿ ಬೇರೆಯವರಿಗೆ ಕೊಟ್ಟಿದ್ದಾರೆ. ಅವರನ್ನು ಶಿಫ್ಟ್ ಮಾಡಿದ್ದಾರೆ. ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ೬ ಮತ್ತು ೬ನೇ ಸರ್ವೆ ನಂಬರ್‌ನಲ್ಲಿ ಬೇರೆಯವರಿಗೆ ಕೊಟ್ಟಿರತಕ್ಕ ದ್ದನ್ನು ರದ್ದುಪಡಿಸಲಿಕ್ಕೆ ತಾವು ಆದೇಶ ಕೊಟ್ಟಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಡಿವಿಜನಲ್ ಕಮೀಷನರ್ ಕೂಡ ಇದೇ ರೀತಿ ಶಿಫಾರಸು ಮಾಡಿದ್ದಾರೆ. ಯಾರಿಗೋಸ್ಕರ, ಯಾವ ಉದ್ದೇಶಕ್ಕೋಸ್ಕರ ಅಕ್ವೈರ್ ಮಾಡಿತ್ತೋ ಆ ಉದ್ದೇಶಕ್ಕೋಸ್ಕರ ನಾವು ಕಾನೂನು ಪ್ರಕಾರ ಕೊಡಲೇಬೇಕಾಗುತ್ತದೆ. ಆದುದರಿಂದ ತದ್ವಿರುದ್ಧ ಅಡ್ಮಿನಿಸ್ಟ್ರೇರ್ ನಡೆದಿದ್ದರೆ, ಅದನ್ನು ಕ್ಯಾನ್ಸಲ್ ಮಾಡಲಿಕ್ಕೆ ಇವತ್ತೇ ಆದೇಶ ಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಸ್ವಾಮಿ, ಅವರು ನಿಮ್ಮ ಅಡ್ಮಿನಿಸ್ಟ್ರೇಟರ್.

ಶ್ರೀ ಬಿ. ಬಸವಲಿಂಗಪ್ಪ.— ಹೊಸ ಅಡ್ಮಿನಿಸ್ಟ್ರೇಟರ್ ಅಲ್ಲ, ಹಳೇ ಅಡ್ಮಿನಿಸ್ಟ್ರೇಟರ್.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಂತ್ರಿಗಳಲ್ಲಿ ಹೊಸಬರು, ಹಳಬರು ಎಂದು ಇಲ್ಲ. ಮಂತ್ರಿ ಯಾರಾದರೂ ಮಂತ್ರಿ. ಚುನಾಯಿತ ಪುರಸಭೆ ಇಲ್ಲದೇ ಇರುವಾಗ ಆ ಅಡ್ಮಿನಿಸ್ಟ್ರೇಟರ್ ಇಂತಹ ಅವಿವೇಕದ ಅಧಿಕಾರ ಮಾಡುವುದಕ್ಕೆ ಸಾಧ್ಯವಿದೆಯೇ? ಅದನ್ನು ಕಂಟ್ರೋಲ್ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಡ್ಮಿನಿಸ್ಟ್ರೇಟರ್ ಕಾನೂನು ಪ್ರಕಾರ ನಡೆಯದೇ ಹೋದರೆ, ಅಂತಹರಿಗೆ ಸೂಕ್ತ ಶಾಸ್ತಿ ಮಾಡುವುದಕ್ಕೆ ಯಾವತ್ತೂ ತಯಾರಿದ್ದೇವೆ. ೧೯೬೬ನೇ ಇಸವಿಯಲ್ಲಿ ಯಾವ ಸರಕಾರ ಇತ್ತು ನೋಡಿರಿ, ಆಗ ಇದ್ದ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಈ ಅವಿವೇಕ ಆಗಿದ್ದು, ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, ಇದರೊಳಗೆ ಬೇರೆಯವರಿಗೆ ಕೊಡಲಾಗಿದೆ ಎಂದು ಹೇಳಲಾಗಿದೆ. ಬೇರೆಯವರು ಎಂದರೆ ಯಾರು ? ಅಂಥ ಪವರ್ ಫುಲ್ ಪರ್ಸನಾಲಿಟೀಸ್ ಯಾರು? ಮುನಸಿಪಲ್ ಕೌನ್ಸಿಲರೇ ಅಥವಾ ಕಾಂಗ್ರೆಸ್ ಮುಖಂಡರೇ ಅಥವಾ ಇನ್ನು ಯಾರಾದರೂ ವ್ಯಾಪಾರಸ್ಥನೇ, ಸ್ಪಷ್ಟವಾಗಿ ಹೇಳಿ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೇಳಿರತಕ್ಕ ಸೂಚನೆ ಸ್ವಲ್ಪ ನಿಜ ಎಂದು ಕಾಣುತ್ತದೆ. ಯಾರು ಯಾರು ಅಧಿಕಾರದಲ್ಲಿದ್ದರು, ಅವರ ಸಂಬಂಧಗಳಿಗೆ ಕೊಟ್ಟಿದ್ದಾರೆಂದು ವರದಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಹೆಸರು ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.— ಹೆಸರು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದವರೆ, ಕಾಂಗ್ರೆಸ ಪಕ್ಷಕ್ಕೆ ಸೇರಿದವರೆ ಹೇಳಿ ?

ಶ್ರೀ ಬಿ.ಬಸವಲಿಂಗಪ್ಪ.—ಆಗ ಕಮ್ಯುನಿಷ್ಟ ಪಕ್ಷ ಇರಲಿಲ್ಲ, ನ್ಯೂನತೆಯಾಗಿದೆ ಎಂದು ವರದಿ ಬಂದಿದೆ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಈಗ ಸರ್ವೆ ನಂಬರ್ ೬೮ ವಿಷಯದಲ್ಲಿ ಹೇಳಿದ್ದಾ ಯಿತು. ಈಗ ಸರ್ವೆ ನಂಬರ ೭೮ಲ್ಲಿ ತೆಗೆದುಕೊಂಡರೆ ಅದೂ ಕೂಡ ಮುಖ್ಯ ವಾಗಿರತಕ್ಕಂಥ ಜಾಗ. ಅದೂ ಕೂಡ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಅನ್ಯಾಯ ನಡೆ ದಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆ ಸರ್ವೆ ನಂಬರ ಬಗ್ಗೆ ಆ ರೀತಿ ಏನೂ ರಿಪೋರ್ಟ್‌ನಲ್ಲಿ ಇಲ್ಲ. ಆದರೆ ಮಾನ್ಯ ಸದಸ್ಯರು ಅದರಲ್ಲೂ ಆವಿವೇಕ ನಡೆದಿದೆ ಎಂದು ಹೇಳುತ್ತಾರೆ. ಆ ರೀತಿ ಏನಾದರೂ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದೆಕ್ಕೆ ಸಿದ್ಧವಾಗಿದ್ದೇನೆ. ಈ ಬಗ್ಗೆ ಈವೊತ್ತೇ ನಿರ್ದೇಶನ ಕಳುಹಿಸುತ್ತೇನೆ.

CONSTRUCTION OF VENTED DAM ACROSS KANCHAR RIVER IN BALUGODU VILLAGE

917. Sri K. SUBRAMANYA GOWDA (Belthangady).— Will the Minister for Public Works and Electricity be pleased to state:—

(a) in which year the construction of a Vented Dam across the Kanchar River in Balugodu Village of Sullia Taluk P. W. D. Mangalore Division, South Kanara was sanctioned and what is its estimated cost;

(b) whether the work of this project has been completed ;

(c) if not, the reasons for leaving it in incomplete stage ;

(d) whether Government propose to complete this project and make it useful to the ryots ;

(e) if so, when?

Sri H. N. NANJE GOWDA.—(Minister of State for Major Irrigation) [on behalf of Sri H. M. CHANNABASAPPA (Minister for Public Works and Electricity)]:—

(a) An estimate of Rs. 58,000 has been sanctioned during 1965–66.

(b) The project Work is not completed in all respects.

(c) The construction of a Vented Dam has been completed. The channel already excavated is in deep cutting. During rainy season, heavy logs of floating timber generally blocks the vents resulting in outflanking of the structure, thus causing heavy damage to the structure. This involves heavy repairs every year. In order to avoid heavy maintenance cost, alternative proposals are being examined.

(d) Yes.

(e) After finalisation of the proposals under examination.

ಶ್ರೀ. ಕೆ. ಸುಬ್ರಹ್ಮಣ್ಯಗೌಡ.—ಸ್ವಾಮಿ, ಇದರಲ್ಲಿ (ಇ)ಗೆ ಉತ್ತರವಾಗಿ ತಾವು ಭಾರಿ ಪ್ರಮಾಣದ ನಿರ್ವಹಣ ವೆಚ್ಚವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಪರ್ಯಾಯ ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಆದುದರಿಂದ ಆ ಪರ್ಯಾಯ ಸಲಹೆಗಳು ಏನು ಎನ್ನುವುದನ್ನು ತಿಳಿಸುತ್ತೀರಾ?

†ಶ್ರೀ ಹೆಚ್. ಎನ್. ನಂಜೇಗೌಡ.—ಈಗ ಏನಾಗಿದೆ ಎಂದರೆ ಈಗ ಇರತಕ್ಕಾಂಥಾದ್ದು ಕಾಡು ಪ್ರದೇಶದಲ್ಲಿ ಇರತಕ್ಕಂಥಾದ್ದು. ಈಗ ಡ್ಯಾಮ್ ಏನು ಆಗಿದೆ ಎಂದರೆ ಮರದ ದಿಮ್ಮಿಗಳಿಂದ ನೀರು ಕೆಳಗೆ ಬಿದ್ದು ಪದೇ ಪದೇ ನೀರು ಹರಿದು ಆ ಡ್ಯಾಮ್ ಲೀಕೇಜ ಆಗುವ ಪರಿಸ್ಥಿತಿ ಇದೆ. ಈಗ ಅದಕ್ಕೆ ಬದಲಾಗಿ ಪಂಪುಸೆಟ್ಟು ಹಾಕಿ ಒಂದು ಫೀಡರ ಛಾನಲ್ ಕನಸ್ಟ್ರಕ್ಟ ಮಾಡಿ ಆ ಪ್ರದೇಶಗಳಿಗೆ ನೀರಾವರಿ ಮಾಡಬೇಕು ಎನ್ನುವ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈ ಬಗ್ಗೆ ಅಲ್ಟರನೇಟೀವ್ ಅರೇಂಜಮೆಂಟ್ಸ ಯಾವುದು ಆಗುತ್ತದೋ ಅದನ್ನು ಪ್ರಾರಂಭ ಮಾಡಿರಿ ಎಂದು ಹೇಳಿದ್ದೇವೆ.

ಶ್ರೀ ಕೆ. ಸುಬ್ರಹ್ಮಣ್ಯಗೌಡ.—ಸ್ವಾಮಿ, ಈ ಪ್ರಶ್ನೆಯ (ಈ)ಗೆ ಉತ್ತರವಾಗಿ ಪರಿಶೀಲನೆಯಲ್ಲಿರುವ ಸಲಹೆಗಳನ್ನು ಅಂತಿಮಗೊಳಿಸಿದ ನಂತರ ಎಂದು ಹೇಳಿದ್ದೀರಿ. ಹಾಗಾದರೆ ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಪರಿಂಟೆಂಡೆಂಟ್ ಇಂಜನೀಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್ ಇವರುಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೀವೆ. ಅವರಿಂದ ಉತ್ತರ ಬಂದ ಮೇಲೆ ಈ ಎರಡರಲ್ಲಿ ಯಾವುದು ಮಾಡಬೇಕೋ ಅದಕ್ಕೆ ಸೂಚನೆ ಕೊಟ್ಟು ಪ್ರಾರಂಭ ಮಾಡಿರಿ ಎಂದು ಹೇಳುತ್ತೀವೆ. ಪ್ರಾರಂಭ ಮಾಡಿದ ಮೇಲೆ ಆದಷ್ಟು ಜಾಗ್ರತೆ ಮುಗಿಯುತ್ತದೆ ಎಂದು ಸರ್ಕಾರದ ಅಭಿಪ್ರಾಯ.

LICENCE FEES FIXED FOR BRINGING A CART LOAD OF FUEL

1014. Sri M. SIDDAMADAIAH (Kollegal).—Will the Minister for Agriculture and Forests be pleased to state:—

(a) the rate of licence fees fixed for bringing a cart load of fuel in Yelandur, Chamarajanagar and Kollegal;

(b) the rate of licence fee that was levied in the beginning *i. e.*, four to five years ago;

(c) whether the Government proposes to reduce the existing rate of licence fees?

Sri K. H. PATIL (Minister for Agriculture and Forests).—

(a) Seigniorage fee of Rs. 5-00 per cart load.

(b) Seigniorage fee of Rs. 2-50 per cart load.

(c) No.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ಈ ಪ್ರಶ್ನೆಯ (ಅ) ಉತ್ತರವಾಗಿ ಪ್ರತಿಯೊಂದು ಗಾಡಿಯ ತುಂಬ ಸೌದೆಗೆ ೨–೫೦ ರೂಪಾಯಿಗಳ ತೆರುವಳಿ ದರವನ್ನು ಮಾಡಿದ್ದೀವೆ ಎಂದು ಹೇಳಿದ್ದೀರಿ. ಮತ್ತು ಇದೇ ಪ್ರಶ್ನೆಯ (ಆ)ಗೆ ಉತ್ತರವಾಗಿ ಈವಾಗ ಪ್ರತಿಯೊಂದು ಗಾಡಿಯ ತುಂಬ ಸೌದೆಗೆ ೫ ರೂಪಾಯಿಗಳ ತೆರುವಳಿ ಶುಲ್ಕವನ್ನು ಮಾಡಿದ್ದೀರಿ. ಈ ರೀತಿ ಮಾಡಿರುವುದರಿಂದ ಬಡ ಜನರಿಗೆ ತುಂಬಾ ತೊಂದರೆ ಆಗಿದೆ. ಆದುದರಿಂದ ಇದನ್ನು ಬಡ ಜನರಿಗೆ, ಉಪಕಾರ ಮಾಡುವ ದೃಷ್ಟಿಯಿಂದ ಕಡಿಮೆ ಮಾಡುತ್ತೀರಾ?

†ಶ್ರೀ ಕೆ. ಎಚ್. ಪಾಟೀಲ.—ಈ ಸುಂಕವನ್ನು ಎಲ್ಲದಕ್ಕೂ ಮಾಡಿಲ್ಲ. ಸೌದೆಯನ್ನು ಮನೆಗೆ ಉಪಯೋಗಿಸತಕ್ಕವರಿಗೆ ೨–೫೦ ರೂಪಾಯಿಗಳು ಇದೆ, ಸೌದೆಯನ್ನು ಮಾರಾಟ ಮಾಡುವವರಿಗೆ ಮಾತ್ರ ೫ ರೂಪಾಯಿ ಸುಂಕ ಇದೆ.

ಶ್ರೀ ಎಂ. ಸಿದ್ದವಾದಯ್ಯ.—ಸ್ವಾಮಿ, ಮಾರಾಟ ಮಾಡುವವರಿಗೆ ಈಗ ೫ ರೂಪಾಯಿ ಏನು ಶುಲ್ಕ ಇದೆಯೋ ಅದನ್ನು ೩ ರೂಪಾಯಿಗೆ ಇಳಿಸುವಂತೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ನಾನು ಮೊದಲೇ ಹೇಳಿದ ಹಾಗೆ ಇದು ಮಾರಾಟ ಮಾಡುವವರಿಗೆ ಮಾತ್ರ ೫ ರೂಪಾಯಿ ಇದೆ. ಮನೆ ಉಪಯೋಗಕ್ಕೆ ಆದರೆ ೨–೫೦ ರೂಪಾಯಿಯೇ ಇದೆ.

ಶ್ರೀ ಎಂ. ಸಿದ್ದವಾದಯ್ಯ.—ಈಗ ಇದಕ್ಕೆ ಪರ್ಮಿಟ್ ಕೊಡಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳು ಯಾರು? ಡಿಸ್ಟ್ರಿಕ್ಟ್ ಆಫೀಸರ ಕೊಡುತ್ತಾರೆಯೇ ಅಥವಾ ರೇಂಜ ಆಫೀಸರ್ ಕೊಡುತ್ತಾರೆಯೇ ? ಇದು ಎಲ್ಲಾ ಕಡೆಗೂ ಅನ್ವಯಿಸುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ.—ಇದನ್ನು ಫಾರೆಸ್ಟಿಗೆ ಸಂಬಂಧಪಟ್ಟ ಅಧಿಕಾರಿಗಳು ಕೊಡುತ್ತಾರೆ. ಈಗ ಮಾನ್ಯ ಸದಸ್ಯರು ೨–೫೦ ರೂಪಾಯಿ ಸುಂಕವನ್ನು ಎಲ್ಲಾ ಕಡೆಗೂ ಅನ್ವಯಿಸುತ್ತದೆಯೇ ಎಂದು ಕೇಳಿದರು. ಇದು ಮಲೆನಾಡು ಪ್ರದೇಶದಲ್ಲಿ ಮತ್ತು ಇನ್ನು ಎಲ್ಲೆಲ್ಲಿ ಈ ಪ್ರಿವಿಲೇಜಸ್ ಇದೆಯೋ ಅಲ್ಲೆಲ್ಲಾ ಅನ್ವಯಿಸುತ್ತದೆ. ಮಾನ್ಯ ಸದಸ್ಯರು ಇದು ಎಲ್ಲಾ ಕಡೆಗೂ ಕೊಡಬೇಕು ಎಂದು ಪರಿಗಣಿಸಬೇಕೆಂದರೆ ಆ ನಿರ್ಣಯವನ್ನು ತೆಗೆದುಕೊಳ್ಳೋಣ.

STARRED QUESTIONS AND ANSWERS

IMPROVEMENT OF SOUTH-EASTERN PART OF BANGALORE CITY

142. Sri K. R. SRINIVASULU NAYUDU (Shanthinagar).—Will the Minister for Municipal Administration be pleased to state :—

(a) the works undertaken to improve the South–Eastern part of the City of Bangalore ;

(b) the stage of the works for erecting a welcome arch near the Airport and putting a garden near Domlur ?

Sri B. BASAVALINGAPPA (Minister for Municipal Administration).—

(a) *Vide* Statement appended

(b) The matter is being examined by the Bangalore Corporation.

STATEMENT

Showing the works sanctioned pertaining to South Range

Sl. No.	Dn. No.	No.of works sanctioned	Amount Rs.	Remarks
1	28	26	2,50,000	Major works carried out of asphalting to roads and drains and cement concreting to Circle, etc.
2	29	22	1,55,870	Do
3	30	38	1,67,950	Formation and improvements of roads and drains.
4	31	44	2,20,000	Major works of construction of open air theatre and asphalting roads and construction of drains, etc.
5	32	21	1,00,000	Major works of constrution of open air theatre and asphalting to existing and improvements of roads and drains.
6	33	33	1,68,000	Widening of roads and asphalting and concreting the road and other works.
7	34	42	1,98,800	Forming metalling and chip carpetting to roads in Jayanagar.
8	35	70	4,00,000	Major works of asphalting to metal surface and certain drains, etc.
9	36	80	3,85,000	Constructing of High School and Nursery Schools chipcarpetting to roads and formation of roads in Lakksandra village and construction of masonry drains etc.
10	37	34	2,60,000	Cement concreting to roads lanes in Mavally & widening the roads, drainworks, etc.

DIVISION No. 43

Sl. No.	Dn. No.	Communication	Storm water drain	Public Health, Parks and Gardens and Markets	Water supply
45		1,83,000-00	50,000-00		9,000-00

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು.—ಸ್ವಾಮಿ, ಈ ಪ್ರಶ್ನೆಯಲ್ಲಿ ಕೊಟ್ಟಿರುವ ಉತ್ತರ ನೋಡಿದರೆ ಇದು ಮಾಮೂಲಾಗಿ ಕೊಡತಕ್ಕಂಥ ಉತ್ತರ. ಈಗ ಈ ಡ್ರೈನೇಜ ಬಗ್ಗೆ ಏನು ಹೇಳಿದರೋ ಅದನ್ನು ನೋಡಿದರೆ ನನ್ನ ಅನುಭವ ದಲ್ಲಿ ಇರುವುದನ್ನೇ ಹೇಳಿದ್ದೀರಿ. ನನ್ನ ಕ್ಷೇತ್ರ ಶಾಂತಿನಗರ ಅದು ಸೊಳ್ಳೇಪುರ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಈ ವಿಷಯವು ಬೆಂಗಳೂರು ನಗರ ಸಭೆಯವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಈವೊತ್ತಿನ ವರೆಗೂ ಅವರು ಯಾವ ಕೆಲಸವನ್ನೂ ಮಾಡಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ನೀಲಸಂದ್ರದಿಂದ ಸ್ಲಾಟರ ಹೌಸಗೆ ಬರುವ ಒಂದು ಓಪನ್ ಡ್ರೈನ ಹಾಗೆಯೇ ಇದೆ, ಈಗ ಮಳೆ ಶುರುವಾಗಿದೆ, ಅಲ್ಲಿ ಮಳೆ ನೀರು ಬಂದು ತುಂಬಿ ಬಿಟ್ಟರೆ ಅಲ್ಲಿಗೆ ಹೋಗಿ ಬರುವುದಕ್ಕೂ ಆಗುವುದಿಲ್ಲ. ನೀವು ಈ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸುತ್ತೀರಾ ?

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಷಯ ಗಳೂ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಏನೇನು ಕೆಲಸಗಳನ್ನು ತೆಗೆದುಕೊಳ್ಳ ಬೇಕೋ ಅದನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಅವರು ಎಲ್ಲಾ ಸೊಳ್ಳೇ ವಿಚಾರದಲ್ಲಿ ಹೇಳಿದ್ದಾರೆ. ಈ ಸೊಳ್ಳೆಯನ್ನು ನಿರ್ಮೂಲನ ಮಾಡುವುದಕ್ಕೋಸ್ಕರ ಕೋರಮಂಗಲ, ಬಾಚಹಳ್ಳ ಪ್ರದೇಶಗಳಲ್ಲಿ ಸೂಯರೇಜ ಟ್ರೀಟಮೆಂಟ ಪ್ಲಾಂಟ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರು ಆ ಬಗ್ಗೆ ೯೮ ಲಕ್ಷ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡಿದ್ದಾರೆ. ಈಗ ಸುಮಾರು ಅರ್ಧ ಭಾಗ ಕೆಲಸ ಪೂರ್ತಿ ಯಾಗಿದೆ. ಇನ್ನು ಸುಮಾರು ಒಂದೂವರೆ ಅಥವಾ ಎರಡು ತಿಂಗಳೊಳಗೆ ಬಾಕಿ ಕೆಲಸ ಮುಗಿಯುತ್ತದೆ. ಆವಾಗ ಸೊಳ್ಳೆ ಕಡಿಯುವದು ಕಡಿಮೆ ಆದೀತು ಎನ್ನು ವುದು ನನ್ನ ಆಸೆಯಾಗಿದೆ. ಇನ್ನು ಬೇರೆ ಬಡಾವಣೆಗಳಲ್ಲೂ ಸಹ ಕೋರಮಂಗಲ, ತಾವರಕೆರೆ, ಮಡಿವಾಳ, ಬೈರಸಂದ್ರ ಈ ಪ್ರದೇಶಗಳಲ್ಲಿ ಟ್ರಸ್ಟ ಬೋರ್ಡಿನವರು ಜಮೀನಗಳನ್ನು ಅಕ್ವೈರ್ ಮಾಡಿಕೊಂಡು ಅಲ್ಲಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲಿ ವಾಟರ ಸೂಯರೇಜ ಬೋರ್ಡಿನವರು ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದಾರೆ. ಈ ಬಗ್ಗೆ ಇನ್ನೂ ಪ್ರೋಗ್ರೆಸ ಇಲ್ಲ ಎಂದು ಹೇಳುವುದಾದರೆ ಮಾನ್ಯ ಸದಸ್ಯರು ನನ್ನ ಛೇಂಬರಗೆ ಬಂದರೆ ಎಲ್ಲಾ ವಿಷಯಗಳನ್ನೂ ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು —ಈಗ ಕೋರಮಂಗಲ ಲೇಔಟ್ ಬಗ್ಗೆ ನೀವು ಉತ್ತರ ಹೇಳಿರುವುದು ನೋಡಿದರೆ ಮಾಮೂಲದ ಉತ್ತರವನ್ನೇ ಹೇಳಿದ್ದೀರಿ. ಅಲ್ಲಿ ಜನಗಳು ಟ್ರಸ್ಟ್ ಬೋರ್ಡಿನಿಂದ ೨೦—೨೫ ಸಾವಿರ ರೂಪಾಯಿ ಕೊಟ್ಟು ಸೈಟುಗಳನ್ನು ತೆಗೆದುಕೊಂಡು ಎರಡು ವರ್ಷವಾಗಿದೆ. ಆ ಲೇಔಟ್‌ನಲ್ಲಿ ಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ, ಲೈಟ ವ್ಯವಸ್ಥೆ ಏನೂ ಆಗಿಲ್ಲ. ಎಲ್ಲಾ ಬರೀ ಪ್ಲಾನ ಪೇಪರಿನಲ್ಲಿ ಇದೆಯೇ ಹೊರತು ಕೆಲಸ ಮಾಡುತ್ತಾ ಇಲ್ಲ. ನಮ್ಮ ಕ್ಷೇತ್ರದಲ್ಲಿ ೧೦೦ಕ್ಕೆ ೮೦ ಜನ ಎಲ್ಲಾ ಬಡವರೇ ಇದ್ದಾರೆ. ಅಲ್ಲಿ ಒಂದು ಕಾರ್ಪೊರೇಷನ್ ಹೈಸ್ಕೂಲ ಕೇಳಿದರೆ ವಿದ್ಯಾಭ್ಯಾಸದ ಇಲಾಖೆಯವರು ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಅಲ್ಲಿ ಒಂದು ಕಾರ್ಪೊರೇಷನ್ ಹೈಸ್ಕೂಲ ಕೊಟ್ಟು ಅಲ್ಲಿಯ ಜನರಿಗೆ ಉಪಕಾರ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಕೆಲವು ಬಡಾವಣೆಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಲಿಕ್ಕೆ ಸರ್ಕಾರದವರು ಒಂದು ಹೊಸ ನೀತಿಯನ್ನು ಮಾಡಿದ್ದಾರೆ. ಅದರ ಪ್ರಕಾರ ಪ್ರೈಮರಿ ಸ್ಕೂಲ, ನರ್ಸರಿ ಸ್ಕೂಲಿಗೆ ನಾವು ಕಟ್ಟಡವನ್ನು ಕಟ್ಟಿಸಿ ಕೊಡುತ್ತೇವೆ. ಅದರೆ ಅದರ ಎಲ್ಲಾ ವ್ಯವಸ್ಥೆಯನ್ನು ಕೂಡ ಅಂದರೆ ಅದನ್ನು ನಡೆಸಿಕೊಂಡು ಹೋಗತಕ್ಕಂಥಾ ವ್ಯವಸ್ಥೆಯನ್ನು ನಾವು ವಿದ್ಯಾ ಇಲಾಖೆಯರಿಗೆ ವಹಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಎಲ್ಲಾ ಲೇಔಟ್‌ಗಳಲ್ಲಿ ಸಾರ್ವಜನಿಕ ಸಂಸ್ಥೆಗಳಿಗೆ ಕಟ್ಟಡ ಕೆಟ್ಟಿಸಿಕೊಟ್ಟು ಅದನ್ನು ನಡೆಸಿಕೊಂಡು ಹೋಗುವುದು ಅವರ ಜವಾಬ್ದಾರಿ. ಆದರೆ ದಯವಾಡಿ ಮಾನ್ಯ ಸದಸ್ಯರು ಯಾವ ಪ್ರದೇಶದಲ್ಲಿ ಇಲ್ಲ ಎಂದು ಹೇಳಿದರೋ ಈವಾಗ ಅವರು ಅಲ್ಲಿ ಹೋಗಿ ನೋಡಿಕೊಂಡು ಬಂದರೆ ಒಳ್ಳೆಯದು. ಕೋರಮಂಗಲ ಬಡಾವಣೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಒಳಚರಂಡಿ ಕೆಲಸ ಪೂರ್ತಿಯಾಗುತ್ತಾ ಬಂದಿದೆ, ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಟ್ರಸ್ಟ ಬೋರ್ಡಿನವರು ಎಲ್ಲೆಲ್ಲಿ ಬಡಾವಣೆ ಮಾಡಿದ್ದಾರೆ ಅಲ್ಲೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ ಮತ್ತು ಮಾಡುತ್ತಾರೆ. ಮತ್ತು ವಾಟರ ಅಂಡ್ ಸೂಯರೇಜ್ ಬೋರ್ಡಿನವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಅವರಿಗೆ ಹಣ ಕೊಟ್ಟಿದ್ದೇವೆ. ಅವರು ಹಗಲಿರುಳೂ ಕೆಲಸ ಮಾಡುತ್ತಿದ್ದಾರೆ. ದಯವಾಡಿ ಮಾನ್ಯ ಸದಸ್ಯರು ಒಮ್ಮೆ ಹೋಗಿ ಬಂದು ಹೇಳಬೇಕು ಎಂದು ಹೇಳುತ್ತೇನೆ. ಇಷ್ಟರವರೆಗು ಅವರು ಹೋಗಿ ನೋಡಿಲ್ಲ ಎಂದು ಕಾಣುತ್ತದೆ, ಆದುದರಿಂದ ದಯವಿಟ್ಟು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀನಿವಾಸಲು ನಾಯ್ಡು ಅವರು ಒಂದು ಭಾಗದ ವಿಚಾರ ಹೇಳಿದ್ದಾರೆ. ಅದೇ ರೀತಿ ನಮ್ಮ ಭಾಗದಲ್ಲಿಯೂ ಇದೆ.

ಕಾರ್ಪೋರೇಷನ್ ಕೆಲಸ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆಯಾ ಕ್ಷೇತ್ರದ ಕಾರ್ಪೋರೇಷನ್ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರನ್ನು ಕರೆಸಿ ಚರ್ಚೆ ಮಾಡಿ ಕಾರ್ಪೋರೇಷನ್ ಮತ್ತು ಟ್ರಸ್ಟಬೋರ್ಡ ಕೆಲಸದಲ್ಲಿ ಹೊಂದಾಣಿಕೆ ಇರುವ ಹಾಗೆ ವ್ಯವಸ್ಥೆಯನ್ನೇನಾದರೂ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಅಭಿವೃದ್ಧಿ ಕಾರ್ಯಗಳು ಯಾವ ರೀತಿಯಾಗಿ ಮುಂದುವರಿದಿವೆ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕಾಗಿ ಎರಡು ಮೂರು ದಿವಸಗಳಿಂದ ಬೆಳಿಗ್ಗೆ ಸ್ಥಳ ಪರಿಶೀಲನೆ ಮಾಡಬೇಕು ಎಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ. ಮಾನ್ಯ ಸದಸ್ಯರಿಗೂ ಆಹ್ವಾನ ಕೊಡುತ್ತೇನೆ, ಅವರು ನನ್ನ ಜೊತೆಯಲ್ಲಿ ದಯವಾಡಿ ಬರಬೇಕು. ಸ್ಥಳ ಪರಿಶೀಲನೆ ಮಾಡಿ ಏನೇನಾಗಬೇಕೋ ಆ ಅಭಿವೃದ್ಧಿ ಕಾರ್ಯಗಳನ್ನು ಮಾಡೋಣ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ನಗರದಲ್ಲಿ ಕಸ, ಕಡ್ಡಿ, ಗೊಬ್ಬರ ಮತ್ತು ಕಚಡ ಏನಿದೆ ಅದನ್ನೆಲ್ಲ ಕಂಪೋಸ್ಟ ಮಾಡುವುದಕ್ಕೆ, ಅದರ ಪರಿಣಾಮವಾಗಿ ನಗರವನ್ನು ಸ್ವಚ್ಛವಾಗಿಡುವುದಕ್ಕೋಸ್ಕರ ಕಂಪೋಸ್ಟ ತಯಾರು ಮಾಡತಕ್ಕ ಯಂತ್ರಕ್ಕಾಗಿ ಸರ್ಕಾರ ೬೫ ಲಕ್ಷ ರೂಪಾಯಿಗಳನ್ನು ಕಾರ್ಪೋರೇಷನ್ನಿಗೆ ಸಾಲವಾಗಿ ಕೊಟ್ಟಿದೆ. ಈ ಕೆಲಸವನ್ನು ಏಕೆ ಕಾರ್ಯರೂಪಕ್ಕೆ ತಂದಿಲ್ಲ?

ಶ್ರೀ ಬಿ. ಬಸವಲಿಂಗಪ್ಪ.—ಕಾರ್ಯರೂಪಕ್ಕೆ ತರಲಿಲ್ಲವೆನ್ನುವ ಪ್ರಶ್ನೆಯಲ್ಲ. ಅದು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಕೆಲವು ಕಡೆ ಹೇಳುತ್ತಾರೆ ಕೆಲಸ ಮಾಡುತ್ತದೆ ಎಂದು ಕೆಲವು ಕಡೆ ಹೇಳುತ್ತಾರೆ. ಈ ವಿವಾದವಿದೆ. ಈ ಪ್ಲಾಂಟ್ ಯಾರು ಯಾರು ತಯಾರು ಮಾಡುತ್ತಾರೆ ಅಂಥ ಕಂಪನಿಗಳಿಗೆಲ್ಲ ಕಾರ್ಪೋರೇಷನ್ ಕಮೀಷನರ ಬರೆದಿದ್ದಾರೆ. ಅದು ಬಂದ ತಕ್ಷಣ ಯಾವುದರಿಂದ ಹೆಚ್ಚು ಅನುಕೂಲತೆಗಳಿವೆ ಎನ್ನುವುದನ್ನು ನೋಡಿ ಒಂದು ತೀರ್ಮಾನ ತೆಗೆದುಕೊಂಡು ಪ್ಲಾಟ ಹಾಕಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅವರು ಮಾಡದೆ ಹೋದರೆ ಎರಡು ಮೂರು ತಿಂಗಳಲ್ಲಿ ನಿರ್ಧಾರ ತೆಗೆದುಕೊಂಡು ಆ ಪ್ಲಾಂಟ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ. — ಏರ್‌ಪೋರ್ಟಿನಿಂದ ಬರಬೇಕಾದರೆ ಸ್ವಾಗತ ಕಮಾನನ್ನೂ ಮತ್ತು ದೊಮ್ಮಲೂರಿನ ಬಳಿ ಒಂದು ಉದ್ಯಾನವನವನ್ನೂ ನಿರ್ಮಿಸಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಕಾರ್ಪೋರೇಷನ್ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಮೈಸೂರು ರಾಜ್ಯದ ಎಲ್ಲ ಗಡಿಗಳಲ್ಲಿಯೂ ಸ್ವಾಗತ ಕಮಾನನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರಾ? ಮದ್ರಾಸಿನಿಂದ ಬೆಂಗಳೂರಿಗೆ ಬರಬೇಕಾದರೆ ಗಡಿಯಲ್ಲಿದ್ದ ಸ್ವಾಗತ ಕಮಾನುಗಳು ಬಿದ್ದು ಹೋಗಿದ್ದು ಅದನ್ನು ಸರಿ ಮಾಡಿಸಿಲ್ಲ. ಎಲ್ಲ ಗಡಿಗಳಲ್ಲಿಯೂ ಕರ್ನಾಟಕ ರಾಜ್ಯದೊಳಗೆ ಬರತಕ್ಕವರಿಗೆ ಸ್ವಾಗತ ನೀಡುವ ಸ್ವಾಗತ ಕಮಾನು ಹಾಕುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರ ಸಲಹೆಯನ್ನು ಕಾರ್ಪೊರೇಷನ್ನಿಗೆ ನಾನು ತಿಳಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು.—೨೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದರಲ್ಲಿ ಸರ್ಕಾರದ ಮೂಲಕ ಖರ್ಚಾಗುವುದೆಷ್ಟು, ಕಾರ್ಪೊರೇಷನ್ನಿನಿಂದ ಖರ್ಚಾಗುವುದೆಷ್ಟು ಮತ್ತು ಟ್ರಸ್ಟ್ ಬೋರ್ಡಿನಿಂದ ಖರ್ಚಾಗುವುದೆಷ್ಟು ಎನ್ನುವ ವಿವರಗಳನ್ನು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಎಂ. ಎಚ್. ಜಯಪ್ರಕಾಶ ನಾರಾಯಣ.—೬೫ ಲಕ್ಷ ರೂಪಾಯಿ ಯಂತ್ರದ ಉಪಯೋಗದ ಬಗ್ಗೆ ವಾದವಿವಾದ ಉಂಟಾದ ಪ್ರಯುಕ್ತ ಅದನ್ನು ಉಪಯೋಗಿಸಿಲ್ಲವೆಂದರೆ ಪ್ರತಿ ದಿವಸ ಒಂದು ಸಾವಿರ ಟನ್ ಕಂಪೋಸ್ಟ ಉತ್ಪತ್ತಿಯಾಗತಕ್ಕ ವ್ಯವಸ್ಥೆ ಕಾರ್ಪೊರೇಷನ್ನಿನಲ್ಲಿ ಇರುವುದರಿಂದ ಅಂಥ ಉಪಕರಣವನ್ನು ಉಪಯೋಗಿಸಿಕೊಳ್ಳತಕ್ಕದಕ್ಕೆ ಮಾರ್ಗ ಮಾಡುತ್ತೀರಾ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ.—ಕಂಪೋಸ್ಟ ಪ್ಲಾಂಟ್ ಹಾಕತಕ್ಕದ್ದು ನಿರ್ದಿಷ್ಟವಾದ ಕ್ರಮ ಎನ್ನುವುದನ್ನು ಸ್ಪಷ್ಟಪಡಿಸುತ್ತಿದ್ದೇನೆ. ಯಾವ ಪ್ಲಾಂಟ್ ತರಬೇಕು, ಯಾವುದು ಸೂಕ್ತವಾದುದು ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಕಂಪೋಸ್ಟ ಪ್ಲಾಂಟ್ ಹಾಕಬೇಕೇ, ಬಿಡಬೇಕೇ ಎನ್ನುವುದರ ಬಗ್ಗೆ ವಿವಾದವಿಲ್ಲ, ಅದು ನಿರ್ವಿವಾದವಾದುದು.

ಶ್ರೀ ಎಂ. ಎಸ್. ಕೃಷ್ಣನ್.—ಎಂ. ಎಲ್. ಎ. ಗಳು ಬರುವುದಕ್ಕೆ ಆಹ್ವಾನ ನೀಡಿದರು ಸಂತೋಷ. ಆದರೆ ಮಾನ್ಯ ಮಂತ್ರಿಗಳು ಹೋಗುವ ವಿಷಯ ನಮಗೆ ಗೊತ್ತಾಗುವುದಿಲ್ಲ. ಅದಕ್ಕೆ ಎಲ್ಲ ಎಂ. ಎಲ್. ಎ. ಗಳಿಗೂ ಮೊದಲೇ ಅದರ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದಕ್ಕಿಂತ ಮುಖ್ಯವಾದುದು ಎಂ. ಎಲ್. ಎ. ಗಳನ್ನು ಮತ್ತು ಆಯಾ ಕ್ಷೇತ್ರದ ಕಾರ್ಪೊರೇಷನ್ ಸದಸ್ಯರನ್ನೂ ಆಗಿಂದಾಗ್ಗೆ ಕರೆದು ನಗರದ ಅಭಿವೃದ್ಧಿ ಬಗ್ಗೆ ಮುಖ್ಯವಾಗಿ ಏನಾಗಿದೆ, ಏನಾಗಿಲ್ಲ ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿ ಕೊಡುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಈ ಬಗ್ಗೆ ಅವರನ್ನು ಕರೆದು ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳತಕ್ಕದ್ದು ಅವರ ಗಮನಕ್ಕೆ ಬಂದಿದೆಯೆಂದು ಕಾಣುತ್ತದೆ. ಆ ಕೆಲಸ ಮಾಡುತ್ತಿದ್ದೇನೆ. ಅಭಿವೃದ್ಧಿ ಕಾರ್ಯದ ಬಗ್ಗೆ ಸ್ಥಳ ಪರಿಶೀಲನೆ ಮಾಡಬೇಕಾಗುತ್ತದೆ. ಅದಕ್ಕೆ ನನ್ನ ಜೊತೆಗೆ ಬರಬೇಕು. ಅದಕ್ಕೆ ನಾನು ಆಹ್ವಾನ ಕಳುಹಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಕೇಳಿದ ಪ್ರಶ್ನೆಗಳಿಗೆ ಸಚಿವರು ಉತ್ತರ ಕೊಡುತ್ತ ಕಾರ್ಪೊರೇಷನ್ನಿಗೆ ತಿಳಿಸುವುದಾಗಿ ಹೇಳಿದರು. ನಾನು ಕಾರ್ಪೊರೇಷನ್ ಗಡಿಯಲ್ಲಿ ಸ್ವಾಗತ ಕಮಾನು ಹಾಕುವ ವಿಚಾರ ಕೇಳಲಿಲ್ಲ. ರಾಜ್ಯದ ಎಲ್ಲ ಗಡಿ ಗಳಲ್ಲಿಯೂ ಸ್ವಾಗತ ಕಮಾನು ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ಪ್ರಶ್ನೆ ಕೇಳಿದಾಗ ಅದು ಮೂಲ ಪ್ರಶ್ನೆಗೆ ಸಂಬಂಧ ಪಡದೇ ಇದ್ದರೂ ಸುಮ್ಮನೆ ಇದ್ದೆ. ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಪ್ರಶ್ನೆ ಸಭೆಯ ಮುಂದೆ ಇರುವಾಗ ರಾಜ್ಯದ ಗಡಿಗಳಲ್ಲಿ ಸ್ವಾಗತ ಕಮಾನು ಹಾಕುವ ವಿಚಾರ ಇದರಲ್ಲಿ ಹೇಗೆ ಬರುತ್ತದೆ? ಬರುವದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ವಿಷಯ ಮಾನ್ಯ ರೆವನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಕ್ಷೇತ್ರದ ಬಹಳ ಭಾಗ ದಲ್ಲಿ ಮಿಲಿಟರಿ ಬ್ಯಾರಕ್ಸ್ ಇವೆ. ಈ ಬಗ್ಗೆ ತೀವ್ರ ಗಮನ ತೆಗೆದುಕೊಂಡು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಆ ಜಾಗವನ್ನು ತೆಗೆದುಕೊಂಡು ಆ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ? ಕಿಷ್ಕಿಂಧಾ ಪಟ್ಟಣದ ಹಾಗೆ ಆ ಪ್ರದೇಶ ಇರುವುದರಿಂದ ಮಿಲಿಟರಿ ಬ್ಯಾರಕ್ಸ್ ತೆಗೆಯುವುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಿ? ಯಾವ ಡಿಗ್ನಿಟರೀಸ್ ಬರಬೇಕಾದರೂ ನನ್ನ ಕ್ಷೇತ್ರದ ಮಾರ್ಗವಾಗಿಯೇ ಬರಬೇಕು. ಅವರು ಬರಬೇಕಾದರೆ ಸೊಳ್ಳೆ ಕಾಟ, ಕೊಳಚೆ ನೀರು, ಬಡವರ ಮನೆಗಳಿವೆ. ಅದಕಾರಣ ಡಿಗ್ನಿಟರೀಸ್ ಬರುವವರಿಗೆ ಸುಖಾ ಗಮನ ನೀಡುವುದಕ್ಕೆ ಅಚ್ಚುಕಟ್ಟಾದ ಆರ್ಚಸ್ ಹಾಕುವುದು ಆ ಪ್ರದೇಶವನ್ನು ಉತ್ತಮ ಪಡಿಸುವುದು ಇಂಥ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಆರ್ಚಸ್ ಹಾಕಿದರೆ ಸೊಳ್ಳೆಗಳು ಓಡಿ ಹೋಗುತ್ತ ವೆಂದು ನಾನು ತಿಳಿದುಕೊಂಡಿಲ್ಲ. ಸೊಳ್ಳೆ ನಿರ್ಮೂಲನ ಮಾಡಲು ಸರ್ವ ಪ್ರಯತ್ನ ವನ್ನೂ ಮಾಡುತ್ತಿದ್ದೇವೆಂದು ಹೇಳುತ್ತೇನೆ. ಐದು ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ದೊಡ್ಡ ಟೌನಷಿಪ್ ಕಟ್ಟಬೇಕೆಂದು ನಿರ್ಧರ ಮಾಡಿದ್ದೇವೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಇಷ್ಟೇ ಅಲ್ಲ, ಬಡವರಿರತಕ್ಕ ಪ್ರದೇಶವೆನಿದೆ ಅದೆಲ್ಲ ದರ ಕಡೆಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವಹಿಸುತ್ತ ಇರುವುದು ಸಂತೋಷದ ವಿಷಯ. ನಾವು ಕೆಲಸ ಮಾಡಲಿಕ್ಕೆ ತಯಾರಿದ್ದೇವೆ.

IRREGULARITIES COMMITTED BY MYSORE POWER LOOM SILK MANUFACTURERS' CO-OPERATIVE SOCIETY LTD.

818. Sri T. R. SHAMANNA (Fort).—

Will the Minister for Co-operation be pleased to state:—

(*a*) whether they are aware that there is a society called "The Mysore Power Loom Silk Manufacturers Co-operative Society Ltd., Avenue Road, Bangalore";

(*b*) whether it is a fact that the books of this society were seized by the Registrar of Co-operative Societies;

(*c*) whether the accounts of the society were written up-to-date;

(*d*) whether grave irregularities were noticed in the working of the Society;

(*e*) the steps that are proposed to be taken to set right the administration of this Society so as to serve the purpose for which it is started ?

Sri A. SHANKARA ALVA (Minister for Co-operation).—

(*a*) Yes.

(*b*) Yes. Only relevant ones were seized.

(*c*) Yes.

(*d*) Yes.

(*e*) Necessary action is being taken.

ಶ್ರೀ ಟಿ. ಆರ್. ಶಾಮಣ್ಣ.—ಈ ಸೊಸೈಟಿ ಬಗ್ಗೆ ಸಾಕಾದಷ್ಟು ದೂರುಗಳು ಬಂದಿವೆ, ಇದರ ಬಗ್ಗೆ ಪೂರ್ಣವಾಗಿ ತನಿಖೆ ಮಾಡಿ ಬೇಗನೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

†ಶ್ರೀ ಎ. ಶಂಕರ ಆಳ್ವಾ.—ಈಗಾಗಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಇಲ್ಲಿನ ಡಾಕ್ಯುಮೆಂಟುಗಳನ್ನು ಸೀಜ್ ಮಾಡಿದ್ದಾರೆ, ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

9-30 A. M.

ಶ್ರೀ ಟಿ. ಆರ್. ಶಾಮಣ್ಣ.—ಎಲ್ಲ ಎಂ. ಎಲ್. ಎ. ಗಳಿಗೂ ಈ ಸೊಸೈಟಿಯ ಬಗ್ಗೆ ಕೆಲವು ವಿಚಾರಗಳನ್ನು ಪಟ್ಟಮಾಡಿ ಕಳುಹಿಸಿದ್ದಾರೆ. ತಮ್ಮ ಕಡೆಗೆ ಅದನ್ನು ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎ. ಶಂಕರ ಆಳ್ವಾ.—ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ಇಲ್ಲಿನ ಸೊಸೈಟಿ ಮೇಲೆ ದೂರುಗಳು ಯಾವಾಗ ಬಂತು? ಯಾರ್ಯಾರ ಮೇಲೆ ಇದುವರೆಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಇನ್ನೆಷ್ಟು ವರ್ಷಗಳ ಕಾಲ ಇಲ್ಲಿನ ದೂರನ್ನು ತನಿಖೆ ಮಾಡಲು ಅವಕಾಶ ಬೇಕು?

ಶ್ರೀ ಎ. ಶಂಕರ ಆಳ್ವಾ.—ದೂರುಗಳು ಬಂದಕೂಡಲೇ ತನಿಖೆ ಮಾಡುತ್ತೇವೆ ಮತ್ತು ಇಲ್ಲಿ ಈಗಾಗಲೇ ಡೆಪ್ಯುಟಿ ರಿಜಿಸ್ಟ್ರಾರ್‌ರವರು ತನಿಖೆ ಮಾಡುತ್ತಿದ್ದಾರೆ. ಅವರ ರಿಪೋರ್ಟು ಬಂದ ಕೂಡಲೇ ಪರಿಶೀಲಿಸುತ್ತೇವೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಮತ್ತು ದೊಡ್ಡಬಳ್ಳಾಪುರ ಇಂತ ಹದೇ ಕೈಗಾರಿಕೆ ಉದ್ಯಮ ಮಾಡುವ ಸೊಸೈಟಿಗಳು ಅನೇಕ ಇವೆ, ಇದೇ ತರಹ ಅಲ್ಲಿನ ಲಿಕ್ಕ ಪತ್ರಗಳು ಸರಿಯಾಗಿಲ್ಲದೇ ಇರುವಂತಹ ಸ್ಥಿತಿಗಳಿವೆ ಮತ್ತು ಹಣದ ದುರುಪಯೋಗಗಳೂ ಆಗಿವೆ, ನಾನೇ ಇದೇ ದೊಡ್ಡಬಳ್ಳಾಪುರದ ಸೊಸೈಟಿ ಬಗ್ಗೆ ಲಿಖಿತ ರೂಪದಲ್ಲಿ ತನಿಖೆ ಮಾಡಬೇಕೆಂದು ತಮಗೆ ಕೊಟ್ಟು ತಕ್ಕ ಕ್ರಮ ತೆಗೆದು ಕೊಳ್ಳಬೇಕೆಂದೂ ಹೇಳಿದ್ದೆ. ಇದುವರೆಗೆ ಆ ಸೊಸೈಟಿಯ ಮೇಲೆ ಏನೂ ಕಾರ್ಯ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು?

ಶ್ರೀ ಎ. ಶಂಕರ ಆಳ್ವಾ.—ಆ ಸೊಸೈಟಿಯಿಂದಲೂ ರಿಕಾರ್ಡುಗಳನ್ನು ತರಿಸಿ ಕೂಡಲೇ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತನಿಖೆ ಮಾಡಬೇಕೆಂದು ಮಾನ್ಯ ಸದಸ್ಯರೇ ಸೊಸೈಟಿಯ ಎಲ್ಲ ವಿವರಗಳನ್ನೂ ಸರಕಾರಕ್ಕೆ ಕೊಟ್ಟಾಗಲೂ ಇದುವರೆಗೆ ಏಕೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ?

ಶ್ರೀ ಎ. ಶಂಕರ ಆಳ್ವಾ.—ಇದರ ರಿಕಾರ್ಡುಗಳನ್ನು ತರಿಸಿ ನೋಡುತ್ತೇನೆ.

ಶ್ರೀ ಜಿ. ರಾಮೇಗೌಡ.—ಈ ಒಂದು ಸೊಸೈಟಿಯ ಪ್ರಶ್ನೆ ಇಲ್ಲಿ ದೂರು ಬಂದಿದೆ ಎಂದು ಹೇಳಿರುವುದರಲ್ಲಿ ಒಬ್ಬರು ಪ್ರಮುಖ ವ್ಯಾಪಾರಿಗಳು ಎಂದರೆ ಶ್ರೀ ಬಿ. ಜಿ. ವೀರಣ್ಣ ಎನ್ನುವವರು ವಿಜಯ ಬ್ಯಾಂಕಿನಲ್ಲಿ ಒಬ್ಬರು ಡೈರೆಕ್ಟರು ಆಗಿದ್ದಾರೆ ಮತ್ತು ಅಲ್ಲಿರುವ ಬ್ಯಾಂಕಿನ ಚೇರ್ಮನ್ನರ ಪ್ರಭಾವವನ್ನುಪಯೋಗಿಸಿ

ಕೊಂಡು ಇದರ ಮೇಲೆ ಸಾಕಷ್ಟು ತೀರ್ಮಾನವಾಗದೇ ಇರುವಂತೆ ಮಾಡುತ್ತಿದ್ದಾರೆಂದು ಅನೇಕ ದೂರುಗಳು ಬಂದಿವೆ. ಇಂತಹ ಕೆಲವಾರು ಸೊಸೈಟಿಗಳು ನಮ್ಮಲ್ಲಿವೆ ಇದನ್ನು ಸರಿಯಾಗಿ ತನಿಖೆ ಮಾಡಲು ಸರಕಾರಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯಗಳೂ ಬರುತ್ತಿವೆ. ಇದನ್ನು ಸರಕಾರ ಗಮನಿಸಿದೆಯೇ ?

ಶ್ರೀ ಎ. ಶಂಕರ ಆಳ್ವಾ.—ಇದು ತಪ್ಪು ಅಭಿಪ್ರಾಯ, ಇವನ್ನೆಲ್ಲಾ ಪೂರ್ಣವಾಗಿ ತನಿಖೆ ಮಾಡಿ ನೋಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ನಮಗೆ ಈ ಸೊಸೈಟಿ ಚೆನ್ನಾಗಿ ನಡೆಯಬೇಕು ಎಂದು ಇರುವುದು ಮತ್ತು ಇದರಲ್ಲಿ ಯಾರ ಪ್ರಭಾವದ ಪ್ರಶ್ನೆಯೂ ಬರಬಾರದು. ಎರಡನೇದು ಇದಕ್ಕೆ ಸಂಬಂಧಪಟ್ಟ ದೂರುಗಳು ಬಂದಿರುವಾಗ ಇದರ ಬಗ್ಗೆ ನ್ಯಾಯವಾಗಿ ಇಲ್ಲಿರುವ ವಿವರುಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ ಮತ್ತು ಬೇಗನೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನೂ ಸರಕಾರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಶಂಕರ ಆಳ್ವಾ.—ನಾನಾಗಲೇ ಹೇಳಿದ ಹಾಗೆ ತನಿಖೆಗಾಗಿ ಏರ್ಪಾಡು ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ — ಇದೇ ತರಹ ದೊಡ್ಡಬಳ್ಳಾಪುರದಲ್ಲಿ ಒಂದು ಸೊಸೈಟಿ ಇದೆ, ಇದನ್ನು ಸೂಪರ್‌ಸೀಡ್ ಮಾಡಿ ಇದರಲ್ಲಿ ಏನು ಅವ್ಯವಸ್ಥೆಗಳಾಗಿವೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎ. ಶಂಕರ ಆಳ್ವಾ.—ತಾವು ಹೇಳಿದಂತೆ ಅಲ್ಲಿನ ರಿಕಾರ್ಡುಗಳನ್ನು ತರಿಸಿ ನೋಡಿ ತನಿಖೆ ಮಾಡಿ ಸೂಪರ್‌ಸೀಡ್ ಮಾಡುವ ಅಗತ್ಯ ಇದ್ದರೆ ಅದನ್ನೂ ಮಾಡುತ್ತೇನೆ.

REPAIRS TO PRIMARY SCHOOL BUILDINGS IN KARWAR TOWN

916. Sri VIRUPAKSH M. GHADI (Haliyal).—

Will the Minister for Education be pleased to state :—

(*a*) whether it is a fact that no current repairs including monsoon repairs were effected to the primary schools lying within the limits of the Karwar Town since these primary schools were taken over by Government from ex-District School Board;

(*b*) whether it is a fact that the Bai Kuvor Bai Marathi Primary School for Girls in Karwar Town is in a dilapidated condition and is likely to collapse for want of repairs;

(*c*) whether Government has received any representation about this matter;

(*d*) if so, the steps the Government intends to take in the matter?

Sri A. R. BADARINARAYANA (Minister for Education).—

(*a*) Yes.

(*b*) Yes.

(*c*) Yes.

(*d*) The question of entrusting the work of repairs to the school buildings in Municipal areas of Bombay Karnataka area to the Public Works Department is under active consideration of Government.

Meanwhile, the Deputy Commissioner, Karwar has already taken action to get urgent repairs done through the Municipalities.

ಶ್ರೀ ವಿ. ಎಂ. ಘಾಡಿ.— (ಡಿ) ಗೆ ಉತ್ತರವಾಗಿ ಇದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ, ಆದರೆ ಇದುವರೆಗೂ ಪಿ. ಡಬ್ಲ್ಯು. ಡಿ. ಯವರು ಈ ಶಾಲೆಗಳ ರಿಪೇರಿಯನ್ನು ಮಾಡಲಿಲ್ಲ. ಮಳೆಗಾಲ ಪುರು ಆಗುವುದರಲ್ಲಿದೆ ಮತ್ತು ಕೆಲವು ಕಡೆ ಇರುವ ಶಾಲೆಗಳ ಗೋಡೆಗಳು ಕುಸಿಯುವುದರಲ್ಲಿವೆ, ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಂಡು ಬೇಗನೆ ರಿಪೇರಿ ಮಾಡಿಸುತ್ತೀರಾ?

†ಶ್ರೀ ಎ. ಆರ್. ಬದರೀನಾರಾಯಣ.—ಇದನ್ನು ಬೇಗನೆ ಮಾಡಬೇಕೆನ್ನುವುದೇ ಸರಕಾರದ ಆಸೆ. ಆದರೆ ಇದರಲ್ಲೇನಾಗಿದೆ ಎಂದರೆ ಪಿ. ಡಬ್ಲ್ಯು. ಡಿ. ಯವರು ರಿಪೇರಿ ಮಾಡಲು ಇದರ ಕಟ್ಟಡಗಳನ್ನೂ ಮುನಿಸಿಪಾಲಿಟಿಯವರು ಇನ್ನೂ ಪಿ. ಡಬ್ಲ್ಯು. ಡಿ. ಇಲಾಖೆಗೆ ಅಧಿಕೃತವಾಗಿ ವಹಿಸಿಕೊಟ್ಟಿಲ್ಲ. ಇದರಿಂದಾಗಿ ಇಲ್ಲಿ ರಿಪೇರಿ ಕೆಲಸಗಳನ್ನು ಮಾಡುವುದು ಕಷ್ಟವಾಗಿದೆ, ತಾವು ಹೇಳಿದಂತೆ ಕೆಲವು ಶಾಲೆಗಳ ಕಟ್ಟಡಗಳು ಬಹಳ ಕಷ್ಟ ಪರಿಸ್ಥಿತಿಯಲ್ಲಿವೆ ಅದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಒಂದು ಮರಾಠಿ ಶಾಲೆ ಕಳೆದ ನೂರು ವರ್ಷಗಳಿಂದಲೂ ರಿಪೇರಿನೇ ಆಗಿಲ್ಲ ಎಂದೂ ನನಗೆ ತಿಳಿದು

ಬಂದಿದೆ. ಅದಕ್ಕಾಗಿ ಎಮರ್ಜೆಂಟಾಗಿ ಇಲ್ಲಿನ ಡಿಪ್ಯೂಟಿ ಕಮಿಷನರವರಿಗೆ ಸೂಚನೆ ಕೊಡಲಾಗಿದೆ, ಅವರೇ ಮುನಿಸಿಪಾಲಿಟಿ ಕಡೆಯಿಂದ ಇದನ್ನು ತೆಗೆದುಕೊಂಡು ರಿಪೇರಿ ಮಾಡಿದನಂತರ ಇದಕ್ಕೆ ತಗಲುವ ಖರ್ಚನ್ನು ಅವರಿಗೆ ರೀ ಇಂಬರ್ಸ್ ಮಾಡಿಕೊಡ ಬೇಕೆಂದೂ ಹೇಳಲಾಗಿದೆ. ಅವರು ಬೇಗ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆಗಳನ್ನೂ ಈಗಾಗಲೇ ಕೊಡಲಾಗಿದೆ.

ಶ್ರೀ ವಿ. ಎಂ. ಘಾಡಿ.—ಮುನಿಸಿಪಾಲಿಟಿಯವರು ಇನ್ನೂ ಕಟ್ಟಡಗಳನ್ನು ವಹಿಸ ಲಿಲ್ಲ ಎಂದು ಸರಕಾರ ಇದರ ರಿಪೇರಿ ಕೆಲಸಗಳನ್ನು ಮಾಡದೇ ಇದ್ದರೆ ಇಲ್ಲಿನ ಶಾಲೆಗಳ ಸ್ಥಿತಿ ದಿನೇ ದಿನೇ ಕೆಡುತ್ತಿದೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಸರಕಾರವೇ ನೇರವಾಗಿ ಬೇಗ ತಕ್ಕ ರಿಪೇರಿ ಕೆಲಸಗಳನ್ನೇಕೆ ಮಾಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ.—ಪಿ. ಡಬ್ಲ್ಯು. ಡಿ. ಯವರೇ ರಿಪೇರಿ ಕೆಲಸ ಮಾಡಲು ಅವರ ಚಾರ್ಜಿಗೆ ಇಲ್ಲಿನ ಕಟ್ಟಡಗಳು ಬಂದಿಲ್ಲ. ಇದಕ್ಕಾಗಿ ಡಿಪ್ಯೂಟಿ ಕಮಿಷನರವರ ಮೂಲಕ ಮಾಡಿಸಬೇಕೆಂದು ಈಗಾಗಲೇ ಡಿಪ್ಯೂಟಿ ಕಮಿಷನರವರನ್ನು ಪ್ರಾರ್ಥನೆ ಮಾಡಿದ್ದೇವೆ. ಅವರು ಈಗ ಬೇಗನೆ ಮಾಡುತ್ತಾರೆ. ಪಿ. ಡಬ್ಲ್ಯು. ಡಿ. ಯವರು ತೆಗೆದುಕೊಳ್ಳುವುದರ ಬಗ್ಗೆ ಇನ್ನೂ ಪತ್ರವ್ಯವಹಾರದಲ್ಲೇ ಇದೆ, ಇದಕ್ಕೆ ಫೈನಾನ್ಸ್ ಇಲಾಖೆ ಒಪ್ಪಿಗೆ ಬೇಕು, ಇದರಿಂದಾಗಿ ಇಲ್ಲಿ ಸ್ವಲ್ಪ ನಿಧಾನವಾಗುತ್ತಿದೆ.

ಶ್ರೀ ಪಿ. ಬೈರೇಗೌಡ.—ಪರಿಸ್ಥಿತಿ ಕೆಟ್ಟಿದೆ ಎಂದು ನೀವೇ ಹೇಳುವಾಗ ಇದರ ಬಗ್ಗೆ ತೀವ್ರವಾಗಿ ಏಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎ. ಆರ್. ಬದರೀನಾರಾಯಣ.—ಈಗಾಗಲೇ ಡಿಪ್ಯೂಟಿ ಕಮಿಷನರವರಿಗೆ ಸೂಚನೆಗಳನ್ನು ಕೊಡಲಾಗಿದೆ ಮತ್ತು ತಕ್ಷಣ ಮಾಡಬೇಕೆಂದೂ ಅವರಿಗೆ ಹೇಳಲಾಗಿದೆ.

Sri B. B. SAYANAK.—Government have taken over all these Municipal Schools five years' back. Since then there have been no repairs to those buildings. The Minister has stated that the question of entrusting the work of repairs to the Municipal School buildings to the P. W. D., is under active consideration of the Government. Five years lapsed long time back. Is not 5 years sufficient time.

Sri A. R. BADARINARAYANA.— It is not only for these 5 years. Throughout the Municipal administration those buildings have not been touched. Some formalities are there. The Local Authorities have to hand over the buildings to the PWD.

ಇದರ ಬಗ್ಗೆ ಪತ್ರವ್ಯವಹಾರಗಳು ಕಳೆದ ನಾಲ್ಕು ವರ್ಷಗಳಿಂದ ಆಗುತ್ತಲಿವೆ, ಇದಕ್ಕಾಗಿ ಬೇಗನೆ ಹ್ಯಾಂಡ್ ಓವರು ಮಾಡಬೇಕೆಂದು ಅವರನ್ನು ಕೇಳುತ್ತಿದ್ದೇನೆ.

ಶ್ರೀ ವಿ. ಎಂ. ಫಾಡಿ.— ಈಗಾಗಲೇ ನಾನು ಹೇಳಿದಂತೆ ಈ ಶಾಲೆಗಳಲ್ಲದೆ ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳ ಸ್ಥಿತಿಯೂ ಇದೇ ರೀತಿಯಾಗಿದೆ, ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.— ಇದರಲ್ಲಿ ಮುನಸಿಪಾಲಿಟಿಯಿಂದ ಈ ಬಿಲ್ಡಿಂಗುಗಳನ್ನು ಟೇಕ್ ಓವರು ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರವೂ ಬೇಕಾಗಿದೆ, ತಾವೂ ಕೂಡ ಮುನಿಸಿಪಾಲಿಟಿಯವರಿಗೆ ಹೇಳಿ ಬೇಗನೆ ಮಾಡಿಸಬೇಕು, ನಾವು ಕೂಡ ಆದಷ್ಟು ಜಾಗ್ರತೆ ಇಲ್ಲಿನ ರಿಪೇರಿ ಕೆಲಸಗಳನ್ನು ಮಾಡಬೇಕೆಂದೂ ಇದೆ. ಹಳ್ಳಿಗಾಡಿನ ಶಾಲೆಗಳ ಪರಿಸ್ಥಿತಿಯೂ ಇದೇ ರೀತಿ ಇದೆ ಎಂದರು. ಇದನ್ನೂ ಆದಷ್ಟು ಜಾಗ್ರತೆ ರಿಪೇರಿ ಮಾಡಲು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು—. ಈಗ ಪ್ರಶ್ನೋತ್ತರ ವೇಳೆಯಾಯಿತು.

Questions for Answers on the Day (but not taken up)

ELECTION OF THE PRESIDENT, T. A. P. C. M. S., T. NARASIPUR

571. Sri K. MADE GOWDA (Bannur).—

Will the Minister for Co-operation be pleased to state:—

(*a*) the date on which the election of the present President of T. Narasipur T. A. P. C. M. Society; was held;

(*b*) whether it is a fact that there was a stay order by the Honorary Arbitrator on the day of election to the effect that the election of the President should not be held;

(*c*) whether it has come to the notice of the Government that the election was conducted eventhough there was stay order for conducting the election;

(*d*) if so, the action taken by the Government in this behalf ?

Sri A. SHANKARA ALVA (Minister for Co-operation).—

(*a*) 20th April 1970.

(*b*) Yes.

V-,31N73
N74 -17-1-4

(*c*) No. Neither the President of the Society nor the Government Directors or Arbitrator or anybody else affected has brought it to the notice of the Government.

(*d*) Does not arise.

SALE OF COTTON IN CHITRADURGA DISTRICT

644. Sri V. MASIYAPPA (Challakere).—

Will the Minister for Co-operation be pleased to state:—

(*a*) whether the Minister for Agriculture and Forests had announced in Chitradurga in the month of April 1972 that a branch office of the Cotton Corporation of India would be opened in Chitradurga in about a week's time and that the cotton of Chitradurga Market would be purchased by the Corporation at the assured price;

(*b*) if so, whether any such branch office has been opened in Chitradurga and when;

(*c*) whether the Government is aware that the Cotton growers have been put to great loss since they withheld the sale of cotton in the hope of selling it to the Corporation and get the assured price?

Sri A. SHANKARA ALVA (Minister for Co-operation).—

(*a*) No.

(*b*) Does not arise.

(*c*) No such case has come to notice of Government. However, the Taluk Agricultural Produce Co-operative Marketing Societies of Chitradurga and Davanagere made purchases of cotton to the extent of 1268 quintals and 63 kgs. valued at Rs. 2,48,672.

C. I. T. B. FOR DAVANAGERE CITY

901. Smt. NAGAMMA C. KESHAVA MURTHY (Davanagere).—

Will the Minister for Municipal Administration be pleased to state :—

(*a*) whether the Government has received any representation regarding the establishment of City Improvement Trust Board for Davanagere City;

(*b*) if so, the steps taken in this regard ?

Sri B. BASAVALINGAPPA (Minister for Municipal Administration.)—

(*a*) Yes.

(*b*) Action will be taken to set up an Improvement Trust Board after the Mysore Urban Development Boards Bill, 1973 is finalised.

CALLING ATTENTION TO MATTERS OF URGENT PUBLIC IMPORTANCE

(*i*) *re:— Acute scarcity of drinking water in Tumkur Town.*

Sri K. Abdul Subhan(Tumkur).— I call the attention of the Minister for Municipal Administration to the acute scarcity of drinking water in Tumkur Town.

Sri B. Basavalingappa.—(Minister for Municipal Administration).—I state as follows.

The Water supply and distribution in Tumkur Town is being maintained by the Town Municipal Council, Tumkur. There is some scarcity of drinking water in Tumkur town due to increase of population.

The water nuppiy to Tumkur town at present is in the order of 8 gallons per capita per day and is not adequate. Improvements by sinking of test wells in waste weir halla of Mydala Tank and Gulharvi village taken by the Public Health Engineering Department had to be abandoned due to the agitation by ryots. Action Taken for sinking borewells in the feeder halla of Agrahara Tank in Suvarnamukhi also had to be abandoned on similar grounds. The condition of water supply being nnsatisfactory and on a request made by the Municipality several alternatives including the one by raising the capacity of Mydala tank and others were in-

vestigated. On economic grounds, the supply to the town by borewells is found to be feasible. Keeping in view the above feasibility and the availability of fast drilling rigs and the underground water source being favourable for being tapped for supply of water to the Tumkur town. Proposals for drilling a number of bore wells in and around Tumkur town was got at a cost of Rs. 54.25 lakhs to provide 20 g. p. c. d. to the prospective population estimated to be 1,00,000 souls by 2001. Detailed plans and estimates are yet to be prepared by the Chief Engineer (Minor Irrigation and P. H. Engineering).

Sri K. Abdul Subhan.—The hon. Minister has been pleased to inform us that the proposal for sinking borewells has been given up because of an agitation by the raiyats. There is one more proposal to sink borewells. If an agitation were to come from the raiyats, may I know the attitude of the Government ?

Sri B. Basavalingappa.—As the hon. member comes from that area, he may just persuade the people who are agitating against tapping of water from Mydala tank not to do so. The Government has no objection to take up the scheme at any time. Since the people are agitating against tapping of water from this source, we have to resort to sinking of borewells.

Sri Abdul Khuddus Anwar.—When are you going to take up the work of sinking of borewells ?

Sri B. Basavalingappa.—We will take up that work soon.

(ii) re: Acute scarcity of water in Gulbarga City.

Sri Mallikarjuna Kharge.—(Gurmitkal) I call the attention of the Minister for Municipal Administration to the acute scarcity of water in Gulbarga City.

B. Basavalingappa.—(Minister for Municipal Administration).—I state as follows.

The present population of Gulbarga City is 1.43 lakhs. Water is supplied to the City from Bhosga Tank, the main source of water supply to the extent of 9 lakns gallons per day. It is further augmented to an extent of 5 lakhs gallons per day from 36 borewells in different areas of the City. Thus it works out to 10 gallons per capita per day.

The water supply position in some parts of the City is detailed below:

1. Station Area:

There are 5 borewells in this area which yield one lakh gallons per day for a population of 15,000. The per capita supply works out to 6.7 gallons per day.

2. Mill Area:

There was shortage of water supply in this area. Hence a borewell was commissioned recently which yields 5,000 gallons per hour and water is being pumped for 8 hours daily. The per capita supply in this area is 8 gallons per day.

3. Harijan Colony (Weaker Section Colony) :

At present 10 borewells are working in this area having a total yield of 10,000 gallons per hour and pumping is being done for 8 hours daily.

4. Station Dwelling Area:

One borewells is provided in this area having an yield of 1,500 gallons per hour. The water is being pumped for 8 hours daily for a population of 3,000. The per capita supply works out to 4 gallons per day.

Thus it is seen that all the localities are getting minimum drinking water supply needs while for the City on an average the per capita supply is nearly 10 gallons per day, which cannot be said as unsatisfactory.

In addition to the present water supply arrangements a scheme costing Rs. 89.68 lakhs for the 2nd stage water supply, with Manjra River as source, is under execution. With the completion of this scheme, it is proposed to supply 25 gpcd. for a prospective population of 2 lakhs.

Sri Mallikarjuna Kharge.—Sir, the Hon. Minister has informed us that 10 borewells are working in the Harijan Colony. Though the hon. Minister has ordered for digging of 10 borewells in Harijan colony the water tap connection has been given to other areas but not to the Harijan colony. May I know whether this fact has come to the notice of the Hon. Minister ?

Sri B. Basavalingappa.— Since the information has been given to me just now, I shall examine it and set right the matter.

(iii) re: Acident at Doddipally and Arabikothanur villages.

Sri C. Byre Gowda (Vemgal).—I call the attention of the Minister for Revenue to the fire accident at Doddipally and Arabikothanur villages.

Sri N. Hutchmasthy Gowda.—(Minister for Revenue) I state as follows.

There was an accidental fire at Arabikothanur village Kolar Taluk on 15-1-1973 as a result of which houses of the following 8 persons were gutted in fire.

Sriyuths:

1. Hanumappa, son of Munishami.
2. Sall Balappa son of Munishami
3. Erappa son of Kuntappa.
4. Hanumappa son of Munishamappa.
5. Chinnappa son of Kenchappa.
6. Kenchappa son of Munishamappa
7. Pillappa son of Lakshamanna ; and
8. Venkatagiri son of Munishami.

It is stated that these persons had been to the fields at the time of fire. They tried their level best to put off the fire and the Patel also phoned to the Fire Brigade,Bangalore. By the time the fire brigade reached the village the houses were gutted and the food grains, clothes, jewels were lost in the fire. The loss is being estimated by the Local Officers and necessary cash relief will be paid to the sufferers as per Rules.

There was an accidental fire at Doddipally Village, Bagepally Taluk on 11-2-1973 as a result of which ten thatched huts and live stock belonging to the following persons were destroyed.

Name of Sufferers	Live Stock
Sriyuths :	
1. Bayappa son of Byreddy	Hens—97
2. Peddakadirappa son of Erappa	Sheep—34
3. Chinnakadirappa son of Erappa	Goat—4
	Cows—3
	Calf—1
4. Nanjappa son of Subbanna	Bullocks—2
	Buffalow—1
5. Cheemala Muthanna	—
6. Pedda Venkata	—
7. Kogara Peddanna	—
8. Yeddala Chinnamma	—
9. Kogara Byappa	—
10. Papamma wife of Venkatarayappa	—

The live stocks noted above were killed in the said fire accident which are stated to belong to the sufferers. There is no loss of human life in the accident. The loss is being estimated by the Local Officers. Necessary cash relief will be sanctioned to the sufferers as per rules.

Powers have been delegated to the Revenue Officers to grant relief to victims of natural calmities as noted below:

(a) In case of loss upto Rs. 200	full extent
(b) In case the loss is more than Rs. 200 but not more than Rs. 1,000	50 per cent of the loss subject to a minimum of Rs. 200
(c) In case the loss exceeds Rs. 1000	Rs. 500

The cash relief indicated above will be in addition to the grant where necessary of building materials of the value not exceeding Rs. 300.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೇ, ಇದು ಬಹಳ ಬೇಜವಾಬ್ದಾರಿಯುತವಾದ ಹೇಳಿಕೆಯಾಗಿದೆ. ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಇಂತಹ ಒಂದು ಅಪಘಾತವಾಗಿದ್ದರೂ ಸಹ ಇಲ್ಲಿಯವರಿಗೆ ಪರಿಹಾರ ಕೊಟ್ಟಿಲ್ಲ. ಮನೆ ಕಳೆದುಕೊಂಡವರ ಪೈಕಿ ಬಡವರಿದ್ದಾರೆ, ಹರಿಜನರಿದ್ದಾರೆ. ಸರ್ಕಾರ ಅವರಿಗೆ ಯಾವ ರೀತಿಯ ಪರಿಹಾರವನ್ನು ಒದಗಿಸದೇ ಇರುವುದರಿಂದ ಅವರು ಇಂದು ಬೀದಿ ಪಾಲಾಗಿದ್ದಾರೆ. ದಯವಿಟ್ಟು ತಾವು ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಈಗ ಕೋಲಾರ ತಾಲೂಕಿನಲ್ಲಿ ಏನು ನಷ್ಟವಾಗಿದೆ ಆ ಬಗ್ಗೆ ಇಲ್ಲಿ it is being estimated ಎಂದು ಹೇಳಿದ್ದಾರೆ. ಅದನ್ನು ಮಾಡಲು ನೂರು ವರ್ಷ ಬೇಕೇ ಎಂದು ಕೇಳುತ್ತೇನೆ. ರೂಲ್ಸ ಆಂಡ್ ಪ್ರೊಸೀಜರನ್ನು ಮಂತ್ರಿಗಳು ಇಲ್ಲಿ ನಮಗೆ ಹೇಳುತ್ತಾರೆ. ಅದು ನಮಗೂ ಗೊತ್ತಿದೆ. ಪರಿಹಾರ ಕೊಡುವುದಿದ್ದರೆ ಯಾವಾಗ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರು ರೂಲ್ಸನ್ನು ತಿಳಿದುಕೊಂಡಿದ್ದರೆ ಕಾಲಿಂಗ್ ಅಟೆನ್‌ಷನ್ ನೋಟೀಸು ಕೇಳಬೇಕಾಗಿರಲಿಲ್ಲ. ಆದರೆ ಇಲ್ಲಿ ತಡವಾಗಿದೆ ಎಂಬುದನ್ನು ಒಪ್ಪುತ್ತೇನೆ. ಇದು ಹಿಂದೆ ಕೊಟ್ಟಿರುವ ಉತ್ತರ. ಇತ್ತೀಚಿನ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡಿದೆ; ಆದರೆ ಆಗಲಿಲ್ಲ. ಸೂಕ್ತ ಕಾರ್ಯಕ್ರಮ ಕೈಕೊಳ್ಳುವಂತೆ ನಾನು ಜಿಲ್ಲಾಧಿಕಾರಿಯವರಿಗೆ ಫೋನ ಮೂಲಕ ತಿಳಿಸುತ್ತೇನೆ ಮತ್ತು ಇನ್ನು ೮ ದಿವಸದೊಳಗೆ ಏನು ಕೊಡುವುದಕ್ಕೆ ಸಾಧ್ಯವೋ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

WITHDRAWAL OF STRIKE BY THE HOUSE SURGEONS

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಮಾನ್ಯ ಅಧ್ಯಕ್ಷರಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳಬೇಕು. ನಾನು ನಿನ್ನೆಯದಿವಸ ಮೈಸೂರಿಗೆ ಹೋಗಿ ಬಂದೆ. ಸಮಯ ಇಲ್ಲದ್ದರಿಂದ ನೋಟೀಸ್ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದ ಕಾರಣ ತಮ್ಮ ಅನುಮತಿ ಪಡೆದು ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಹೌಸ್-ಸರ್ಜನ್ಸ ವಿಷಯ ನಿನ್ನೆ ದಿವಸ ಇಲ್ಲಿ ಚರ್ಚೆಯಾಗಿದೆ. ಆ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಿನ್ನೆ ಮಾನ್ಯ ಸದಸ್ಯರು ಮಾತನಾಡುವಾಗ ಆಸ್ಪತ್ರೆಗಳಲ್ಲಿ ಬೆಡ್‌ಗಳು ಖಾಲಿಯಾಗಿವೆ, ರೋಗಿಗಳನ್ನು ಹೌಸ್ ಸರ್ಜನಗಳು ಶಡೆಯುತ್ತಿದ್ದಾರೆ, ಒಳಗೆ ಕೆಲಸ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ನಾನು ಕಣ್ಣಾರೆ ನೋಡಿದ್ದನ್ನು ಹೇಳಬೇಕೆಂದರೆ ಎಮರ್ಜೆನ್ಸಿ ವಾರ್ಡಿನಲ್ಲಿ ಕೆಲಸ ಸರಿಯಾಗಿ ನಡೆಯುತ್ತಿದೆ ಮತ್ತು ಆಪರೇಷನ್ ಥಿಯೇಟರಿನಲ್ಲಿ ಸಹ ಕೆಲಸವಾಗುವ ಗುವುದಕ್ಕೆ ಹೌಸ್ ಸರ್ಜನಗಳು ಸಹಾಯಕರಾಗಿದ್ದಾರೆ. ಆದಕಾರಣ ಇವೊತ್ತು ಅವರು ಬೇಕೋ ಬೇಡವೋ ಎನ್ನುವ ವಿರಸ ವಾತಾವರಣ ಏನು ಕಲ್ಪನೆಯಾಗಿದೆ, ಆ ಒಂದು ಪರಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡ

ಬೇಕು. ಅವರು ೨೪ ಗಂಟೆಯೊಳಗೆ ತಮ್ಮ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳದಿದ್ದರೆ ಟಫ್ ಲೈನ್ ತೆಗೆದುಕೊಳ್ಳುವುದಾಗಿ ತಾವು ನಿನ್ನೆಯ ದಿವಸ ಹೇಳಿದ್ದೀರಿ.

ತಾವು ಈ ರೀತಿಯ ಒಂದು ಅಪ್ರೋಚ ತೆಗೆದುಕೊಂಡರೆ ಅದು ಸಹಕಾರಿಯಾಗಲಾರದು ಎಂದು ನಾನು ಹೇಳಬೇಕಾಗಿದೆ. ಅವರು ತಮ್ಮ ಹತ್ತಿರ ಮಾತನಾಡಿದ್ದಾರೆ. ತಮ್ಮ ಕಷ್ಟಸುಖಗಳನ್ನು ಅವರು ಹೇಳಿಕೊಂಡಿದ್ದಾರೆ. ಅದು ಏಕೋ ಬಗೆಹರಿಯಲಿಲ್ಲ. ಅದು ಟೆಕ್ನಿಕಲ್ ಪ್ರಶ್ನೆ, ಅವರು ಇನ್ನೂ ಪೂರ್ತಿ ಡಾಕ್ಟರಾಗಿಲ್ಲ ಎತ್ಕೊಸ್ಕರ ಅವರಿಗೆ ಪರಿಹಾರ ಕೊಡಬೇಕು ಎನ್ನುವ ಪ್ರಶ್ನೆಯನ್ನು ತಾವು ಇಟ್ಟಿದ್ದೀರಿ ಎಂದು ಗೊತ್ತಾಯಿತು. ಹೌಸ ಸರ್ಜನಗಳು ಇಲ್ಲದಿದ್ದರೆ ಆಸ್ಪತ್ರೆಯಲ್ಲಿ ಕೆಲಸ ನಡೆಯುವುದಿಲ್ಲ.

ಅಧ್ಯಕ್ಷರು.— ಇದು ನಿನ್ನೆ ದಿವಸವೆಲ್ಲ ನಡೆದಿದೆ. ಮತ್ತೆ ಆ ಬಗ್ಗೆ ಭಾಷಣ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ನಿನ್ನೆಯ ದಿವಸ ಕೆ. ಸಿ. ಆಸ್ಪತ್ರೆಯಲ್ಲಿ ನೋಡಿದ್ದೇನೆ. ಅವರು ಸಹಕರಿಸಬೇಕಾದರೆ ಅವರಿಗೆ ಅನುಕೂಲ ಮಾಡಿಕೊಡಬೇಕು. ಬೇರೆ ರಾಜ್ಯಗಳಲ್ಲಿ ಕೂಡ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಅವರಿಗೆ ಅನುಕೂಲಮಾಡಿಕೊಡಬೇಕು. ಅವರಿಗೆ ಹಾಸ್ಟಲ್ ಕೊಟ್ಟಿದ್ದಾರೆ, ಆ ಹಾಸ್ಟೆಲುಗಳು ಯಾವರೀತಿ ಇವೆಯೆಂದರೆ ಆ ಹಾಸ್ಪೆಲುಗಳಲ್ಲಿ ಮಳೆ ಬಂದರೆ ನೀರು ಸೋರುತ್ತದೆ. It has been converted into so-called hostel for these House Surgeons. ಅವರು ಬಹಳ ನೊಂದಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೇನೆ. ತಪ್ಪು ಆಟಟ್ಯೂಡ ಸರಿಯಲ್ಲ; ಈ ಅಪ್ರೋಚ್ ತೆಗೆದುಕೊಳ್ಳುವ ಬದಲು ಅವರೊಡನೆ ಮಾತುಕತೆ ನಡೆಸಿ ಅದನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ತಮಗೆ ನಾವೂ ಸಹಕಾರ ನೀಡುತ್ತೇವೆ. ಅವರು ಸಿಕ್ಕಾಪಟ್ಟೆ ಮಂತ್ರಿಗಳ ಬಗ್ಗೆ ಹೇಳುತ್ತಾರೆ. ಮಂತ್ರಿಗಳ ಬಗ್ಗೆ ಹೇಳಿದರೆ ಪ್ರಯೋಜನವಾಗುವುದಿಲ್ಲ ಎಂದು ನಾನು ಅವರಿಗೆ ಹೇಳಿದ್ದೇನೆ. ಅವರು ಹೇಳುತ್ತಾರೆ ಮಾನ್ಯ ಮಂತ್ರಿಗಳು I hate the Doctor's; I hate the Doctor's profession ಎಂದು ಹೇಳಿದ್ದಾರೆ ಎಂದು ಹ್ಯಾಂಡ ಬಿಲ್‌ನಲ್ಲಿ ಹಾಕಿದ್ದಾರೆ. ಅವರು ಯಾವಾಗ ಆ ರೀತಿ ಹೇಳಿದರೋ ಗೊತ್ತಿಲ್ಲ. ಬಹುಷಃ ಅವರು ಆ ರೀತಿ ಹೇಳಿದ್ದರೆ ಅದು ಸರಿಯಲ್ಲ.

ಶ್ರೀ ಜೆ. ಎಲ್. ಕಬಾಡಿ.— ಅವರ ಬಗ್ಗೆ ಪರ್ಯಾಲೋಚನೆ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಕಳಕಳಿಯಿಂದ ಹೇಳಿದ್ದಾರೆ. ಆ ಪ್ರಶ್ನೆಯನ್ನು ಮತ್ತೆ ಎತ್ತಿದರೆ ಪ್ರಯೋಜನವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಆದಕ್ಕೆ ನಾನು ಆಡ್ಡಿ ಬರುವುದಿಲ್ಲ. ಆದರೆ ಮಾನ್ಯ ಮಂತ್ರಿಗಳು ಈ ರೀತಿ ತಪ್ಪು ಅರ್ಥದಲ್ಲಿ ತೆಗೆದುಕೊಂಡರೆ ಪ್ರಯೋಜನ ವಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.— ತಪ್ಪುದಾರಿಗೆ ಹೋದರೆ ?

ಶ್ರೀ ಎಂ. ಎಸ್. ಕೃಷ್ಣನ್.— ಸ್ವಲ್ಪಮುಟ್ಟಿಗೆ ತಾವು ಗಡಸುದಾರಿ ಹಿಡಿದಹಾಗೆ ಕಾಣುತ್ತದೆ. ೨೪ ಗಂಟೆಯಲ್ಲಿ ಅವರು ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ಅವರ ಜೊತೆಯಲ್ಲಿ ಮಾತುಕತೆ ನಡೆಸುವುದಿಲ್ಲ ಎಂದು ತಾವು ಹೇಳಿದ್ದೀರಿ ಎಂದು ಪತ್ರಿಕೆಯಲ್ಲಿ ಇವೊತ್ತು ಬಂದಿದೆ. ಆದನ್ನು ಓದಿದ್ದೇನೆ. ಈ ತರಹ ಅಪ್ರೋಚ ಎತಕ್ಕೆ ಇಟ್ಟುಕೊಳ್ಳಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).— ಈ ಬಗ್ಗೆ ಈಗಾಗಲೇ ನಿನ್ನೆಯ ದಿವಸ ಹೇಳಿದ್ದೇನೆ. I am really very sorry that Mr. Krishnan, an experienced and seasoned parliamentarian, should rake it up. I have made the position candidly clear yesterday. If they want to hold a pistol and ask me to come down I will be the last man to come down. I would like the hon. Member not to bring trade unionism here. Government knows its mind. The House has given its verdict. Every section of the House has agreed with me and I am grateful to them. I am not going to be cowed down by these methods. The only way is it come reasonably and have a talk.

Sri H. S. SIDDAPPA.— They don't come under the trade union...

Sri AZEEZ SAIT.— It is an essential service. Government is quite correct in its decision.

MADAM SPEAKER.— I request the hon. Member Sri Krishnan not to precipitate matters. Let it take its own course.

POSTPONEMENT OF REVENUE COLLECTION IN ARASIKERE

ಶ್ರೀ ಎಚ್. ಎಸ್. ಸಿದ್ದಪ್ಪ (ಆರಸೀಕೆರೆ).— ಕಳೆದ ಶನಿವಾರ ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ ಕೊಟ್ಟಿದ್ದೆ. ಆಗ ನಮ್ಮ ತಾಲ್ಲೂಕಿನ ಬರಗಾಲ ಪ್ರದೇಶದಲ್ಲಿ ಜನಗಳು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಕಂದಾಯವನ್ನು ಪೋಸ್ಟಪೋನ ಮಾಡಬೇಕೆಂದು ನಾನು ಮನವಿಮಾಡಿಕೊಂಡಾಗ

ಆದನ್ನು ಕನ್‌ಸಿಡರ ಮಾಡುತ್ತೇವೆ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಹಾಗೇನೆ ಮಾನ್ಯ ಸಹಕಾರ ಮಂತ್ರಿಗಳು ರೈತರಿಗೆ ಕೊಟ್ಟರ ತಕ್ಕ ಪಾರ್ಟಟಮ್ ಲೋನನ್ನು ವಿೂಡಿಯಂ ಲೋನಾಗಿ ಕನವರ್ಟ ಮಾಡಿಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಮೊನ್ನೆ ೧೪ ಜನಗಳ ಮೇಲೆ ದಾವಾಹಾಕಿದ್ದಾರೆ. ಆ ಜನಗಳು ಹೊಟ್ಟಿಗಿಲ್ಲದೆ ತೊಂದರೆ ಪಡುತ್ತಿರುವಾಗ ಅವರ ಮೇಲೆ ದಾವಹಾಕಿದರೆ ಅವರ ಗತಿ ಏನು? ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು ಇವೊತ್ತು ಆ ಬಡ ಜನಗಳ ಮೇಲೆ ದಾವಾ ಹಾಕಿ ಅವರ ಮನೆಗಳನ್ನು ಜಪ್ತಿ ಮಾಡುವುದರಲ್ಲಿ ಅರ್ಥ ಇದೆಯೇ? ಈ ವಿಚಾರದಲ್ಲಿ ಸರ್ಕಾರ ವಿವೇಚನೆ ಮಾಡಬಾರದೇ?

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ನಿಮಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಮುಂಚೆ ಅವರು ದಾವಾ ಹಾಕಿರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಮೇಲೆ ಈ ರೀತಿಯಾಗಿದೆ.

ಅಧ್ಯಕ್ಷರು.— ಈಗ ನೀವು ವಿಷಯವನ್ನು ಹೇಳಿದ್ದೀರಿ. ನಾವು ಇದನ್ನು ಅವರಿಗೆ ತಿಳಿಸುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಾನು ಈಗ ಒಂದೂವರೆ ತಿಂಗಳ ಹಿಂದೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಆ ಸೂಚನೆ ಏನೆಂದರೆ....

ಅಧ್ಯಕ್ಷರು.— ಈಗ ಅದನ್ನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಹೇಳದೇ ಹೋದರೆ ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು.— ರೂಲ್ಸ್ ಪ್ರಕಾರ ನಾಳೆಯಿಂದ ಒಂದೊಂದೇ ವಿಷಯ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಇದು ಬಹಳ ಮುಖ್ಯವಾದದ್ದು.

ಅಧ್ಯಕ್ಷರು.— ಸಭೆ ಸೇರುವುದಕ್ಕೆ ಒಂದು ಗಂಟೆ ಮುಂಚೆ ನನ್ನ ಛೇಂಬರಿಗೆ ಬಂದು ಈ ಬಗ್ಗೆ ಮಾತನಾಡಿ. ಇಲ್ಲಿ ಸುಮ್ಮನೆ ಕಾಲವನ್ನು ಏತಕ್ಕೆ ಹಾಳು ಮಾಡುತ್ತೀರಿ.

SPREAD OF CHOLERA EPEDEMIC IN HASSAN DISTRICT ETC.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ನನ್ನ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳುವುದಕ್ಕೆ ಮುಂಚೆ ಮಾನ್ಯ ಆರೋಗ್ಯ ಸಚಿವರು ಇಲ್ಲೆ ಇರುವುದರಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ

ರಾಜ್ಯದ ಬಹುತೇಕ ಎಲ್ಲಾ ಕಡೆಗಳಲ್ಲೂ ಕಾಲರಾ ಎಪಿಡಮಿಕ್ ಹರಡುತ್ತಿದೆ. ಹಾಸನಾ ಜಿಲ್ಲೆಯಲ್ಲಿ ಕೂಡ ಕೆಲವು ಸಾವುಗಳು ಆಗಿವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಎಲ್ಲಾ ರೀತಿಯಿಂದಲೂ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಒಂದೊಂದು ಸಾರಿ ಕಷ್ಟವನ್ನು ಅನುಭವಿಸಿದ್ದೇವೆ. ಇನ್‌ಜಕ್ಷನ್ ಮಾಡುವುದಕ್ಕೆ ಅವರ ಹತ್ತಿರ ಸಂಬಂಧಪಟ್ಟ ಔಷಧೋಪಕರಣಗಳು ಇರುವುದಿಲ್ಲ. ವ್ಯಾಕ್ಸೆನ್ನಿಗೆ ಬರೆದಿದ್ದೇವೆ ಎಂದು ಡಿ. ಎಚ್. ಓ. ಹೇಳುತ್ತಾರೆ. ಜನಸಾಯುತ್ತಾರೆ. ಈಗ ರಾಜ್ಯದಲ್ಲಿ ಬಹುತೇಕ ಕಾಲರಾ ಹರಡುತ್ತಿದೆ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಈ ಬಗ್ಗೆ ಕ್ಯಟಗಾರಿಕಲ್ ಅಷ್ಯೂರೆನ್ಸ್ ಕೊಡಬೇಕು. ಈ ಕಾಲರಾವನ್ನು ತಡೆಗಟ್ಟುವುದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ. ಕೆ. ಎಚ್. ಹನುಮೇಗೌಡ (ಹಾಸನ).— ಹಾಸನದಲ್ಲಿ ಸುಮಾರು ೨೫ ಜನಗಳಿಗೆ ಕಾಲರಾ ಅಟ್ಯಾಕ್ ಆಗಿ ಆದರಲ್ಲಿ ೨–೩ ಜನ ಸತ್ತಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಅಲ್ಲಿ ಜನಗಳಿಗೆ ಎಲ್ಲರಿಗೂ ಇನಾಕ್ಯುಲೇಷನ್ ಮಾಡಿ ಅದನ್ನು ತಡಗಟ್ಟುವುದಕ್ಕೆ ಸೂಕ್ತಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿಹೋದರೆ ಕೊಂದರೆಯಾಗುತ್ತದೆ. ಈಗ ದಿನೇ ದಿನೇ ಈ ಕಾಯಿಲೆ ಹೆಚ್ಚುವ ಸಂಭವ ಇರುವುದರಿಂದ ಈ ಬಗ್ಗೆ ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು.

10-00 A. M.

†ಶ್ರೀ ಎಚ್. ಸಿದ್ದವೀರಪ್ಪ, (ಆರೋಗ್ಯ ಶಾಖೆಯ ಮಂತ್ರಿಯವರು).— ಮಾನ್ಯ ಸ್ನೇಹಿತರುಗಳು ಹೇಳಿದ್ದು ನಿಜವಿದೆ. ಮಳೆ ಇಲ್ಲದೆ ಕೆಲವು ಕಡೆ ಕುಡಿಯುವ ನೀರಿನ ಅಭಾವದಿಂದ ರೋಗ ಹರಡುವ ಸಂಭವ ಜಾಸ್ತಿ ಇದೆ. ಇದರ ಬಗ್ಗೆ ಸರ್ಕಾರ ಸೂಕ್ತವಾದ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದೆ. ಸುಮಾರು ಮೂರು ತಿಂಗಳ ಹಿಂದೆ ಈ ವರ್ಷದ ಪರಿಸ್ಥಿತಿಯನ್ನು ನಿರೀಕ್ಷಣೆ ಮಾಡಿ ಸಂಬಂಧಪಟ್ಟ ಡೈರೆಕ್ಟರಿಗೆ ಮತ್ತು ಜಾಯಿಂಟ್ ಡೈರೆಕ್ಟರವರಿಗೆ ಬೇಕಾದಷ್ಟು ವ್ಯಾಕ್ಸೆನುಗಳನ್ನು ತರಿಸಿಟ್ಟು ಪ್ರಿವೆಂಟಿವ್ ಮೆಜರ್ಸ್ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಹಾಗೆ ಏನಾದರೂ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಇದರ ಬಗ್ಗೆ ಕೆಲಸ ಮಾಡದಿದ್ದರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಉದಾಹರಣೆಗೆ ತುಮಕೂರಿನಲ್ಲಿ ಈ ರೀತಿ ಗ್ಯಾಸ್ಟ್ರೋ ಎಂಟಿಟಿಸ್ ರೋಗ ಬಂದಾಗ ಅವರಿಗೆ ಸರಿಯಾದ ಡೈರೆಕನ್ಸ್ ಕೊಟ್ಟಿದ್ದೇವೆ. I told them it is nonsense to assume that it is Gaster enteritis and told them to proceed on the assumption that it is Cholera and take preventive action. ಆದ್ದರಿಂದ ಇದರ ಬಗ್ಗೆ ಸಂಬಂಧಪಟ್ಟವರಿಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿರ್ದೇಶನಗಳನ್ನು ಕೊಟ್ಟಿದ್ದೇವೆ. ಈಗ ವೆಹಿಕ್ಯುಲರ್ ಪೊಸಿಶನ್ ಸಹ ಸರಿಯಾಗಿರುವುದರಿಂದ ಅವರು ಸರಿಯಾಗಿ ಕೆಲಸ ಮಾಡದಿದ್ದರೆ

ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಜಾಯಿಂಟ್ ಡೈರೆಕ್ಟರವರಿಗೆ ಹೇಳಿದ್ದೇವೆ. ಇವತ್ತು ಪುನಃ ತಾವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಅವರಿಗೆ ತಿಳಿಸುತ್ತೇವೆ. ಮಳೆ ಜಾಗ್ರತೆ ಬಾರದಿದ್ದರೆ, ಈ ರೋಗ ಹೆಚ್ಚಾಗಿ ಆಗತಕ್ಕಂತಹ ಸಿಂಪ್ಟಮ್ಸ್ ಎಲ್ಲಾ ಕಡೆಗಳಲ್ಲಿಯೂ ಇದೆ. ಅದರಲ್ಲೂ ಗುಲ್ಬರ್ಗ ಪ್ರದೇಶದಲ್ಲಿ ಮೂರು ನಾಲ್ಕು ತಿಂಗಳ ಹಿಂದೆ ಇದಕ್ಕೆ ಬೇಕಾದಂತಹ ಕ್ರಮ ತೆಗೆದುಕೊಂಡು ಬೇಕಾದಷ್ಟು ವ್ಯಾಕ್ಸಿನುಗಳನ್ನು ಸ್ಟಾಕ ಮಾಡಿಕೊಂಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಹಾಸನದ ಡಿ. ಎಚ್. ಓ. ರವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಬಂದಂತಹ ರೋಗಿಗಳ ಬಗ್ಗೆ ಸರಿಯಾದ ಗಮನ ಕೊಡದೆ ಬರೀ ಹಣ ಸಂಗ್ರಹ ಮಾಡುವುದರಲ್ಲಿಯೇ ತಲ್ಲೀನರಾಗಿರುತ್ತಾರೆ. ಅಂಥವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಸಿದ್ದವೀರಪ್ಪ.— ಹಾಸನದ ಡಿ. ಎಚ್. ಓ. ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ. ಅವರನ್ನು ಕೂಡಲೇ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಜ್ಞೆ ಮಾಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಬೇರೆ ಕಡೆಗಳಲ್ಲಿಯೂ ಸಹ ಡಾಕ್ಟರುಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ.

QUESTION OF PRIVILEGE AGAINST THE MINISTER FOR LABOUR

re : Purchase of chassis by the M. S. R. T. C. and Selection of a site for M. S. R. T. C. workshop at Raichur.

†ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಸಭಾಧ್ಯಕ್ಷಣಿಯವರೆ, ನಾನು ಮಾನ್ಯ ಸಾರಿಗೆ ಸಚಿವರು ಮಾನ್ಯ ಅಂದಾನಯ್ಯನವರ ಪ್ರಶ್ನೆಗೆ ಚಾಸಿಸ್ ಪರ್ಚೇಸ ಮಾಡುವುದರ ಬಗ್ಗೆ ಈ ಸಭೆಯಲ್ಲಿ ಕೊಟ್ಟಂತಹ ತಪ್ಪು ಉತ್ತರದ ಬಗ್ಗೆ ಒಂದು ಪ್ರಿವಿಲೆಜ್ ಮೋಷನನ್ನು ಎತ್ತಲು ತಮ್ಮ ಪರವಾನಿಗೆಯನ್ನು ಕೇಳುತ್ತೇನೆ. ಮಾನ್ಯ ಸಾರಿಗೆ ಸಚಿವರು ೨೩-೩-೧೯೭೩ ರಂದು ಅಂದಾನಯ್ಯನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಕೆಲವು ತಪ್ಪು ವಿವರಗಳನ್ನು ಕೊಟ್ಟು ಈ ಸಭೆಯ ಹಕ್ಕು ಭಾದ್ಯತೆಗಳಿಗೆ ಚ್ಯುತಿ ತಂದಿದ್ದಾರೆ. ಇದರ ಬಗ್ಗೆ ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಅರ್ಮುಗಂ ರವರು ಮತ್ತು ಮಾನ್ಯ ಶಾಮಣ್ಣನವರು ಒಂದು ಪ್ರಿವಿಲೆಜ್ ಮೋಷನನ್ನು ಕಳಿಸಿದ್ದೆವು. ಈ ನಿರ್ಣಯವನ್ನು ತೆಗೆದುಕ್ಕೊಳ್ಳುವುದಕ್ಕೆ ತಮ್ಮ ಪರವಾನಿಗೆಯನ್ನು ಕೇಳುವ ಸಂದರ್ಭದಲ್ಲಿ ನನಗೆ ದೊರೆತಿರತಕ್ಕಂತಹ ಕೆಲವು ಮಾಹಿತಿಗಳನ್ನು ಈ ಸಭೆಯ ಮುಂದಿಟ್ಟರೆ ಇದನ್ನು ಹಕ್ಕುಭಾದ್ಯತಾ ಸಮಿತಿಯವರು ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಮತ್ತು ಈ ಒಂದು

ನಿರ್ಣಯವನ್ನು ತಾವು ಪ್ರಿವಿಲೆಜ್ ಕಮೀಟಿಗೆ ಕಳುಹಿಸಲು ಒಪ್ಪಿಗೆ ಕೊಟ್ಟಸಂದರ್ಭದಲ್ಲಿ ನಾನು ನಮ್ಮಲ್ಲಿರುವ ಎಲ್ಲಾ ವಿಷಯಗಳನ್ನು ಅದಕ್ಕೆ ಒದಗಿಸಿ ಕೊಡಲು ತಯಾರಾಗಿದ್ದೇನೆ.

ಮಾನ್ಯ ಸಾರಿಗೆ ಸಚಿವರು ತಾ. ೨೬–೩–೧೯೬೩ ರಲ್ಲಿ ಶ್ರೀಮಾನ್ ಆಂದಾನಯ್ಯನವರ ಪ್ರಶ್ನೆಯ ಮೇಲೆ ಮಾನ್ಯ ಎಂ. ಎಸ್. ಕೃಷ್ಣನ್‌ರವರ ಉಪ ಪ್ರಶ್ನೆಗೆ ಮಂತ್ರಿಯವರು ಉತ್ತರ ಕೊಡುತ್ತಾ ಹೀಗೆ ಹೇಳಿದರು. ಅದು ಈ ರೀತಿ ಇದೆ.—

"ಶ್ರೀ ಎಂ. ಎಸ್. ಕೃಷ್ಣನ್.— ಎರಡನೆ ಪ್ರಶ್ನೆಗೆ ಉತ್ತರವಾಗಿ ಟೆಂಡರುಗಳನ್ನು ಕರೆಯುವ ಪ್ರಶ್ನೆಯು ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಅಂದರೆ ರೂಲ್ಸ್ ಪ್ರಕಾರ ಟೆಂಡರ ಕರೆಯುವ ಅವಶ್ಯಕತೆ ಇಲ್ಲವೇ ಅಥವಾ ಡಿ. ಜಿ. ಎಸ್. ಮತ್ತು ಡಿ ದರಗಳಲ್ಲಿ ಕೊಂಡುಕೊಂಡರೆ ದರಗಳಲ್ಲಿ ಕಡಿಮೆಯಾಗುತ್ತದೆಂದು ಅರ್ಥವೇ? They come under the direct stores purchase. There is an accepted rate all over the country. Is it not a fact that the Officers have not advised you to purchase this Dodge Chassis?

Sri AZEEZ SAIT.— I am not a purchasing authority. The Officers have not advised me like that.

Sri M. S. KRISHNAN.— Even much against the advice of the Officers *i. e.*, the technical officers, the Minister prevailed upon purchasing these chassis. Is it not correct?

Sri AZEEZ SAIT.— That is not a correct position. I do not know how the Hon. Member got this information. The position of the chassis is very acute. The Government of India recommended only for the purchase of Leyland and Benz which I did not agree. There was a joint meeting of officers in my chambers where the Chief Mechanical Engineer said they are also good engines and they could be purchased."

ಮಂತ್ರಿಯವರು ಕೊಟ್ಟ ಉತ್ತರದಲ್ಲಿ ಅಧಿಕಾರಿಗಳ ಜಾಯಿಂಟ ಸಭೆಯನ್ನು ಕರೆದು, ಟೆಕ್ನಿಕಲ್ ಆಫೀಸರ್ಸ್ ಸಹ ಅವುಗಳ ಒಳ್ಳೆಯ ಚಾಸಿಸ್ ಎಂದು ಹೇಳಿದ್ದಾರೆ ಎಂಬುದನ್ನು ಹೇಳಿದ್ದಾರೆ. ಮತ್ತೊಂದು ಕಡೆ ನಾನು ಪರ್ಚೇಸಿಂಗ್ ಅಥಾರಿಟಿ ಅಲ್ಲವೆಂದು ಹೇಳಿದ್ದಾರೆ. ಬಹುಶಃ ನಾನು ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದರೆ ಮಂತ್ರಿಯವರು ಏನು ತಪ್ಪು ಉತ್ತರ ಕೊಟ್ಟು ಈ ಸಭೆಯನ್ನು ತಪ್ಪು ದಾರಿಗೆ ಎಳೆದಿದ್ದಾರೆಂದು ಅರ್ಥವಾಗುತ್ತದೆ.

106th Meeting held on 11th July 1972. ಈ ರೀತಿ ಇದೆ:—

"Subject : No. 30 : Purchase of Dodge, Fargo and Bed Ford Chassis — Proposals.

Resolved on No. 2208. The note and the implications were fully considered by the Board in view of the shortage of chassis. Resolved that the Chairman and the Vice-Chairman were authorised to purchase 3 chassis of Fargo Make from M/s Sundaram Motors Private Limited, Bangalore and 3 numbers of Dodge Chassis from M/s Karnataka Corporation, and 7 numbers of Bedford Chassis from M/s India Garage, Mangalore on such terms and conditions as may be decided in consultation with the Chief Mechanical Engineer, the Chief Accounts Officer and the Controller of Stores purchases."

This is the first resolution on 11th July 1972.
The second resolution is on 9th August 1972.

"Subject No.15 : Consideration of the proceedings of the Meeting held in the Chambers of the Hon. Minister for Transport and Tourism, Government of Mysore, on 13-7-1972 and 18-7-1972 regarding the purchase of Bedford and Fargo Chassis.

This was taken up as an additional subject. The Board reviewed the acute position arising due to the held up of non-supply of Leyland and Telco Chassis and the large number of chassis pending supplies and considered that Bed Ford, Dodge and Fargo chassis have to be purchased to meet the essential requirements and resolved that the Chairman and Vice-Chairman, Commissioner for Home Affairs and the Secretary to Government of Mysore, Home Department and the General Manager, to be empowered to purchase 50 numbers of Bed Ford Chassis from M/s India Garage, Bangalore, 25 numbers Dodge Chassis from M/s Canara Sales Corporation and 25 Fargo, Chassis from M/s Canara Industries. If either of these makes is not available, to make up the sanctioned number, any one of these makes

may be purchased subject to the general guidelines indicated in the note of the proceedings held in the Chambers of the Minister for Transport." On the same day, *i.e.*, 9th August 1972, after this Board Resolution, in the evening at about 4-45 P. M., the undermentioned members of the Board met the Hon'ble Minister for Transport in his chambers:—

1. Chairman,
2. Vice-Chairman,
3. Home Secretary,
4. General Manager,
5. Joint Secretary to Govt., Finance Department,
6. Transport Commissioner,
7. Sri C. J. Kamalani,
8. ,, Maqsood Ali Khan,
9. ,, K. Siddaiah,
10. ,, B. M. Rame Gowda,
11. ,, K. B. Mudunda Prabhu, and
12. ,, D. M. Shankarappa.

Again, the Resolution is like this :

"Several matters pertaining to the Corporation were discussed. Among other matters, the Board agreed after discussion with the Transport Minister in his chamber that for a proper evaluation of the newly offered Dodge and Bedford chassis proposed to be purchased to meet the shortage of the vehicles so urgently required-50 Dodge and 50 Bedford may be purchased". In the morning they decided to purchase 50 Bedford, 25 Bedford and 25 Fargo, but again in the evening in the chambers of the Minister for Transport it was decided that 50 Dodge and 50 Bedford chassis may be purchased after the matter regarding the terms and conditions *etc.*, are finalised by the Hon'ble Minister for Transport. The General Manager was empowered in the afternoon in the Minister's chamber only under the guide lines of the Hon'ble Minister for Transport. ಅದು ಕ್ಯಾಟಗಾರಿ ಕಲಿ ಆಗಿದೆ. Terms and conditions are to be finalised by the Hon'ble Minister for Transport ಎಂದು ಹೇಳಿದೆ. ಈ ಸಭೆಯಲ್ಲಿ ಹೇಳುತ್ತಾರೆ, ನನಗೆ ಪರ್ಚೇಜಿಂಗ ಅಥಾರಿಟಿ ಇಲ್ಲ, ಆ ರೀತಿಯಾಗಿ ಅಧಿಕಾರಿಗಳು

ನನಗೆ ಅಡ್ವೈಜ ಮಾಡಲಿಲ್ಲ ಎಂದು ಅವರ ಚೇಂಬರಿನಲ್ಲಿ ಜಾಯಿಂಟ್ ಮೀಟಿಂಗ ಆಫ್ ಆಫಿಸರ್ಸ ನಡೆದಿದೆ. ಬೋರ್ಡಿನಲ್ಲಿ ಇದರ ಬಗ್ಗೆ ತೀರ್ಮಾನವಾಗಿದೆ. ಅವರ ಉತ್ತರದಲ್ಲಿ ಇನ್ನೂ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:—

"The Government of India recommended only for the purchrse of Leyland and Benz". This he did not agree. "There was a joint meeting of officers in his chambers".... This is the reply given by the Minister. I suspect the *bonafides* of the Hon'ble Minister. ಬೋರ್ಡ ಮೀಟಿಂಗ ಅವರ ಅಧ್ಯಕ್ಷತೆಯಲ್ಲಿ ನಡೆದುದಾಗಿದೆ. ಇದೂ ಒಂದು. ಇನ್ನೊಂದು ವಿಷಯವನ್ನು ಹೇಳಿದ್ದಾರೆ.

